(ಗೊಂದಲ)

ಶ್ರೀ ಶಿವಾನಂದ ಎಸ್. ಪಾಟೀಲ್ :– ಅವರು ಬರುತ್ತಾರೆ, ನಾನು ಮಾತನಾಡುತ್ತೇನೆ

(ಗೊಂದಲ)

ಅಧ್ಯಕ್ಷರು :– ನಾನು ಬೆಳಿಗ್ಗೆ ಪ್ರಾಮಿಸ್ ಮಾಡಿದ್ದೇನೆ. ಈಗ ನೀವು ಶುರುಮಾಡಿ ನಂತರ ಕೊಡುತ್ತೇನೆ. ನಾನು ಲಂಚ್ ಆದಮೇಲೆ ಕೊಡುತ್ತೇನೆಂದು ಬೆಳಿಗ್ಗೆ ಅನೌನ್ಸ್ ಮಾಡಿದ್ದೇನೆ.

(ಗೊಂದಲ)

ಶ್ರೀ ಕೆ. ಆರ್. ರಮೇಶ್ ಕುಮಾರ್ :– ಈಗ 4 ಗಮನ ಸೆಳೆಯುವ ಸೂಚನೆಗಳಿವೆ ಇದಕ್ಕೆ ಹೆಚ್ಚು ಹೊತ್ತು ಆಗುವುದಿಲ್ಲ. ಅದರಲ್ಲಿ ಪ್ರಸ್ತಾಪ ಮಾಡುತ್ತಾರೆ, ಕ್ಲಾರಿಫಿಕೇಷನ್ ಕೇಳುತ್ತಾರೆ, ಬೇಗ ಮುಗಿಯುತ್ತದೆ.

(ಗೊಂದಲ)

ಅಧ್ಯಕ್ಷರು :– ಇಲ್ಲ ಇಲ್ಲ ಇದು ಒಂದು ಅರ್ಧಗಂಟೆ ಅಷ್ಟೆ. ಒಂದು ಗಂಟೆ ಎಂದು ಹೇಳಿದ್ದೆ. ಇದನ್ನು ಅರ್ಧಗಂಟೆಯಲ್ಲಿ ಮುಗಿಸಿ ಬಿಡೋಣ. ಆಮೇಲೆ ತೆಗೆದುಕೊಳ್ಳುತ್ತೇನೆ. ಶಿವಾನಂದ ಪಾಟೀಲ್‌ರೆ ನೀವು ಮಾತನಾಡಿ

(ಗೊಂದಲ)

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

ಅ) ವಿಷಯ : ರಾಜ್ಯದಲ್ಲಿರತಕ್ಕ ಕಬ್ಬಿನ ಬೆಳೆಗಾರರ ಸಂಕಟದ ಸ್ಥಿತಿ ಬಗ್ಗೆ.

ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) :– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿರತಕ್ಕಂಥ ಕಬ್ಬಿನ ಬೆಳೆಗಾರರ ಸಂಕಟದ ಸ್ಥಿತಿಯನ್ನು ಈ ಸರ್ಕಾರದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಸಕ್ಕರೆ ಸಚಿವರು ಸದನದಲ್ಲಿ ಈಗ ಇಲ್ಲ. ದಯಮಾಡಿ ತಾವು ಅವರನ್ನು ಕರೆಯಿಸಿಬಿಡಿ. ರಾಜ್ಯದಲ್ಲಿ ಸರ್ಕಾರಕ್ಕೆ ಒಂದು ವಿಷಯದ ಬಗ್ಗೆ ಮನವರಿಕೆಯಾಗಬೇಕಾಗಿತ್ತು. ಆದರೆ ಇದು ಆಗಿಲ್ಲವೆಂದು ನಾನು ಭಾವಿಸುತ್ತೇನೆ. ಇಡೀ ರಾಜ್ಯದ ಕಬ್ಬಿನ ಬೆಳೆಗಾರರು ಎದುರಿಸತಕ್ಕಂಥ ಸಂಕಟದ ಸ್ಥಿತಿಯನ್ನು ಮೇಲಿಂದ ಮೇಲೆ ಅನೇಕ ರೈತ ಸಂಘದ ಮುಖಂಡರು, ಕಬ್ಬು ಬೆಳೆಗಾರರು, ಮತ್ತು ಸಕ್ಕರೆ ಕಾರ್ಖಾನೆಯ ಮಾಲೀಕರು ಸಹ ಸರ್ಕಾರದ ಗಮನವನ್ನು ಸೆಳೆಯತಕ್ಕಂಥ ಪ್ರಯತ್ನ ಮಾಡಿದ್ದಾರೆ. ಜನ

ಪ್ರತಿನಿಧಿಗಳನ್ನು ಸೇರಿಸಿಕೊಂಡು ಎಲ್ಲರೂ ಸಾಕಷ್ಟು ಸರ್ಕಾರದ ಗಮನವನ್ನು ಸೆಳೆಯತಕ್ಕಂಥ ಪ್ರಯತ್ನ ಮಾಡಿದ್ದಾರೆ. ಆದರೆ ದುರ್ದೈವ ವಶಾತ್ ಸರಕಾರ ಇದ್ದು ಇಲ್ಲದಿರತಕ್ಕಂಥ ಸ್ಥಿತಿಯಲ್ಲಿ ನಟಿಸತಕ್ಕಂಥದ್ದು ನೋಡಿದರೆ, ಕಬ್ಬು ಬೆಳೆಗಾರರು ಶೋಚನೀಯ ಸ್ಥಿತಿಯಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ರಾಜ್ಯದಲ್ಲಿ ಮೂರು ಲಕ್ಷ ಅರವತ್ತು ಸಾವಿರ ಹೆಕ್ಟೇರ್‌ನಲ್ಲಿ ಕಬ್ಬನ್ನು ಬೆಳೆಯುತ್ತಿದ್ದೇವೆ. ಆದರೆ, ಬೆಳೆದಿರತಕ್ಕಂಥ ಕಬ್ಬನ್ನು ನುರಿಸತಕ್ಕಂಥ ಗುರುತರವಾದ ಜವಾಬ್ದಾರಿ ಸರ್ಕಾರದ್ದು ಇದೆ ಎಂದು ಮನವರಿಕೆ ಮಾಡಿಕೊಳ್ಳಬೇಕಾಗಿತ್ತು. ಆದರೆ, ಹಿಂದಿನ ಯಾವುದೇ ಸರ್ಕಾರ ಇಷ್ಟೊಂದು ಸಂಕಟಕ್ಕೆ ರೈತರನ್ನು ಸಿಕ್ಕಿಸಿರಲಿಲ್ಲ. ಆದರೆ ದುರ್ದೈವ ವಶಾತ್ ಇವತ್ತು ರೈತರ ಸರ್ಕಾರ, ರೈತರ ಕಷ್ಟಗಳಿಗೆ ಸ್ಪಂದಿಸುತ್ತೇವೆಂದು ಸರ್ಕಾರ ಮೇಲಿಂದ ಮೇಲೆ ಹೇಳಿ, ಇಡೀ ರಾಜ್ಯದ ರೈತರ ಅದರಲ್ಲೂ ವಿಶೇಷವಾಗಿ ಕಬ್ಬು ಬೆಳೆಗಾರರನ್ನು ಹೀನಾಯ ಸ್ಥಿತಿಗೆ ತಂದಿರತಕ್ಕಂಥ ಶೋಚನೀಯ ಪರಿಸ್ಥಿತಿಯನ್ನು ನೋಡಿದರೆ, ಸರ್ಕಾರ ಇದೆಯೋ ಅಥವಾ ಇಲ್ಲವೋ ಎನ್ನತಕ್ಕಂಥ ಭಯ ರೈತರಿಗಾಗಿದೆ. ಈ ಹಿನ್ನೆಲೆಯಲ್ಲಿ ಸಾಕಷ್ಟು ಬಾರಿ ವೈಯಕ್ತಿಕವಾಗಿ ಸಕ್ಕರೆ ಸಚಿವರನ್ನು ಎಲ್ಲಾ ಜನಪ್ರತಿನಿಧಿಗಳು ಕಂಡು ಮಾತನಾಡಿದ್ದಾರೆ. ಅವರು ಮೇಲಿಂದ ಮೇಲೆ ಹೇಳತಕ್ಕಂಥ ಭರವಸೆ ಏನೆಂದರೆ, ಜಿಲ್ಲಾಧಿಕಾರಿಗಳ ಜೊತೆಗೆ ನಾನು ಆದೇಶ ಮಾಡಿದ್ದೇವೆ, ಎಲ್ಲಾ ರೈತರ ಕಬ್ಬನ್ನು ನುರಿಸತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಆಡುತ್ತಾರೆಯೇ ವಿನಃ ಯಾವ ಜಿಲ್ಲಾಧಿಕಾರಿಯೂ ಕೂಡ ವಿಶೇಷವಾದ ಆಸಕ್ತಿ ವಹಿಸಿ ಯಾವ ಕಬ್ಬನ್ನು ಕೂಡ ನುರಿಸತಕ್ಕಂಥ ವ್ಯವಸ್ಥೆಯನ್ನು ಇಡೀ ರಾಜ್ಯದಲ್ಲಿ ಮಾಡಿಲ್ಲವೆಂದು ಸರ್ಕಾರದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಅದರಲ್ಲೂ ವಿಶೇಷವಾಗಿ ಇನ್ನೂ 65 ರಿಂದ 75 ಲಕ್ಷ ಟನ್ ಕಬ್ಬು ಹಾಗೆಯೇ ಬೆಳೆದು ನಿಂತಿದೆ. ಅವರ ಸ್ಥಿತಿ ಏನು ಎಂಬುದಾದರೂ ಕೂಡ ಇವರಿಗೆ ಮನವರಿಕೆಯಾಗಬೇಕಾಗಿತ್ತು. ಅದರಲ್ಲೂ ವಿಶೇಷವಾಗಿ ಬೇಸಿಗೆ ಕಾಲ ಬಂತು ಎಂದರೆ, ಕಬ್ಬಿನ ಸ್ಥಿತಿ ಹೀನಾಯ ಸ್ಥಿತಿಗೆ ಹೋಗುತ್ತದೆ. ಏಕೆಂದರೆ, ಕೆನಾಲ್‌ನಿಂದ ಕೊಡುವ ನೀರನ್ನು ನೀರಾವರಿ ಇಲಾಖೆಯವರು ನಿಲ್ಲಿಸುತ್ತಾರೆ. ಆ ನೀರು ನಿಲ್ಲಿಸಿದ್ದರಿಂದಾಗಿ ಬೆಳೆದಿರುವ ಕಬ್ಬಿನ ಸಕ್ಕರೆಯ ಅಂಶ ಕ್ಷೀಣೀಸುತ್ತಾ ಹೋಗುತ್ತದೆ. ಈ ರೀತಿಯಾಗಿ ಕ್ಷೀಣಿಸಿರುವ ಕಬ್ಬನ್ನು ಫ್ಯಾಕ್ಟರಿಗೆ ಕೊಟ್ಟರೆ ಈಗಿರತಕ್ಕಂಥ ಅದರ ವೇಟ್ ಏನು ಇರುತ್ತದೆ ಅದರ ಅರ್ಧದಷ್ಟು ವೇಟ್ ಗತಿಸಿ ಹೋಗತಕ್ಕಂಥ ಸ್ಥಿತಿ ಕೂಡ ಸರ್ಕಾರಕ್ಕೆ ಮನವರಿಕೆಯಾಗಿರಬಹುದು. ಏನೇ ನುರಿಸಿದರೂ ಏಪ್ರಿಲ್ ಕೊನೆಯ ಅವಧಿಯಲ್ಲಾದರೂ ಅಥವಾ ಕೊನೇಪಕ್ಷ ಮೇ ತಿಂಗಳಿನಲ್ಲಾದರೂ ಕಬ್ಬನ್ನು ನುರಿಸಿ ಕಬ್ಬು ಬೆಳೆದಿರುವ ರೈತರ ಸಂಕಟಕ್ಕೆ ಸರ್ಕಾರ ಸ್ಪಂದಿಸಬೇಕಾಗಿತ್ತು. ಆದರೆ, ದುರ್ದೈವದಿಂದ ಸರಕಾರ ಯಾವುದೇ ಕ್ರಮ ಕೈಗೊಳ್ಳದಿರುವುದು ಒಂದು ಕಡೆ. ಮತ್ತೊಂದು ಕಡೆ ಸಕ್ಕರೆ ಮಾಲೀಕರು ಕಬ್ಬು ಬೆಳೆಗಾರರನ್ನು ಯಾವೊಂದು ಶೋಚನೀಯ ಪರಿಸ್ಥಿತಿಗೆ

ತಂದಿದ್ದಾರೆಂದರೆ, ಇವತ್ತು ಕಬ್ಬಿನ Cost of cultivation ಏನು ಇದೆ, ಅದನ್ನು ತಾವು ಕೂಡ ಅಧ್ಯಯನ ಮಾಡಿರತಕ್ಕಂಥವರೆ ಮತ್ತು ಸರ್ಕಾರಕ್ಕೆ ಮನವರಿಕೆಯಾಗಿರತಕ್ಕಂಥದ್ದು, ಕಬ್ಬಿನ ಬೆಲೆ ಇವತ್ತಿನವರೆಗೆ ಘೋಷಣೆಯಾಗಿಲ್ಲ. ಯಾವುದೇ ಫ್ಯಾಕ್ಟರಿಯಲ್ಲಾಗಲಿ ನಿಶ್ಚಿತವಾಗಿ, private sugar industries ಇರಬಹುದು Co-operative sugar industries ಇರಬಹುದು, ಯಾರೂ ಕೂಡ ಇಷ್ಟು ನಿರ್ದಿಷ್ಟ ಧಾರಣೆಯನ್ನು ನಾನು ಕಬ್ಬು ಬೆಳೆಗಾರರಿಗೆ ಕೊಡುತ್ತೇನೆಂದು ಸ್ಪಷ್ಟ ಮಾತನ್ನು ಆಡಿಲ್ಲ. ಅಷ್ಟೇ ಅಲ್ಲ ಕೊಟ್ಟಿರತಕ್ಕಂಥ ಕಬ್ಬಿನಲ್ಲಿ, ನಾನು ಮಾತನಾಡಿದ ಮೇಲೆ ಶ್ರೀ ಎ.ಬಿ. ಪಾಟೀಲ್‌ರು, ಶ್ರೀರಾಮರೆಡ್ಡಿಯವರು ಇನ್ನು ಅನೇಕ ಜನ ಸದಸ್ಯರು ಮಾತನಾಡುವವರು ಇದ್ದಾರೆ. ಇವತ್ತು ಫ್ಯಾಕ್ಟರಿಯ ಮಾಲೀಕರು ಯಾವ ರೀತಿಯಾಗಿ ರೈತರನ್ನು ಸುಲಿಗೆ ಮಾಡುತ್ತಿದ್ದಾರೆಂದರೆ, 10 ಟನ್ ತೆಗೆದುಕೊಂಡು ವೇ ಬ್ರೀಡ್ಜ್‌ನಲ್ಲಿ ಕೊಟ್ಟರೆ ವೇ ಬ್ರೀಡ್ಜ್‌ನಲ್ಲಿ ಮೇಜರ್‌ಮೆಂಟ್ ಮಾಡಿ ಒಳಗೆ ಹೋಗುವುದರೊಳಗೆ 8 ಟನ್ ಮಾಡಿರುತ್ತಾರೆ. ಕಾರ್ಖಾನೆಯ ಮಾಲೀಕರು ರೈತರಿಗೆ ಇಷ್ಟೊಂದು ಸುಲಿಗೆ ಮಾಡುತ್ತಿದ್ದಾರೆ. ಕಬ್ಬನ್ನು ತೆಗೆದುಕೊಂಡು ನುರಿಸಿದ ಮೇಲೆ ಅವರಿಗೆ ವಿಶೇಷವಾಗಿ ಡಿಸಿಸಿ ಬ್ಯಾಂಕ್, ಕಮರ್ಷಿಯಲ್ ಬ್ಯಾಂಕ್ ಅಥವಾ ಅಪೆಕ್ಸ್ ಬ್ಯಾಂಕ್ ಇರಬಹುದು, ವರ್ಕಿಂಗ್ ಕ್ಯಾಪಿಟಲ್ ಅನ್ನು ಕೊಡುತ್ತಾರೆ. ಸಕ್ಕರೆ ಕಾರ್ಖಾನೆಯ ಮಾಲೀಕರು ಅಥವಾ ಕಾರ್ಖಾನೆಯವರು ಆ ವರ್ಕಿಂಗ್ ಕ್ಯಾಪಿಟಲ್‌ನ ಹಣವನ್ನು ತೆಗೆದುಕೊಳ್ಳುವಾಗ ಏನು ಹೇಳುತ್ತಾರೆಂದರೆ ಈ ಹಣವನ್ನು ನಾವು ನೇರವಾಗಿ ರೈತರಿಗೆ ಕಬ್ಬಿನ ಬೆಂಬಲ ಬೆಲೆಗಾಗಿ ಕೊಡುತ್ತೇವೆನ್ನುವ ಮಾತನ್ನು ಆಡುತ್ತಾರೆ ಆದರೆ ದುರ್ದೈವವಶಾತ್ ಆ ಹಣವನ್ನು ಕಾರ್ಖಾನೆ ಬೇರೆ ಬೇರೆ ಚಟುವಟಿಕೆಗಳಿಗೆ ಉಪಯೋಗಿಸಿಕೊಂಡು ರೈತರಿಗೆ ಆ ಕಬ್ಬಿನ ಕಂತನ್ನು ಕೊಡತಕ್ಕಂಥದ್ದನ್ನು ಕೂಡ ತಪ್ಪಿಸುತ್ತಿದ್ದಾರೆ. ಅದರಲ್ಲಿ ವಿಶೇಷವಾಗಿ ಸಾಕಷ್ಟು ಕಾರ್ಖಾನೆಗಳು ಕಬ್ಬನ್ನು ತೆಗೆದುಕೊಂಡ ಮೇಲೆ ಅದರ ಬೆಲೆಯನ್ನು ಕೊಡುವುದಕ್ಕೆ ಮೊದಲನೇ ಮಾಸ್ಟರ್ ಎರಡನೇ ಮಾಸ್ಟರ್ ಮೂರನೇ ಮಾಸ್ಟರ್ ಎಂದು ತೆಗಿಸಿ ಹಾಕುತ್ತಾರೆ. ಕನಿಷ್ಟ ಒಂದು ಟನ್ ಕಬ್ಬು ತೆಗೆದುಕೊಂಡ ಮೇಲೆ ಮೊದಲನೆ ಕಂತಾಗಿ 600 ರಿಂದ 800 ರೂಪಾಯಿಗಳನ್ನು ಕೊಡಬೇಕಾಗಿತ್ತು. ಆದರೆ ರಾಜ್ಯದಲ್ಲಿ ಇವತ್ತು ತೆಗೆದು ನೋಡಿದರೆ ಯಾವ ಕಾರ್ಖಾನೆಯವರು ಕೂಡ ಆ ದುಡ್ಡನ್ನು ರೈತರಿಗೆ ಕೊಟ್ಟಿಲ್ಲದಿರತಕ್ಕಂಥ ಸಾಕಷ್ಟು ಉದಾಹರಣೆಗಳಿವೆ. ನಮ್ಮಲ್ಲಿ ಇಂಥ ಒಂದು ಕಾರ್ಖಾನೆ ಇದೆ ಎಂದರೆ, ನವೆಂಬರ್‌ನಲ್ಲಿ ಕಬ್ಬು ತೆಗೆದುಕೊಂಡಿದ್ದಾರೆ, ಇವತ್ತು ಏಪ್ರಿಲ್‌ನಲ್ಲಿದ್ದೇವೆ, ಇವತ್ತಿನವರೆಗೆ ಒಂದು ಪೈಸೆ ಕೂಡ ರೈತರಿಗೆ ಪೇಮೆಂಟ್ ಆಗಿಲ್ಲ. ಹಿರೀಬೆನ್ನೂರು ಷುಗರ್ ಫ್ಯಾಕ್ಟರಿಯ ಬಗ್ಗೆ ನಾನು ಸಕ್ಕರೆ ಸಚಿವರಿಗೆ ಭೇಟಿಯಾಗಿ ಹೇಳಿದೆ, ಸಕ್ಕರೆ ನಿರ್ದೇಶಕರಿಗೆ ಹೇಳಿದೆ. ನಾವು ರಿಕವರಿ ಸರ್ಟಿಫೀಕೆಟ್ ಇಷ್ಯೂ ಮಾಡುತ್ತೇವೆಂದು ನಮ್ಮ ಮುಂದೆ ಹೇಳಿ ಆ ಕಾರ್ಖಾನೆಯವರಿಗೆ, ಇವರೇ ಹೇಳುತ್ತಾರೆ

ನೀವು ಹೈಕೋರ್ಟ್‌ಗೆ ಹೋಗಿ ಒಂದು ಆದೇಶ ತೆಗೆದುಕೊಂಡು ಬನ್ನಿ ಎಂದು. ಅದು ಸರಕಾರವನ್ನು ಪಾರ್ಟಿ ಮಾಡದೇ ಕೇಂದ್ರ ಸಕಾರವನ್ನು ಪಾರ್ಟಿ ಮಾಡಿ, ಅಲ್ಲಿ ಒಂದು ಸುಪ್ರೀಂಕೋರ್ಟು ಆರ್ಡರ್ ಇದೆ. ರೈತರಿಗೆ ಧಾರಣೆಯನ್ನು ಕೊಡಬೇಕಾದಂಥ ದೃಷ್ಟಿಕೋನದಿಂದ ಇವರಿಗೆ ಅರ್ಧದಷ್ಟು ಸಕ್ಕರೆಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಲಿಕ್ಕೆ ಅವಕಾಶ ಕೊಡಬೇಕೆನ್ನುವ ಒಂದು ಆದೇಶವಿದೆ. ಆ ಆದೇಶದ ದುರುಪಯೋಗ ಈ ರಾಜ್ಯದಲ್ಲಿ ಏಷ್ಟು ಆಗಿದೆ ಎಂದರೆ, ಅದನ್ನು ತೆಗೆದು ನೋಡಿದರೆ ತಮಗೆ ಗೊತ್ತಾಗುತ್ತದೆ. ಅದರಲ್ಲಿ ನನಗೆ ಒಂದು ಸಂಶಯ ಏನೆಂದರೆ, ಈ ಸಕ್ಕರೆಯ ಇಲಾಖೆಯ ನಿರ್ದೇಶಕರು ಕೋರ್ಟಿನಲ್ಲಿ ತಾವೇ ಒಂದು ಇಂಟೀರಿಯಂ ಅಪ್ಲಿಕೇಷನ್ ಹಾಕಿ ಅದನ್ನು ನಿಲ್ಲಿಸಬಹುದು. ಇವರು ಕಣ್ಣು ಮುಚ್ಚಿ ನೋಡಿಕೊಂಡು ಕುಳಿತುಕೊಳ್ಳುತ್ತಾರೆ. ಇವರೇ ಅವರ ಜೊತೆಗೆ ಶಾಮೀಲಾಗಿ ಆ ಸಕ್ಕರೆಯನ್ನು ಮಾರಿಕೊಳ್ಳಲಿಕ್ಕೆ ಅವಕಾಶ ಮಾಡಿ ಕೊಡುತ್ತಾರೆ. ಅವರು ಮಾರಿ ಕೊಂಡರೆ ಮಾರಿಕೊಳ್ಳಿ ಆ ಪೇಮೆಂಟ್ ಆದರೂ ರೈತರಿಗೆ ಮುಟ್ಟಬೇಕಲ್ಲವೇ? ಇದನ್ನು ಮುಟ್ಟದ ಹಾಗೆ ನೋಡಿಕೊಳ್ಳುವಂಥ ವ್ಯವಸ್ಥೆ ಕೂಡ ಸಕ್ಕರೆ ಇಲಾಖೆಯವರೆ ಮಾಡುತ್ತಿದ್ದಾರೆ. ನಾನು ಇದನ್ನು ಬಹಳ ನೇರವಾಗಿ ಆರೋಪಿಸುತ್ತಿದ್ದೇನೆ. ಇದಕ್ಕೆ ಬೇಕಾದ ಸಾಕಷ್ಟು ನಿದರ್ಶನಗಳು ನನ್ನಲ್ಲಿ ಇವೆ. ಹೈಕೋರ್ಟ್‌ನ ಆರ್ಡರ್‌ಗಳನ್ನು ಯಾವ್ಯಾವ ಕಾರ್ಖಾನೆಗಳವರು ತೆಗೆದುಕೊಂಡು ಯಾವ ರೀತಿ ರಿಲೀಸ್ ಆರ್ಡರ್ ಅನ್ನು ದುರುಪಯೋಗ ಮಾಡಿಕೊಂಡು ರೈತರಿಗೆ ಶೋಷಣೆ ಮಾಡುತ್ತಿದ್ದಾರೆ ಎನ್ನತಕ್ಕ ನಿದರ್ಶನ ಸಾಕ್ಷ್ಯಾಧಾರ ಸಮೇತವಾಗಿ ನನ್ನಲ್ಲಿ ಇವೆ. ಈ ವಿಷಯ ಮಾನ್ಯ ಅಧ್ಯಕ್ಷರಿಗೂ ಮತ್ತು ಮಾನ್ಯ ಉದಾಸಿಯವರಿಗೂ ಗೊತ್ತಿದೆ. ಅದರಲ್ಲಿ ನಿಮ್ಮ ನಿರ್ದೇಶಕರಿಗೆ ಗೊತ್ತಾಗುತ್ತದೆ. ಇವರು ಹೈಕೋರ್ಟ್‌ನಲ್ಲಿ ಒಂದು ಆರ್ಡರ್ ತೆಗೆದುಕೊಳ್ಳುತ್ತಿದ್ದಾರೆ ಎಂದು ಗೊತ್ತಿದ್ದರೂ ಇವರೊಂದು ಇಂಟೀರಿಯಂ ಅಪ್ಲಿಕೇಷನ್ ಹಾಕಿ ಪಾರ್ಟಿಯಾಗಿ ಹೋಗಬೇಕಲ್ಲವೆ? ಅದನ್ನು ಇವರು ಮಾಡದೇ ಮುಚ್ಚಿಟ್ಟು ಇವರೇ ಅವರನ್ನು ನೀವು ಹೈಕೋರ್ಟ್‌ಗೆ ಹೋಗಿ ಒಂದು ಆದೇಶ ತೆಗೆದುಕೊಂಡು ಬನ್ನಿ ಎಂದು ಕಳುಹಿಸುತ್ತಾರೆ. ಈ ರೀತಿಯಾಗಿ ಮಾಡಿ ಕಬ್ಬು ಬೆಳೆದಿರುವ ರೈತನ ಸ್ಥಿತಿ ಇವತ್ತು ಯಾವ ಮಟ್ಟಕ್ಕೆ ಬಂದಿದೆ ಎಂದರೆ, ಅವರು ಕೂಡ ಉರಳು ಹಾಕಿಕೊಳ್ಳತಕ್ಕಂಥ ಸ್ಥಿತಿಗೆ ಬಂದಿದ್ದಾರೆ. ತಮಗೆ ಗೊತ್ತಿರುವ ಹಾಗೆ, ಬೀದರ್‌ನಲ್ಲಿ ಅವರು ಮಾತನಾಡುತ್ತಾರೆ. ಬಿಜಾಪುರದಲ್ಲಿ ಆರು ಲಕ್ಷ ಟನ್ ಕಬ್ಬು ಬೆಳೆದು ನಿಂತಿದೆ. ಇಡೀ ರಾಜ್ಯದಲ್ಲಿ ಸುಮಾರು 60 ರಿಂದ 70 ಲಕ್ಷ ಟನ್ ಕಬ್ಬು ಹಾಗೆಯೇ ನಿಂತಿದೆ. ದುರ್ದೈವವಶಾತ್ ಸಕ್ಕರೆ ಇಲಾಖೆ ಇದೆಯೋ ಅಥವಾ ಇಲ್ಲವೋ? ನಾನು ಸಚಿವರ ಬಗ್ಗೆ ಎರಡು ಮಾತನಾಡುವುದಿಲ್ಲ. ಅವರು ಪ್ರಾಮಾಣಿಕವಾಗಿ ಮತ್ತು ವೈಯಕ್ತಿಕವಾಗಿ ಆಸಕ್ತಿಯನ್ನು ಹೊಂದಿರತಕ್ಕಂಥವರಾಗಿದ್ದಾರೆ. ಆದರೆ, ಆ ಇಲಾಖೆ ಏನು ಮಾಡುತ್ತಿದೆ ಎನ್ನತಕ್ಕಂಥದು

ನಮಗೆ ಆಶ್ಚರ್ಯದ ಸಂಗತಿಯಾಗಿದೆ. ಆ ಇಲಾಖೆಯವರು ಇದನ್ನು ನಡೆಸುವ ಬಗ್ಗೆ ಅಥವಾ ನಿಲ್ಲಿಸುವ ಬಗ್ಗೆ ಏನಾದರೂ ಮುತುವರ್ಜಿ ವಹಿಸುತ್ತಾರೆಯೇ? ಇದೊಂದು ಬಹಳ ಶೋಚನೀಯ ಸ್ಥಿತಿ ಏನೆಂದರೆ, ರಾಜ್ಯದಲ್ಲಿರತಕ್ಕಂಥ ಎಲ್ಲಾ ಸಹಕಾರ ಸಕ್ಕರೆ ಕಾರ್ಖಾನೆಗಳನ್ನು ಇವರು ಖಾಸಗಿಯವರಿಗೆ ಲೀಸ್ ಮಾಡಿಕೊಟ್ಟಿದ್ದಾರೆ. ಲೀಸ್ ಮಾಡಿಕೊಟ್ಟಿರುವ ಕತೆಯನ್ನು ತಾವು ಕೇಳಿದರೆ ನಾವೇ ಇವತ್ತು ದಾರಿ ತೋರಿಸಿದಂತಾಗಿದೆ. ಈ ರಾಜ್ಯದಲ್ಲಿ ಸಹಕಾರ ಸಕ್ಕರೆ ಕಾರ್ಖಾನೆಗಳು ಏಕೆ ಬಂದವೆಂದರೆ, ಖಾಸಗಿ ಸಕ್ಕರೆ ಕಾರ್ಖಾನೆಯ ಮಾಲೀಕರು ರೈತರನ್ನು ಶೋಷಣೆ ಮಾಡಬಾರದೆಂಬ ಏಕೈಕ ಉದ್ದೇಶದಿಂದ ನಾವು ಸಹಕಾರ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದ್ದೇವೆ. ನಮ್ಮಲ್ಲಿರುವ 22 ಸಹಕಾರ ಸಕ್ಕರೆ ಕಾರ್ಖಾನೆಗಳಲ್ಲಿ 18 ಕಾರ್ಖಾನೆಗಳನ್ನು ಲೀಸ್ ಮೇಲೆ ಕೊಟ್ಟು ಮುಗಿಸಿದ್ದಾರೆ. ಇನ್ನು 4 ಮಾತ್ರ ಉಳಿದಿವೆ. ಅವುಗಳನ್ನು ಯಾವಾಗ ಮುಚ್ಚುತ್ತೀರೋ ನನಗೆ ಗೊತ್ತಿಲ್ಲ. ಅದು ಭಗವಂತನ ಆಸೆ. ಅವುಗಳನ್ನು ಯಾವಾಗ ಮುಚ್ಚಿ ಒಳ್ಳೆಯ ಕೀರ್ತಿ ಪಡೆದುಕೊಳ್ಳುತ್ತೀರೊ ಅದಕ್ಕೆ ಆ ದೇವರೇ ಗತಿಯಾಗಬೇಕು. ಏಕೆಂದರೆ, ಒಳ್ಳೆಯ ಉದ್ದೇಶವನ್ನು ಇಟ್ಟುಕೊಂಡು ಸಹಕಾರ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದ್ದೇವೆ. ಆದ್ದರಿಂದ ತಾವು ಕ್ಯಾಬಿನೆಟ್‌ನಲ್ಲಿ ಕುಳಿತುಕೊಂಡು ಕೊನೇಪಕ್ಷ ಆ ಕಾರ್ಖಾನೆಗಳನ್ನು ರಿವೈವಲ್ ಆದರೂ ಮಾಡಬೇಕಾಗಿತ್ತು. ಕಾರ್ಖಾನೆಗಳನ್ನು ಮುಚ್ಚತಕ್ಕಂಥ ಒಂದು ಹುನ್ನಾರದ ವ್ಯವಸ್ಥೆಯನ್ನು ಸೃಷ್ಟಿ ಮಾಡಲಾಗಿದೆಯೇ? ಇವುಗಳನ್ನು ಲೀಸ್ ಮೇಲೆ ಕೊಟ್ಟರೆ ಒಳ್ಳೆಯದಾಗುತ್ತದೆಂದು ಮಾತನಾಡಿ ಖಾಸಗಿ ಕಾರ್ಖಾನೆಗಳ ಮಾಲೀಕರು ಇವುಗಳನ್ನು ಲೀಸ್ ಮೇಲೆ ತೆಗೆದುಕೊಳ್ಳುವಾಗ ಕಂಡಿಷನ್ ಮಾಡಿಕೊಂಡಿದ್ದಾರೆ. ಆದರೆ, ಅವುಗಳನ್ನು ಲೀಸ್ ಮೇಲೆ ತೆಗೆದುಕೊಂಡ ಮೇಲೆ. . . .

ಶ್ರೀ ಎ.ಬಿ. ಪಾಟೀಲ್ :- ಇಲ್ಲಿ ಮಾನ್ಯ ಸಕ್ಕರೆ ಸಚಿವರಿಲ್ಲ. ನಾವು ಯಾರಿಗೆ ಹೇಳಬೇಕು?

(ಗೊಂದಲ)

ಶ್ರೀ ಗೋವಿಂದ ಕಾರಜೋಳ :- ಏನು ತೊಂದರೆ ಇಲ್ಲ. ಇದಕ್ಕೆ ನಾವೇ ಉತ್ತರ ಕೊಡುವುದಕ್ಕೆ ತಯಾರಿದ್ದೇವೆ.

(ಗೊಂದಲ)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ಮಾನ್ಯ ಕಾರಜೋಳರವರು ಬೆಳಗಾಂನಲ್ಲಿಯೂ ಕೂಡ ಉತ್ತರ ಹೇಳಿದರು. ಆದರೆ, ಏನಾಗಲಿಲ್ಲ.

(ಗೊಂದಲ)

ಶ್ರೀ ಗೋವಿಂದ ಕಾರಜೋಳ :– ನಾವೇ ಉತ್ತರ ಹೇಳುತ್ತೇವೆ. ತಾವು ಮಾತನಾಡಿ, ಒಂದು ವೇಳೆ ನಮ್ಮ ಹತ್ತಿರ ಮಾಹಿತಿ ಇಲ್ಲದಿದ್ದರೆ ತರಿಸಿ ಹೇಳುತ್ತೇವೆ.

(ಗೊಂದಲ)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :– ಹಾಗಾದರೆ, ತಾವು ಆಹಾರ ಇಲಾಖೆಯ ಸಚಿವ ಸ್ಥಾನ ಬಿಟ್ಟು ಸಕ್ಕರೆ ಖಾತೆಯನ್ನು ವಹಿಸಿಕೊಳ್ಳಿ, ಆಗ ಸರಿಯಾಗುತ್ತದೆ. ನಾನು ಉತ್ತರ ಹೇಳುತ್ತೇನೆಂದು ಬೆಳಗಾಂನಲ್ಲಿಯೂ ಕೂಡ ತಾವು ಹೇಳಿದಿರಿ. ಬೆಳಗಾಂನಲ್ಲಿ ತಾವು ಉತ್ತರ ಕೊಟ್ಟಿದ್ದಕ್ಕೆ ಸಮಸ್ಯೆ ಬಗೆಹರಿಯಿತೇ?

ಶ್ರೀ ಗೋವಿಂದ ಕಾರಜೋಳ :– ಸನ್ಮಾನ್ಯ ಸಭಾಧ್ಯಕ್ಷರೆ, ಈ ವಿಷಯದ ಬಗ್ಗೆ ಚರ್ಚೆಯಾಗಲಿ. ಇದಕ್ಕೆ ಉತ್ತರ ಕೊಡುವುದಕ್ಕೆ ತಯಾರಿದ್ದೇನೆ.

(ಗೊಂದಲ)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :–ಕಬ್ಬಿನ ವಿಷಯ ಬಂದಾಗ ಮಾನ್ಯ ಕಾರಜೋಳರವರು ಎದ್ದು ನಿಂತುಕೊಂಡು ಮಾತನಾಡುತ್ತಾರೆ. ಬೆಳಗಾಂನಲ್ಲಿ ಕೂಡ ಅವರೇ ಮಾತನಾಡಿದ್ದಾರೆ. ಈ ಸಮಸ್ಯೆ ಅವರಿಂದ ಬಗೆ ಹರಿಯುತ್ತದೆಯೇ? ಸಮಸ್ಯೆ ಬಗೆಹರಿಯುದಿಲ್ಲ, ಆದ್ದರಿಂದ ಸುಮ್ಮನೆ ಉತ್ತರ ಕೊಟ್ಟರೆ ಏನು ಉಪಯೋಗ? ಸಮಸ್ಯೆ ಬಗೆಹರಿಯುವಂತೆ ಉತ್ತರ ಕೊಡಿ.

(ಗೊಂದಲ)

ಶ್ರೀಸಿ.ಎಂ. ಉದಾಸಿ :– ಮಾನ್ಯ ಪ್ರಕಾಶ್ ಹುಕ್ಕೇರಿಯವರು ಹಾಗೂ ಮಾನ್ಯ ಶಿವಾನಂದ ಪಾಟೀಲ್‌ರವರಿಗೆ ಹೇಳುವುದೇನೆಂದರೆ, ಸಕ್ಕರೆ ಸಚಿವರು ಇದಕ್ಕೆ ಉತ್ತರ ಕೊಡಬೇಕಾಗಿತ್ತು. ಅನಿವಾರ್ಯ ಕಾರಣದಿಂದ ಮೃತರಾಗಿರುವ ಸ್ವಾಮೀಜಿಯವರ ಅಂತ್ಯ ಸಂಸ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸುವುದಕ್ಕೆ ಹೋಗಿದ್ದಾರೆ. .

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :– ಅವರು ಇಲ್ಲದಿದ್ದರೆ ಸಹಕಾರ ಸಚಿವರಾದರು ಬರಬೇಕಾಗಿತ್ತಲ್ಲವೇ?

ಅಧ್ಯಕ್ಷರು :– ಈಗ ಅವರು ಮಾತನಾಡಲಿ.

(ಈ ಹಂತದಲ್ಲಿ ಮಾನ್ಯ ಡಿ.ಆರ್. ಪಾಟೀಲ್‌ರವರು ಅಧ್ಯಕ್ಷ ಸ್ಥಾನದಲ್ಲಿ ಉಪಸ್ಥಿತರಿದ್ದರು)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ಛೇರ್ಮನ್‌ರವರೆ, ನನಗೊಂದು ಅನುಮಾನ ಬರುತ್ತಿದೆ. ಬೆಳಿಗ್ಗೆಯಿಂದ ಇಲ್ಲಿ ಏನೋ ನಡೆಯುತ್ತಿದೆ. ವಿಧಾನ ಪರಿಷತ್ತಿನ ಛೇರ್ಮನ್ ಚುನಾವಣೆಗೆ ತಾವು ಅಭ್ಯರ್ಥಿಯನ್ನು ಹಾಕಿಲ್ಲ, ಅದರ ಪರಿಣಾಮ ಇಲ್ಲಿ ಏನಾದರು ನಡೆದಿದೆಯೇ? ಇಲ್ಲದಿದ್ದರೆ ನಿಮ್ಮ ಪರಿಸ್ಥಿತಿ ಇಲ್ಲಿ ಏನಾಗಿದೆ ಎಂಬುದನ್ನು ನೋಡಿ. ಹಿಂದೆ ಮತ್ತು ಮುಂದುಗಡೆ ಯಾರೂ ಇಲ್ಲ. ನಿಮ್ಮ ಪರಿಸ್ಥಿತಿ ಹೇಗಿದೆ ಎಂಬುದನ್ನು ನೋಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ನಿಮ್ಮ ಸಮ್ಮಿಶ್ರ ಸರ್ಕಾರದಲ್ಲಿ ದೊಡ್ಡ ಗೊಂದಲ ಏರ್ಪಟ್ಟಿದೆ. ತಾವು ಎಲ್ಲವನ್ನು ಮುಚ್ಚಿಡುತ್ತಿದ್ದೀರಿ. . . ನಿಮ್ಮ ಸರ್ಕಾರ ಭದ್ರವಾಗಿದೆಯೋ ಅಥವಾ ಇಲ್ಲವೋ ಎಂಬುದನ್ನು ನಾವು ಕೇಳುತ್ತಿದ್ದೇವೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಬೆಳಿಗ್ಗೆಯಿಂದ ಈ ಸದನಕ್ಕೆ ಗರ ಹೊಡೆದ ಹಾಗೆ ಇದೆ. ಯಾರು ಬಾಯಿ ಬಿಚ್ಚುತ್ತಿಲ್ಲ. ಮತ್ತೆ ಹಿಂದೆ ಮತ್ತು ಮುಂದೆ ಯಾರು ಇಲ್ಲ. ಕೌನ್ಸಿಲ್ ಛೇರ್ಮನ್ ಚುನಾವಣೆಗೆ ಒಬ್ಬರು ಮಾತ್ರ ನಾಮಿನೇಷನ್ ಮಾಡಿದ್ದಾರೆ. ಇಲ್ಲಿ 3 ಪಾರ್ಟಿಯಿದೆ ಮತ್ತೆ ಇಲ್ಲಿ ಸಮ್ಮಿಶ್ರ ಸರ್ಕಾರ ಇದೆ. ಅಲ್ಲಿ ಛೇರ್ಮನ್ ಎಲೆಕ್ಷನ್ ನಡೆದಿಲ್ಲವೆಂದು ಒಂದು ವಾರ ಈ ಸದನದ ಕಲಾಪ ಹಾಳಾಯಿತು. ಇವತ್ತು ಎಲೆಕ್ಷನ್ ಬಂದಾಗ ಮಾತ್ರ ಇವರ್‍ಯಾರು ನಾಮಿನೇಷನ್ ಹಾಕಿಲ್ಲ ಅದರ ಗುಟ್ಟಿನ ಪರಿಣಾಮ ಇಲ್ಲಿ ಆಗಿರಬೇಕು. ಆ ಗುಟ್ಟು ಏನೆಂಬುದನ್ನು ನಮಗಾದರು ಹೇಳಿ? ಛೇರ್ಮನ್‌ರ ಚುನಾವಣೆ ಮಾಡಬೇಕೆಂದು ಒಂದು ವಾರ ಈ ಸದನದ ಕಲಾಪ ಹೋಯಿತು, ಈಗ ನಾಮಿನೇಷನ್ ಹಾಕುವುದಕ್ಕೆ ಯಾರು ಪತ್ತೆ ಇಲ್ಲ. ಅಲ್ಲಿ ಒಂದೇ ಒಂದು ನಾಮಿನೇಷನ್ ಆಗಿದೆ. ಅದರ ಪರಿಣಾಮ ಏನಾದರೂ ಆಗಿದೆಯೇ?

ಶ್ರೀ ಎಸ್. ರಾಜೇಂದ್ರನ್ :– ನಾಳೆ ಗೊತ್ತಾಗುತ್ತದೆಂದು ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಇವತ್ತು ಮಧ್ಯಾಹ್ನ 12:30ಸಮಯ ಆಯಿತು. ಒಬ್ಬರೇ ನಾಮಿನೇಷನ್ ಹಾಕಿರುವುದು. ಆದ್ದರಿಂದ ಅದರ ಅರ್ಥ ಏನು? ನೀವು ಇಲ್ಲಿ ಕಿತ್ತಾಡಿ ಈ ಸದನದ ಕಲಾಪ ಒಂದು ವಾರ ಸರಿಯಾಗಿ ನಡೆಯಲಿಲ್ಲ. ಒಂದೇ ಒಂದು ಅರ್ಜಿ ಬಂದಿದೆ. ನೀವ್ಯಾರು ನಾಮಿನೇಷನ್‌ಗೆ ಅರ್ಜಿ ಹಾಕಿಲ್ಲ.

(ಗೊಂದಲ)

ಶ್ರೀ ಬಸವರಾಜ ಹೊರಟ್ಟಿ :– ಅಲ್ಲಿ ನಾವೇನು ಕಿತ್ತಾಡಿಲ್ಲ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :–ನಾವು ಬಹಳ ಸೀರಿಯಸ್ ಆಗಿ ಕೇಳುತ್ತಿದ್ದೇವೆ. ಛೇರ್ಮನ್ ಚುನಾವಣೆಯಾಗಲಿಲ್ಲವೆಂದು ಈ ಸದನದ ಕಲಾಪವನ್ನು ಒಂದು ವಾರ ನಡೆಸದೇ ಇರತಕ್ಕಂಥವರು ಅಲ್ಲಿ ನಾಮಿನೇಷನ್ ಅರ್ಜಿ ಹಾಕಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮುಂದಿನ ಹೊಂದಾಣಿಕೆಗೆ ಇವತ್ತು ನಾಂದಿ ಹಾಡಿದ್ದಾರೆ. ಮುಂದಿನ ಹೊಂದಾಣಿಕೆಗೆ ಇವತ್ತು ಹೆಜ್ಜೆ ಇಟ್ಟಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :–ಅದನ್ನಾದರೂ ಹೇಳಲಿ, ಸದನಕ್ಕಾದರೂ ಆ ವಿಷಯ ಗೊತ್ತಾಗಬೇಕಲ್ಲವೇ ಏಕೆಂದರೆ, ಆ ವಿಷಯ ಒಂದು ವಾರ ಸದನದ ಕಲಾಪವನ್ನು ನುಂಗಿದೆ. (ಗೊಂದಲ) ಅಲ್ಲಿ ನಾಮಿನೇಷನ್ ಮಾಡಿಲ್ಲ ಮತ್ತೆ ಇಲ್ಲಿ ಮಾನ್ಯ ಸಚಿವರಿಲ್ಲ.

(ಗೊಂದಲ)

ಶ್ರೀ ಸಿದ್ದು ಸವದಿ :–ಕಬ್ಬಿನ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ

(ಗೊಂದಲ)

ಛೇರ್ಮನ್ :–ಆ ಮನೆಯದು ಇಲ್ಲಿ ಚರ್ಚೆ ಮಾಡುವುದು ಬೇಡ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :–ಅಲ್ಲಿನ ವಿಷಯ ಚರ್ಚೆ ಮಾಡುತ್ತಿಲ್ಲ. ಇಲ್ಲಿರುವವರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. . .

(ಗೊಂದಲ)

ಶ್ರೀ ಸಿದ್ದು ಸವದಿ :– ಕಬ್ಬಿನ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಛೇರ್ಮನ್ :– ಈಗ ಸಮಯವಿಲ್ಲ. ಇನ್ನೂ 14 ಬಿಲ್‌ಗಳನ್ನು ತೆಗದುಕೊಳ್ಳಬೇಕಾಗಿದೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಎ.ಬಿ. ಪಾಟೀಲ್‌ರವರೆ, ತಾವು ಮಾತನಾಡಿ.

ಶ್ರೀ ಸಿದ್ದು ಸವದಿ :– ಕಬ್ಬಿನ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಎ.ಬಿ. ಪಾಟೀಲ್ :– ನಮ್ಮ ರೈತರು ಅಲ್ಲಿ ಸಾಯುತ್ತಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಬೇರೆ ವಿಷಯಗಳನ್ನು ಈಗ ಪ್ರಸ್ತಾಪ ಮಾಡುವುದು ಬೇಡ.

(ಗೊಂದಲ)

ಶ್ರೀ ಸಿದ್ದು ಸವದಿ :– ಕಬ್ಬು ಬೆಳೆದಂತಹ ರೈತರು ಸಂಕಷ್ಟದಲ್ಲಿದ್ದಾರೆ. ಕಬ್ಬನ್ನು ಯಾರು ತೆಗೆದುಕೊಳ್ಳುತ್ತಿಲ್ಲ. ಆದ್ದರಿಂದ ಕಬ್ಬಿನ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಬೇರೆ ವಿಷಯಕ್ಕೆ ಅವಕಾಶ ಕೊಡಬೇಡಿ. ಈಗ ಕಬ್ಬಿನ ಬಗ್ಗೆ ಚರ್ಚೆ ನಡೆಯುತ್ತಿದೆ. ಆದರೆ, ಇವರು ಬೇರೆ ಬೇರೆ ವಿಷಯ ಮಾತನಾಡುತ್ತಿದ್ದಾರೆ. ಮೊದಲು ಕಬ್ಬಿನ ಬಗ್ಗೆ ಮಾತನಾಡಿ. ಅನಂತರ ಉಳಿದ ವಿಷಯದ ಬಗ್ಗೆ ಮಾತನಾಡಿ. ಈ ರೀತಿಯಾಗಿ ನಡುವೆ ಎದ್ದು ನಿಂತುಕೊಂಡು ಮಾತನಾಡಬೇಡಿ.

ಶ್ರೀ ವಾಟಾಳ್ ನಾಗರಾಜ್ :– ಸಕ್ಕರೆ ಸಚಿವರೆ ಇಲ್ಲ. ನಾವು ಯಾರಿಗೆ ಹೇಳುವುದು?

ಛೇರ್ಮನ್ :– ನಾಲ್ಕು ಮಂದಿ ಮಾತನಾಡಿದ ಬಳಿಕ ಅವರು ಉತ್ತರ ಕೊಡುತ್ತಾರೆ. ಮಾನ್ಯ ಎ.ಬಿ. ಪಾಟೀಲ್‌ರವರೆ, ತಾವು ಮಾತನಾಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ನಾನು ಹೇಳುವುದೇನೆಂದರೆ, ಮಾನ್ಯ ಶಿವಾನಂದ ಪಾಟೀಲ್‌ರವರು ಬಹಳ ಜವಾಬ್ದಾರಿಯಿಂದ ಕಬ್ಬು ಬೆಳೆಗಾರರ ಬಗ್ಗೆ ಮತ್ತು ರೈತರ ಬಗ್ಗೆ ಇಲ್ಲಿ ಚರ್ಚೆ ಆರಂಭ ಮಾಡಿದರು. ನಾವೆಲ್ಲರೂ ಸಹಿ ಹಾಕಿದ್ದೇವೆ. ಆದ್ದರಿಂದ ನಾವೂ ಕೂಡ ಚರ್ಚೆಯಲ್ಲಿ ಭಾಗವಹಿಸಬೇಕಾಗಿದೆ. ಮತ್ತೆ ಮಾನ್ಯ ವೈಜನಾಥ್ ಪಾಟೀಲ್‌ರವರು ಇದರ ಬಗ್ಗೆ ಮಾತನಾಡುವುದಕ್ಕೆ ಬೇರೆ ಪತ್ರ ಕಳುಹಿಸಿಕೊಟ್ಟಿದ್ದಾರೆ. ನಾವೆಲ್ಲರೂ ಕೂಡ ರೈತರ ಹಿತದೃಷ್ಟಿಯಿಂದ ಮಾತನಾಡುತ್ತಿದ್ದೇವೆ. ನಾಳೆ ದಿವಸ ಸದನ ಮುಂದೂಡಲಾಗುತ್ತದೆ. ಆದ್ದರಿಂದ ಇವತ್ತು ಇದರ ಬಗ್ಗೆ ಸಮಗ್ರ ಚರ್ಚೆಯಾಗಬೇಕು. ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಇವತ್ತು ಸದನದಲ್ಲಿ ಇಲ್ಲ. ಮಾನ್ಯ ಮುಖ್ಯಮಂತ್ರಿಗಳಂತೂ ಇಲ್ಲಿ ಇಲ್ಲವೇ ಇಲ್ಲ. ನಾವು ಅವರನ್ನು ಹೊರಗಡೆ ಸಹ ನೋಡಿದೆವು, ಅಲ್ಲಿ ಕೂಡ

ಅವರು ಇಲ್ಲ. ಇವೆಲ್ಲವನ್ನು ನೋಡಿದಾಗ ನನಗೆ ಮತ್ತು ಮಾನ್ಯ ಶ್ರೀರಾಮರೆಡ್ಡಿಯವರಿಗೆ ಏನಾಗಿದೆ ಎಂದರೆ, ಸಮ್ಮಿಶ್ರ ಸರ್ಕಾರದ ಅಸ್ತಿತ್ವದ ಬಗ್ಗೆ ಎಲ್ಲಿಯೋ ಒಂದು ಕಡೆ ಚಿಂತನೆಯಾಗಿದೆ. ಆಯವ್ಯಯ ಮಂಡನೆಯಾದ ಮೇಲೆ ಇವರಲ್ಲಿ ತೀವ್ರವಾದಂಥ ಗೊಂದಲ, ಬಿರುಕು ಪ್ರಾರಂಭವಾಗಿದ್ದರಿಂದ ಇವರ ಅಸ್ತಿತ್ವದ ಬಗ್ಗೆ ಚಿಂತೆಯಾಗಿದೆ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಮುಖ್ಯಮಂತ್ರಿಯವರನ್ನು ಮತ್ತು ಉಪ ಮುಖ್ಯಮಂತ್ರಿಯವರನ್ನು ಮಾನ್ಯ ವಾಟಾಳ್ ನಾಗರಾಜ್‌ರವರೆ ಕರೆದುಕೊಂಡು ಹೋದರೆಂದು ನನಗೆ ಹೇಳಿದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ರೇವಣ್ಣನವರು ದೆಹಲಿಗೆ ಹೋಗಿ ಬಂದ ಮೇಲೆ ಈ ಪರಿಸ್ಥಿತಿ ನಿರ್ಮಾಣವಾಗಿದೆ. ಅವರು ಇವತ್ತು ಬೆಳಿಗ್ಗೆ ದೆಹಲಿಯಿಂದ ಬಂದಿದ್ದಾರೆ. ಅವರು ಅಲ್ಲಿಗೆ ಹೋಗಿ ಬಂದ ಮೇಲೆ ಈ ಪರಿಸ್ಥಿತಿ ನಿರ್ಮಾಣವಾಗಿದೆ.

ಛೇರ್ಮನ್ :– ಮಾನ್ಯ ಶಿವಾನಂದ ಪಾಟೀಲ್‌ರವರು ಮಾತನಾಡಿದ ಮೇಲೆ ತಾವು ಮಾತನಾಡಿ. ದಯವಿಟ್ಟು ಎಲ್ಲರೂ ಒಂದು ನಿಮಿಷ ಕುಳಿತುಕೊಳ್ಳಿ.

ಶ್ರೀ ಗೋವಿಂದ ಕಾರಜೋಳ :–ಮಾನ್ಯ ಛೇರ್ಮನ್‌ರವರೆ, ಮಾನ್ಯ ಪ್ರಕಾಶ್ ಹುಕ್ಕೇರಿಯವರು ಮಾತನಾಡುವಾಗ ನನ್ನ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ. ಅದು ರೆಕಾರ್ಡ್‌ಗೆ ಹೋಗಿದೆ. ಆದ್ದರಿಂದ ನಾನು ಅನಿವಾರ್ಯವಾಗಿ ಮಾತನಾಡಬೇಕಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ :– ಈಗ ಕಬ್ಬಿನ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಈಗ ರೈತರ ಸಮಸ್ಯೆ ಬಂದಿದೆ. ಮೊದಲು ಇದಕ್ಕೆ ಅವಕಾಶ ಕೊಡಿ.

ಶ್ರೀ ಗೋವಿಂದ ಕಾರಜೋಳ :–ಮಾನ್ಯ ಛೇರ್ಮನ್‌ರವರೆ, ಮಾನ್ಯ ಪ್ರಕಾಶ್ ಹುಕ್ಕೇರಿಯವರು ಮಾತನಾಡುವಾಗ ನನ್ನ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ. 2002–03 ನೇ ಸಾಲಿನಲ್ಲಿ ಮಾನ್ಯ ಪ್ರಕಾಶ್ ಹುಕ್ಕೇರಿಯವರು ಮಾನ್ಯ ಎಸ್.ಎಂ. ಕೃಷ್ಣರವರ ಸರ್ಕಾರದಲ್ಲಿ ಮಿನಿಸ್ಟರ್ ಆಗಿದ್ದರು. ಮಾನ್ಯ ಧರ್ಮಸಿಂಗ್‌ರವರ ಸರ್ಕಾರದಲ್ಲಿಯೂ ಕೂಡ ಅವರು ಇದ್ದರು.

3:30 ನಿಮಿಷ

ಆಗ 9.50 ಮತ್ತು 10 ರೂಪಾಯಿಗಳಿಗೆ ಕಿಲೋ ಸಕ್ಕರೆ ಮಾರಾಟವಾಯಿತು. ಆ ಸಂದರ್ಭದಲ್ಲಿ ಕಬ್ಬಿನ ನಾಡಿನಿಂದ ಬಂದವರು, ಸಕ್ಕರೆ ಜಿಲ್ಲೆ ಬೆಳಗಾಂ ಜಿಲ್ಲೆ ಕಾರ್ಖಾನೆಯವರಿಗೆ ಹಾಗೂ ರೈತರಿಗೆ ಎಷ್ಟು ಸಹಾಯವನ್ನು ಮಾಡಿದರು?

(ಗೊಂದಲ)

ಮಾನ್ಯ ಪ್ರಕಾಶ್‌ರವರೆ ನಾನು ಮಾತನಾಡುವುದು ಮುಗಿಯಲಿ, ಅವರು ನಂತರ ಹೇಳಲಿ, ಕೇಂದ್ರಸರ್ಕಾರದವರು ಸಕ್ಕರೆ ಕಾರ್ಖಾನೆಗಳು ಸಂಕಷ್ಟದಲ್ಲಿದ್ದಾಗ ಸಾಕಷ್ಟು ಕೊಟ್ಟಿದ್ದರು. ಆಗ ಅವರು ಕೇಂದ್ರಕ್ಕೆ ಸಾಕಷ್ಟು ಅಪ್ಲಿಕೇಷನ್‌ಗಳನ್ನು ಕಳುಹಿಸಲಿಲ್ಲ. ಈಗ ಇಲ್ಲಿ ಇದ್ದಾರಲ್ಲಾ ಪ್ರಕಾಶ್ ಹುಕ್ಕೇರಿಯವರು ಹಿಂದೆ ಮಂತ್ರಿಯಾಗಿದ್ದರಲ್ಲಾ ಆಗ ಇವರು ಬಾಯಿಯನ್ನು ಬಿಡಲಿಲ್ಲ. ಕೇಂದ್ರಸರ್ಕಾರದ್ದು, ಏನು ಸಹಾಯಬೇಕಾಗಿತ್ತು, ಅದರ ಬಗ್ಗೆ ಸದನದಲ್ಲಿ ಬಾಯಿಯನ್ನು ಸಹ ಬಿಡಲಿಲ್ಲ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ :- ಏನು ಬರಬೇಕಾಗಿದೆ ಅದನ್ನು ಮಾನ್ಯ ಶರದ್ ಪವಾರ್ ಕಡೆಯಿಂದ ನಾವು ಕೇಂದ್ರದಿಂದ ಹಣವನ್ನು ಬಿಡುಗಡೆ ಮಾಡಿಸಿದ್ದೇವೆ. ರಾಜ್ಯ ಸರ್ಕಾರದ ಕಡೆಯಿಂದ ಏನಾಗಬೇಕು. ಅಪೆಕ್ಸ್ ಬ್ಯಾಂಕ್‌ನಿಂದ ಏನು ಗ್ಯಾರಂಟಿ ಸಿಗಬೇಕಾಗಿದೆ. ಅದು ಯಾವುದೂ ಕೂಡ ಸಿಕ್ಕಿಲ್ಲ. ಅದು ಸಿಗುವಂತಹ ವ್ಯವಸ್ಥೆಯನ್ನು ನೀವು ಮಾಡಬೇಕು. ಶುಗರ್ ಡೈರೆಕ್ಟರ್ ಇದ್ದಾರೆ, ಅವರನ್ನು ಇಲ್ಲಿಯೇ ಬೇಕಾದರೆ ಕೇಳಿ. ನಿಮಗೆ ಅಪೆಕ್ಸ್ ಬ್ಯಾಂಕ್‌ನವರು ಯಾರು ಎಂದು ಗೊತ್ತಿಲ್ಲ. ತಾವು ಏನು ಮಾಡಬೇಕೋ ಅದನ್ನು ಮಾಡಿದ್ದರೆ ಕಾರ್ಖಾನೆಗಳು ಉದ್ಧಾರವಾಗುತ್ತಿತ್ತು.

ಛೇರ್ಮನ್ :- ಮಾನ್ಯ ಶಿವಾನಂದ ಪಾಟೀಲ್‌ರವರೆ ತಾವು ಯೀಲ್ಡ್ ಆಗಬೇಡಿ.

ಶ್ರೀ ಶಿವಾನಂದ ಎಸ್. ಪಾಟೀಲ್ :- ನಾನು ಮಾತನಾಡುತ್ತೇನೆಂದರೂ ಕೂಡ ಅವರು ಬಿಡುವುದಕ್ಕೆ ತಯಾರಿಲ್ಲ. ಮಾನ್ಯ ಕಾರಜೋಳರವರ ಮಾತನ್ನು ನಾನು ಒಪ್ಪುತ್ತೇನೆ. ಏಕೆಂದರೆ, ಅವರು ಸಹ ಕಬ್ಬಿನ ಕಾರ್ಖಾನೆಯ ಅಧ್ಯಕ್ಷರಾಗಿ ಸ್ವಲ್ಪ ದಿವಸ ಕಾರ್ಯ ನಿರ್ವಹಿಸಿದ್ದರು. ಅವರಿಗೆ ಮುತುವರ್ಜಿಯಿಲ್ಲವೆನ್ನುವಂತಹ ಮಾತನ್ನು ನಾನು ಒಪ್ಪುತ್ತೇನೆ. ನಿಮಗೆ ಮುತುವರ್ಜಿ ಮಾಡುವಂತಹ ಅವಕಾಶ ಸಿಕ್ಕಿದೆ. ಇವತ್ತು 22 ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ 18 ಅನ್ನು ಖಾಸಗಿಯವರಿಗೆ ಲೀಸ್ ಮೇಲೆ ಕೊಟ್ಟಿದ್ದಾರೆ. ಅದನ್ನು ತೆಗೆದುಕೊಂಡವರು ಇವತ್ತು ಏನಾದರೂ ರೈತರ ಹಿತದೃಷ್ಟಿಯಿಂದ ಕಾರ್ಖಾನೆಗಳನ್ನು ನಡೆಸುವಂತಹ ಉದ್ದೇಶ ಅವರಲ್ಲಿ ಇಲ್ಲ. ಹಾಗೆ ಕಾರ್ಖಾನೆಯನ್ನು ತೆಗೆದುಕೊಂಡ ಮು ಲಾಭವನ್ನು ಮಾಡಿಕೊಳ್ಳಲಿ, ನಾವು ಬೇಡವೆಂದು ಹೇಳುವುದಿಲ್ಲ. ಲಾಭ ಮಾಡಿಕೊಳ್ಳುವುದಕ್ಕೂ ಸಹ ಒಂದು ಇತಿ ಮಿತಿ ಇರಬೇಕು. ಆದರೆ ರೈತರನ್ನು ಶೋಷಣೆ ಮಾಡುವಂತಹ ಸ್ಥಿತಿಗೆ ಇವತ್ತು ತಂದಿಟ್ಟು, ಇವತ್ತು ತಾವು ತಮ್ಮ ಆತ್ಮವನ್ನು ಮುಟ್ಟಿಕೊಂಡು ಹೇಳಬೇಕು. ಯಾವ ಫ್ಯಾಕ್ಟರಿಯವರಾಗಲಿ ನಿರ್ದಿಷ್ಟವಾಗಿ ಕಬ್ಬಿನ ಬೆಂಬಲ ಬೆಲೆಯನ್ನು ಕೊಡುತ್ತೇವೆನ್ನುವಂತಹ ಮಾತನ್ನು ಆಡಿದ್ದಾರಾ? ಕಬ್ಬು ಬೆಳೆದ ರೈತರು ಸಂಕಷ್ಟಕ್ಕೆ ಸಿಕ್ಕಿದಾಗ ಕೊಬ್ಬರಿ ಬೆಳೆಗಾರರಿಗೆ ಇವತ್ತು ಸರ್ಕಾರದವರು ಬೆಂಬಲ ಬೆಲೆಯನ್ನು ಘೋಷಿಸಿದ್ದಾರೆ. ಆದರೆ ಕಬ್ಬು ಬೆಳೆಗಾರರು ಏನು ತಪ್ಪು ಮಾಡಿದ್ದಾರೆ.

ಇಡೀ ರಾಜ್ಯದಲ್ಲಿ 65 ಲಕ್ಷ ಟನ್ ನಷ್ಟು ಕಬ್ಬು ಬೆಳೆದು ಹಾಗೆಯೇ ನಿಂತಿದೆ. ನಿಮ್ಮ ಸಹಕಾರಿ ಸಚಿವರಂತೂ ದುರ್ದೈವವಶಾತ್ ಈಗ ಬಂದಿದ್ದಾರೆ. ಆ ಬಗ್ಗೆ ನಾನು ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆ ಸಹಕಾರಿ ಇಲಾಖೆಯನ್ನು ಸಮಾಪ್ತಿ ಮಾಡುವಂತಹ ಸ್ಥಿತಿಯನ್ನು ಸರ್ಕಾರದವರು ನೀವು ನಿರ್ವಹಿಸಿದ್ದೀರಿ. ಈಗ ಇರುವುದಷ್ಟು ಡಿಸಿಸಿ ಬ್ಯಾಂಕನ್ನು ಮುಚ್ಚಿಬಿಟ್ಟರೆ ಸಹಕಾರಿ ಇಲಾಖೆಯನ್ನು ಮುಚ್ಚುವುದು ಸೂಕ್ತವೆಂದು ಹೇಳುತ್ತೇನೆ. ಏಕೆಂದರೆ ಯಾವ ಡಿಸಿಸಿ ಬ್ಯಾಂಕ್ ಉಳಿಯುವಂತಹ ಸ್ಥಿತಿಯಲ್ಲಿ ಇಲ್ಲ. ಇವತ್ತು State Federation ಉಳಿಯುವಂತಹ ಸ್ಥಿತಿಯಲ್ಲಿ ಇಲ್ಲ. textile mills ನಿಲ್ಲಿಸುವುದು, ಇವತ್ತು ಸಕ್ಕರೆ ಕಾರ್ಖಾನೆಗಳು ಅಲ್ಲೋ ಇಲ್ಲೋ ಒಂದೆರಡು ಜೀವಂತವಾಗಿದ್ದವು, ಅವುಗಳನ್ನು ಮುಗಿಸುವಂತಹ ಸ್ಥಿತಿಯನ್ನು ಇವತ್ತು ಸೃಷ್ಟಿ ಮಾಡಿದ್ದಾರೆ. ಇದಕ್ಕೆಲ್ಲ ಒಂದಲ್ಲ ಒಂದು ದಿವಸ ಭವಿಷ್ಯದಲ್ಲಿ ತಾವೇ ನಿಂದನೆಗೆ ಗುರಿಯಾಗುತ್ತಿರೆನ್ನುವಂತಹ ಮಾತನ್ನು ಕೂಡ ನಿಮ್ಮ ಮನಸ್ಸಿನಲ್ಲಿ ಇರಬೇಕು, ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವಂತಹ ಉದ್ದೇಶವೆನಿತ್ತು ಎಂದರೆ ಈ private ನವರ ಜೊತೆ ಏನಾದರೂ ರೈತರು ಶೋಷಣೆಗೆ ಸಿಕ್ಕಾಗ, ಅವರ ನೆರವಿಗೆ ಬರುವಂತಹದ್ದು ಆಗಿದ್ದರೆ ಸಕ್ಕರೆ ಕಾರ್ಖಾನೆಗಳಿಗೆ ಇವತ್ತು ಈ ಸ್ಥಿತಿ ಉದ್ಭವವಾಗುತ್ತಿರಲಿಲ್ಲ. ಇವತ್ತು ಈ ಸರ್ಕಾರ ನೇರವಾಗಿ ಹೊಣೆಗಾರರು, ಇವತ್ತಿನ ಸರ್ಕಾರ ಇರಬಹುದು, ಹಿಂದಿನ ಸರ್ಕಾರವಿರಬಹುದು, ಯಾವತ್ತು ಇವರು ಕ್ಯಾಬಿನೆಟ್‌ನಲ್ಲಿ ಇಟ್ಟು private sugar mill ಅನ್ನು revive ಮಾಡದೇ ಅವುಗಳನ್ನು private ನವರ ಕೈಗೆ ಕೊಟ್ಟರು ಆವತ್ತಿನಿಂದ ಈ ಸ್ಥಿತಿ ಉದ್ಭವವಾಗಿದೆ. ಇಡೀ ರಾಜ್ಯದಲ್ಲಿ ಕಬ್ಬನ್ನು ಉಳಿಸುವುದಕ್ಕೆ ವ್ಯವಸ್ಥೆಯನ್ನು ಮಾಡಿಕೊಡುವುದು ಇಲ್ಲ. ಕಾರ್ಖಾನೆಯ ಮಾಲೀಕರುಗಳು ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಾರೆ. ನಾನು 600 – 700 ರೂಪಾಯಿಗಳನ್ನು ಕೊಡುತ್ತೇನೆ, ನೀನು 800 ರೂಪಾಯಿಗಳನ್ನು ಕೊಡುತ್ತೇನೆಂದು ಡಿಕ್ಲೈರ್ಡ್ ಮಾಡಬೇಡ ಎಂದು ಕಾರ್ಖಾನೆಯ ಮಾಲೀಕರುಗಳು ಮಾತನಾಡಿಕೊಳ್ಳುತ್ತಾರೆ. ಆ ರೈತರ ಕಬ್ಬನ್ನು ಕೊಟ್ಟು 4 – 4 ತಿಂಗಳು ಕಾಯುತ್ತಿದ್ದಾರೆ. ಇವತ್ತಿನವರೆಗೆ ಆ ರೈತರಿಗೆ ಹಣ ಸಂದಾಯವಾಗಿಲ್ಲ. ಇವತ್ತು 428 ರಿಂದ 500 ಕೋಟಿ ರೂಪಾಯಿಗಳು ಕಬ್ಬಿನ ಬಾಕಿ ಇದೆ. ಆ ಬಾಕಿಯನ್ನು ಕಾರ್ಖಾನೆಯ ಮಾಲೀಕರುಗಳು ಉಳಿಸಿಕೊಂಡರೆ ಇವರು ಕೊಡಿಸಿದ್ದು ಕೇವಲ 128 ಕೋಟಿ ರೂ.ಗಳು ಇನ್ನು ಕೆಲವು ಕಾರ್ಖಾನೆಗಳಂತೂ 10 ಪೈಸೆಯನ್ನು ಸಹ ರೈತರಿಗೆ ಕೊಟ್ಟಿಲ್ಲ. ಇಂತಹ ಸ್ಥಿತಿಯನ್ನು ಉದ್ಭವ ಮಾಡಿ ಇವತ್ತು ತಾವು ಏನು ಆಗಿಲ್ಲವೆಂದು ನೀವು ಕುಳಿತುಕೊಂಡರೆ ಭವಿಷ್ಯದಲ್ಲಿ ನಿಮ್ಮನ್ನು ಜನ ಏನೆಂದು ಹೇಳಿ ಮಾತನಾಡಿಕೊಳ್ಳುತ್ತಾರೆಂದು ನಿಮ್ಮ ಆತ್ಮವನ್ನು ನೀವೇ ಮುಟ್ಟಿ ನೋಡಿಕೊಳ್ಳಬೇಕು. ಒಂದು ಕಡೆ ಇವತ್ತು ಡಿಸಿಸಿ ಬ್ಯಾಂಕ್‌ನ ಸಾಲ ಮನ್ನಾ

ಮಾಡಿ ಎಂದು ಹೇಳುತ್ತೀರಿ. ಅದರ 10 ಪಟ್ಟು ಇವತ್ತು ಕಬ್ಬು ಬೆಳೆಯುವಂತಹ ಬೆಳೆಗಾರರಿಗೆ ಖರ್ಚು ಮಾಡಿ 25,000 ರೂಪಾಯಿಗಳನ್ನು ಬಿಡುತ್ತೀರಿ, ಕೇವಲ 2-3 ಎಕರೆಗೆ ಖರ್ಚಿನ ವ್ಯವಸ್ಥೆ ಕೂಡ ಆಗಿರುವುದಿಲ್ಲ. ಇವತ್ತು ತಾವು ಅಂತಹ ಸ್ಥಿತಿಯನ್ನು ಇಡೀ ರಾಜ್ಯದಲ್ಲಿ ಸೃಷ್ಟಿ ಮಾಡಿ, ಇವತ್ತು 3,60,000 ಹೆಕ್ಟೇರ್‌ನಷ್ಟು ಕಬ್ಬನ್ನು ಬೆಳೆದು ಅದರಲ್ಲಿ ಒಂದು ಕೋಟಿ ಕನಿಷ್ಟ 1 ಲಕ್ಷ ಹೆಕ್ಟೇರ್‌ನಲ್ಲಿ ಕಬ್ಬು ಹಾಗೆಯೇ ನಿಂತಿದೆ. ಇಂತಹ ಒಂದು ಸ್ಥಿತಿಯಲ್ಲಿಯೂ ಕೂಡ ಸರ್ಕಾರದವರು ಸ್ಪಂದಿಸದೇ ಹೋದರೆ ನಮಗೆ ಅನಿಸುತ್ತದೆ ಇವರು ಭವಿಷ್ಯದಲ್ಲಿ ಯಾವ ನಿಂದನೆಗೆ ಗುರಿಯಾಗುತ್ತಾರೆಂಬ ಮಾತನ್ನು ನಾನು ಇವತ್ತು ಸರ್ಕಾರ ಬಹಳ ಸ್ಪಷ್ಟವಾಗಿ ಹೇಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಸಹಕಾರಿ ಕಾರ್ಖಾನೆಗಳ ಒಕ್ಕೂಟದವರು ತಮ್ಮಲ್ಲಿಗೆ ಬಂದು ಸಾಕಷ್ಟು ಮನವಿಯನ್ನು ಮಾಡಿಕೊಂಡರು. ಮಹಾರಾಷ್ಟ್ರ ಸರ್ಕಾರದವರು ಮಾಡಿರುವಂತಹ ಘೋಷಣೆಗಳು ಏನಿವೆ ಅದರಲ್ಲಿ ಕನಿಷ್ಟ 2-3 ಆದರೂ ಇವತ್ತು Harvesting & Transportation ಸಲುವಾಗಿ ಏನು ಬೇಕಾಗಿತ್ತು ಸಬ್ಸಿಡಿ ಅಟ್‌ಲಿಸ್ಟ್ 100 ರೂಪಾಯಿಗಳು ಒಂದು ಟನ್‌ಗೆ ಕೊಟ್ಟಿದ್ದರೆ ಎಷ್ಟೋ ಉಳಿಯುತ್ತಿತ್ತು. puechase tax. ಬೇಡ ಪರ್ಚೆಸ್ ಟ್ಯಾಕ್ಸ್ 65 ರೂಪಾಯಿ ಪರ್ ಟನ್ ಇರುವುದನ್ನು, ಅದನ್ನಾದರೂ ಕೂಡ ಅಬಾಲಿಷ್ ಮಾಡಿ ಎಂದು ಕೇಳಿಕೊಳ್ಳುವಂತಹ ಅನೇಕ ಬಾರಿ ಮನವಿಯನ್ನು ಕೊಟ್ಟರು. ಅದರಲ್ಲಿ ಸಕ್ಕರೆ ಸಚಿವರಂತೂ ಬೆಳಗಾಂನಲ್ಲಿ ಅಬಾಲಿಷ್ ಮಾಡಿದ್ದೇನೆಂದು ಹೇಳಿ, ನೀವು ಹೇಳಿದರೋ ಅವರು ಹೇಳಿದರೋ ಗೊತ್ತಿಲ್ಲ. ಅದು ಇವತ್ತಿನವರೆಗೂ ಕೂಡ practical ಆಗಿ implement ಆಗಲಿಲ್ಲ. ಇಂತಹ ಘೋಷಣೆಗಳನ್ನು ಮಾಡುವುದರಲ್ಲಿ ಅರ್ಥವೇನು ಇದೆ ಎಂಬ ಬಗ್ಗೆ ನೀವು ನಿಮ್ಮ ಆತ್ಮವನ್ನು ಮುಟ್ಟಿಕೊಂಡು ಈ ಸಂದರ್ಭದಲ್ಲಿ ಹೇಳಬೇಕು. ಅದಕ್ಕಾಗಿ ಇವತ್ತು ನೀವು ಏನು ಹೇಳಿದ್ದೀರಿ, ಈ ಮೇ ಹಂಗಾಮು ಮುಗಿಯುವುದರೊಳಗಾಗಿ ಇಡೀ ರಾಜ್ಯದಲ್ಲಿರುವಂತಹ ಎಲ್ಲಾ ಕಬ್ಬನ್ನು ನಾವು ಮುರಿದು ತೋರಿಸುತ್ತೇವೆನ್ನುವಂತಹ ಮಾತನ್ನು ತಾವು ಆಡಿದ್ದೀರಿ. ಆದರೆ ಇವತ್ತು ಬಿಜಾಪುರದಲ್ಲಿ ಒಂದೇ ಒಂದು ಉದಾಹರಣೆ ಹೇಳಬೇಕಾದರೆ 6 ಲಕ್ಷ ಟನ್ ಕಬ್ಬು ಹಾಗೆಯೇ ನಿಂತಿದೆ. ಇವತ್ತು ಜಿಲ್ಲಾಧಿಕಾರಿ ಕಛೇರಿಯ ಮುಂದೆ ರೈತರು ಧರಣಿ ಮಾಡುತ್ತಿದ್ದಾರೆ. ಆ ಜಿಲ್ಲಾಧಿಕಾರಿಯವರು ನಿಮಿತ್ತಕ್ಕೆ ಮಾತ್ರ ಒಂದೆರಡು ಮೀಟಿಂಗ್‌ನ್ನು ಮಾಡುತ್ತಾನೆ. ಅವರು ನಾಲ್ಕು ಸಕ್ಕರೆ ಕಾರ್ಖಾನೆಯ ಮಾಲೀಕರನ್ನು ಕರೆದು ಒಂದೆರಡು ಕಪ್ ಚಹವನ್ನು ಕುಡಿಸಿ ಅವರಿಗೆ ಇವನು ಒಂದಿಷ್ಟು ಹೇಳಿದರೆ ಅದು ಮುಗಿದುಹೋಯಿತು. ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಯುವುದಿಲ್ಲ. ಡಿ.ಸಿ ಯವರು ಹೇಳುತ್ತಾರೆ ಸರ್ಕಾರದವರು ಕೊಟ್ಟಿರುವ ನಿರ್ದೇಶನದ ಮೇರೆಗೆ ನಾವು ಕಬ್ಬನ್ನು ಅರೆಯುವುದಕ್ಕೆ ನನಗೆ ಅಧಿಕಾರವೆ ಇಲ್ಲವೆಂದು ಹೇಳುತ್ತಾರೆ.

ಇಂತಹ ಆದೇಶಗಳನ್ನು ನೀವು ಸರ್ಕಾರದಿಂದ ಹೊರಡಿಸಿದರೆ ಆ ಆದೇಶಕ್ಕೆನಾದರೂ ಬೆಲೆ ಇದೆಯೇ? ಅಥವಾ ನೀವು ಸ್ಪಂದಿಸುವಂತಹ ರೀತಿಯೇ ಇದು? ನೀವು ಈ ಸ್ಥಿತಿಯನ್ನು ಇಟ್ಟುಕೊಂಡು ಹೋದರೆ ಖಂಡಿತ ಈ ರಾಜ್ಯದ ರೈತರು ನಿಮ್ಮನ್ನು ಹೊಗಳುವುದಿಲ್ಲ. ನಿಮ್ಮನ್ನು ಶಪಿಸುವುದು ಖಂಡಿತವೆಂದು ಈ ಸಂದರ್ಭದಲ್ಲಿ ನಾನು ಮನವರಿಕೆ ಮಾಡಿಕೊಡುವುದಕ್ಕೆ ಇಚ್ಛೆಪಡುತ್ತೇನೆ. ನಾನು ತಮ್ಮಲ್ಲಿ ಇಷ್ಟೇ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿರುವಂತಹ ಕಾರ್ಖಾನೆಗಳಿಗೆ ಕಬ್ಬು ನುರಿಸುವಂತಹ ಸಾಮರ್ಥ್ಯ ಇಲ್ಲದೆ ಹೋದರೆ ಕೊನೆಪಕ್ಷ ಪಕ್ಕದ ರಾಜ್ಯದಲ್ಲಿರುವಂತಹ ಕಾರ್ಖಾನೆಗಳ ಮಾಲೀಕರ ಜೊತೆಯಾಗಲಿ ಅಥವಾ ಸರ್ಕಾರದ ಜೊತೆಯಲ್ಲಾಗಲಿ, ಕೂಡ ಮಾತನಾಡಿ, ಏನಾದರೂ ಈ ಸಮಸ್ಯೆಗೆ 4–5 ದಿವಸಗಳಲ್ಲಿ ಒಂದು ಪರಿಹಾರವನ್ನು ನೀವು ಹುಡುಕದೇ ಹೋದರೆ ಈ ರಾಜ್ಯದಲ್ಲಿ ಕಬ್ಬು ಬೆಳೆಗಾರರು ಅಧೋಗತಿ ಸ್ಥಿತಿಗೆ ಬರುತ್ತಾರೆ. ಆ ಸಂದರ್ಭದಲ್ಲಿ ಯಾರೂ ಕೂಡ ಅವರ ನೆರವಿಗೆ ಬರುವುದಿಲ್ಲ. ಇರುವಂತಹ ಅಷ್ಟು ರೈತರಿಗೆ ಇವತ್ತು ನೀವು ಏನು ಸಹಾಯ ಮಾಡಿದ್ದೇವೆಂದು ಬೆನ್ನು ತಟ್ಟಿಸಿಕೊಳ್ಳುತ್ತಿದ್ದೀರಿ. ಅಲ್ಲೋ ಇಲ್ಲೋ ಒಬ್ಬೊಬ್ಬ ಕಬ್ಬನ್ನು ಬೆಳೆದು ರೈತರು ಆತ್ಮಾಹುತಿಯನ್ನು ಮಾಡಿಕೊಳ್ಳುತ್ತಿದ್ದಾರೆ. ನೀವು ಭವಿಷ್ಯದಲ್ಲಿ ಬೀದರ್ ಜಿಲ್ಲೆಯಲ್ಲಂತೂ ನೋಡಿದ್ದೀರಿ, ಪ್ರತಿಯೊಂದು electronic media ದವರು ಪ್ರತಿ ದಿವಸ ಅದನ್ನು ತೋರಿಸುತ್ತಾರೆ. ಬಿಜಾಪುರದಲ್ಲಿರುವಂತಹ ಸಮಸ್ಯೆಯನ್ನು ತೋರಿಸಿದ್ದಾರೆ. ಸರ್ಕಾರವು ಎಲ್ಲಾದರೂ ಜೀವಿತವಾಗಿದ್ದರೆ ಅದಕ್ಕೆ ಸ್ಪಂದಿಸುವಂತಹ ಕನಿಷ್ಟ ಸೌಜನ್ಯತೆಯನ್ನಾದರೂ ನೀವು ತೋರಿಸುತ್ತಿದ್ದೀರಿ. ಆದರೆ ದುರ್ದೈವವಶಾತ್ ಇವತ್ತು ರೈತರ ಬಗ್ಗೆ ಆ ಕಳಕಳಿ ಇಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ಆಡುತ್ತೇನೆ. ನೀವು ಮುಂದಿನ ಉತ್ತರವನ್ನು ಕೊಟ್ಟ ಮೇಲೆ ಮಿಕ್ಕಿರುವಂತಹ ಮಾತನ್ನು ನಾನು ಆಡುವುದಕ್ಕೆ ಇಚ್ಛೆಪಡುತ್ತೇನೆ. ಒಂದು ಮಾತ್ರ ನಿಜ ನಮ್ಮ ಜಿಲ್ಲೆಯಲ್ಲಿ ಮಾನ್ಯ ಕಾರಜೋಳರವರೇ ನೀವು ಸ್ವಲ್ಪ ದಿವಸ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕೆಲಸವನ್ನು ಮಾಡಿದ್ದೀರಿ? ಇಲ್ಲದೆ ಇದ್ದರೂ ಈಶ್ವರಪ್ಪನವರು ಬರುವುದಕ್ಕಿಂತಲೂ ಮೊದಲು ಇವತ್ತು ನವೆಂಬರ್‌ನಿಂದ ಹಿರೆಬೆನ್ನೂರು ಕಾರ್ಖಾನೆಯಲ್ಲಿ ಕಬ್ಬನ್ನು ನುರಿಸುವಂತಹ ಹಂಗಾಮು ಪ್ರಾರಂಭವಾಗಿದೆ. ಅಲ್ಲಿ ಪಕ್ಕದ ನಂದಿ ಶುಗರ್ ಕಾರ್ಖಾನೆಯವರು ಇವತ್ತು 6 ಮಾಸ್ಟರ್ ಬಿಲ್ಲನ್ನು ಪೇಮೆಂಟ್ ಮಾಡಿದರು.

ಶ್ರೀ ಎ. ಕೃಷ್ಣಪ್ಪ :– ಮಾನ್ಯ ಸಭಾಧ್ಯಕ್ಷರೆ, ಅವರು ಆಡಿದ ಮಾತುಗಳಿಗೆ ಹೇಳುವುದಾದರೆ, 2001–02, 2002–03 ಆ ತಹಲ್‌ವರೆಗೂ ಸಂದರ್ಭ ಬಂದಾಗ tax exemption ಮಾಡಿದ್ದೇವೆ. ನಾವು ಮಿಲ್ ಮಾಡುವುದಕ್ಕೆ ಇಲ್ಲಿ capacity ಇಲ್ಲವೆಂದು ಹೇಳಿ ಪಕ್ಕದ

ರಾಜ್ಯಗಳಲ್ಲಿ ಅಂದಿನ Chief Minister ಗಳ ಹತ್ತಿರ ನಮ್ಮ Chief Minister ರವರು ಮಾತನಾಡಿ complete zero ವರೆಗೂ ಅಂದರೆ complete production ನ್ನು mill ಮಾಡುವುದಕ್ಕೂ ಕೂಡ ನಾವು ಮಾಡಿದ್ದೇವೆ. Transportation ಗೂ ಕೂಡ special permission ನ್ನು ಕೊಡಿಸಿದ್ದೇವೆ. ಆ 3 ಕೆಲಸಗಳನ್ನು ಕೂಡ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಮಾಡಿದ್ದೇವೆ. ಆದರೆ ಕಡೆಯ ಪಕ್ಷ ಅದನ್ನಾದರೂ ಕೂಡ ಇವರು ಮಾಡಬೇಕಾಗುತ್ತದೆ.

ಶ್ರೀ ಶಿವಾನಂದ ಪಾಟೀಲ್ :- ನಾನು ಹೇಳುವುದೇನೆಂದರೆ, ನಮ್ಮ ಜಿಲ್ಲೆಯಲ್ಲಿ ಒಂದು ಕಾರ್ಖಾನೆಯಿದೆ, ಕಳೆದ ನವೆಂಬರ್‌ನಿಂದ 1,60,000 ಟನ್ ಕಬ್ಬನ್ನು ನುರಿಸಿದ್ದಾರೆ. ಒಂದು ಪೈಸೆಯನ್ನು ರೈತರಿಗೆ ಇಲ್ಲಿಯವರೆವಿಗೆ ಪೇಮೆಂಟ್ ಮಾಡಿರುವುದಿಲ್ಲ. ನಾವು ಈ ಮಾತನ್ನು ಸಕ್ಕರೆ ನಿರ್ದೇಶಕರಿಗೆ, ಮತ್ತು ಸಕ್ಕರೆ ಸಚಿವರ ಗಮನಕ್ಕೆ ತಂದಿದ್ದೇನೆ. ನಾವು ಇದನ್ನು ತಂದು ಕೊಟ್ಟಮೇಲೆ ಒಂದು ರೆಕವರಿ ಸರ್ಟಿಫಿಕೇಟ್‌ನ್ನು ಇಷ್ಯೂ ಮಾಡುತ್ತೇವೆಂದು ಒಂದು ನೆಪ ಮಾತ್ರ ಆ ನಿರ್ದೇಶಕರು ಮತ್ತು ಸಚಿವರು ತೋರಿಸಿದರು. ಅದರ ಮೇಲೆ ಕ್ರಮವನ್ನು ಸಹ ತೆಗೆದುಕೊಳ್ಳಲಿಲ್ಲ. ಹಿಂದಿನಿಂದ ಇವರೇ ಆ ಫ್ಯಾಕ್ಟರಿಯ ಮಾಲೀಕರಿಗೆ ಹೇಳಿದರು. ನೀವು ಒಂದು ಕೆಲಸವನ್ನು ಮಾಡಿ, ಸುಪ್ರೀಂಕೋರ್ಟಿನ ಒಂದು ಆದೇಶವಿದೆ. ರೈತರಿಗೆ ಪೇಮೆಂಟ್‌ನ ಸಲುವಾಗಿ ಸಕ್ಕರೆ ರಿಲೀಸ್ ಮಾಡಬೇಕೆಂದು ಹೇಳಿ ಹೈಕೋರ್ಟ್‌ಗೆ ಹೋಗಲಿಕ್ಕೆ ಮಾಲೀಕರಿಗೆ ಆ ಇಲಾಖೆಯವರೆ ಕಳುಹಿಸಿದರು. ಅವರನ್ನು ಕಳುಹಿಸಿ State Governmentನವರನ್ನು ಪಾರ್ಟಿ ಮಾಡದೇ ಕೇಂದ್ರಸರ್ಕಾರವನ್ನು ಪಾರ್ಟಿ ಮಾಡಿ ಅಲ್ಲಿಂದ 50% ರಿಲೀಸ್‌ಗೆ ಆದೇಶವನ್ನು ತಂದರು. ಅದನ್ನು ತಂದು ಅರ್ಧದಷ್ಟು ಕಾರ್ಖಾನೆಯಲ್ಲಿರುವಂತಹ ಸಕ್ಕರೆಯನ್ನು ಮಾರಿಕೊಂಡರು. ಇವತ್ತಿನವರೆಗೂ ರೈತರಿಗೆ ಹತ್ತು ಪೈಸೆ ಸಹ ಪೇಮೆಂಟ್ ಆಗಿರುವುದಿಲ್ಲ. ನಾವು ಸರ್ಕಾರಕ್ಕೆ ಏನು ವಿನಂತಿಯನ್ನು ಮಾಡಿಕೊಂಡಿದ್ದೇವೆಂದರೆ, ಇವತ್ತಾದರೂ ನೀವು ಒಂದು interim application ಕೊಟ್ಟು ಹೈಕೋರ್ಟ್‌ಗೆ ನೀವು ಪಾರ್ಟಿಯಾಗಿ, ನಾವು ಅವರಿಗೆ ರೆಕವರಿ ಸರ್ಟಿಫಿಕೇಟ್‌ನ್ನು ಇಷ್ಯೂ ಮಾಡಬೇಕೆಂದು ಇದ್ದೇವೆ. ಕೇನ್ ಪೇಮೆಂಟ್‌ನ್ನು ಮಾಡಿಲ್ಲವೆಂದು ಹೇಳಿ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವ ರೀತಿಯಲ್ಲಿ ಆ ಆದೇಶವನ್ನು ನೀವು ಏನು ಮಾಡಿದ್ದೀರಿ, ವಿತ್‌ಡ್ರಾ ಮಾಡಿಸಿ ಎಂದರೆ ಅದಕ್ಕೆ ನಿರ್ದೇಶಕರು ಹಾಗೂ ಸಚಿವರೂ ಕೂಡ ಸ್ಪಂದಿಸುವುದಕ್ಕೆ ತಯಾರಿಲ್ಲ. ಸರ್ಕಾರವೇ ಕುಳಿತುಕೊಂಡು ಮಾಡುವಂತಹ ಸ್ಥಿತಿಯನ್ನು ಇಲಾಖೆಯವರು ಸೃಷ್ಟಿ ಮಾಡಿದ್ದಾರೆ. ನಾವು ಯಾವ ಮಾತಿನಿಂದ ನಿಮ್ಮನ್ನು ನಿಂದನೆ ಮಾಡಬೇಕೆಂದು ಹೇಳುವುದಕ್ಕೆ ನಮ್ಮಲ್ಲಿ ಶಬ್ದವಿಲ್ಲ. ನೀವೇ ಈ ತರಹ ಮಾಡಿದರೆ ಭವಿಷ್ಯದಲ್ಲಿ ನೀವು ಒಂದಲ್ಲ ಒಂದು ದಿವಸ ಅನಾಹುತಕ್ಕೆ

ಈಡಾಗುತ್ತೀರೆಂಬ ಮಾತನ್ನು ಈ ಮೂಲಕ ಸರ್ಕಾರದ ಗಮನಕ್ಕೆ ತಂದು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ.ಬಿ. ಪಾಟೀಲ್ (ಸಂಕೇಶ್ವರ) :– ಮಾನ್ಯ ಛೇರ್ಮನ್‌ರೆ ಇದೇ ಒಂದು ವಿಷಯದ ಬಗ್ಗೆ ಶೂನ್ಯ ವೇಳೆಯಲ್ಲಿ ಚರ್ಚೆ ಮಾಡಲು ನಾನು ಕೊಟ್ಟಿದ್ದೆ. ಇಲ್ಲಾ ಸಕ್ಕರೆ ಬಗ್ಗೆ ಈಗ ಚರ್ಚೆ ನಡೆಯುತ್ತಿದೆ, ಆ ಸಮಯದಲ್ಲಿ ಮಾತನಾಡಬಹುದೆಂದು ತಾವು ಹೇಳಿರುವುದರಿಂದ ಇವತ್ತು ನಾನು ಮಾತನಾಡುತ್ತೇನೆ. ಇವತ್ತು ಕರ್ನಾಟಕ ರಾಜ್ಯದಲ್ಲಿ 55 ಖಾಸಗಿ ಸಕ್ಕರೆ ಕಾರ್ಖಾನೆಗಳು ಇವೆ. ಅದರಲ್ಲಿ ಇವತ್ತು 47 ಇವರ ಕೈಯಲ್ಲಿವೆ. 26 ಸಹಕಾರಿ ಕ್ಷೇತ್ರದಲ್ಲಿರುವಂಥ ಸಕ್ಕರೆ ಕಾರ್ಖಾನೆಗಳು ಅದರಲ್ಲಿ ಕೇವಲ 5 ಮಾತ್ರ ನಡೆಯುತ್ತಿವೆ. ಕರ್ನಾಟಕ ರಾಜ್ಯದಲ್ಲಿ ಸಹಕಾರಿ ಚಳುವಳಿ ಪ್ರಾರಂಭವಾದ ನಂತರ ಮುಂಬೈ–ಕರ್ನಾಟಕ ಪ್ರಾಂತ್ಯದಲ್ಲಿ ಹಂಪನಗೌಡರು ದಿವಂಗತರಾದ ಎಂ.ಪಿ. ಪಾಟೀಲ್ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದರು. ಇಡೀ ದೇಶದಲ್ಲಿ ಅತ್ಯುತ್ತಮ ಸಹಕಾರಿ ಸಕ್ಕರೆ ಕಾರ್ಖಾನೆಗಳು ಎಂದು ಹೆಸರು ಪಡೆದಿರುವಂಥ ಒಂದು ನಾಡು. 22 ಸಕ್ಕರೆ ಕಾರ್ಖಾನೆಗಳು ಇವತ್ತು ರಿಜಿಸ್ಟ್ರೇಶನ್ ಆಗಿವೆ. ಅದರಲ್ಲಿ ಕೇವಲ 5 ಕೆಲಸ ಮಾಡುತ್ತಿವೆ. ಮಾನ್ಯ ಶಿವಾನಂದ ಪಾಟೀಲ್‌ರು ಹೇಳಿದಂತೆ, ಇವತ್ತು ಬಹಳಷ್ಟು ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಸರ್ಕಾರ ಲೀಸ್ ಮೇಲೆ ಕೊಡುತ್ತಿದ್ದೇವೆ. ಕಾರಣಗಳು ಬಹಳ ಇವೆ. ನಬಾರ್ಡ್ ಮತ್ತು ಅಪೆಕ್ಸ್ ಬ್ಯಾಂಕುಗಳು ಇವತ್ತು ಫೈನಾನ್ಸ್‌ನ್ನು ಮಾಡುತ್ತಿಲ್ಲ. ಇವತ್ತು ಮ್ಯಾನೇಜ್‌ಮೆಂಟ್ ಸರಿಯಾಗಿಲ್ಲ. NCDC ಯಿಂದ ಅದರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತಿಲ್ಲ. ಮಾನ್ಯ ಕಾರಜೋಳ್‌ರವರಿಗೆ ಮಾನ್ಯ ಉದಾಸಿಯವರಿಗೆ ಗೊತ್ತು, ಅವರು ಛೇರ್ಮನ್‌ರಾಗಿ ಕೆಲಸ ಮಾಡಿದವರಾಗಿದ್ದಾರೆ. ಮಾನ್ಯ ಸಕ್ಕರೆ ಸಚಿವರು ಎಲ್ಲಾ ಕಡೆ ತಿರುಗಾಡಿ ಬಂದಿದ್ದಾರೆ, ಅದರ ಬಗ್ಗೆ ಎಲ್ಲಾ ಅವರಿಗೂ ಗೊತ್ತು. ನಾವು ಕೂಡ ಇವತ್ತು ಅದೇ ಕ್ಷೇತ್ರದಿಂದ ಬಂದವರು. ಕಾರಜೋಳರವರು Continuous ಆಗಿ ಛೇರ್ಮನ್‌ರಾಗಿದ್ದವರು. ನಾವು ಕೂಡ ಅದೇ ಕ್ಷೇತ್ರದಿಂದಲೇ ಬಂದವರು. ನಾವು ಇವತ್ತು ಏನು ಬಿಳಿ ಬಟ್ಟೆ ಹಾಕಿಕೊಂಡು ಕುಳಿತಿದ್ದೇವೆ, ಆ ಭಾಗದ ಸಕ್ಕರೆ ಏರಿಯಾದವರಿಂದಲೇ, ಇವತ್ತು ಆ ಕ್ಷೇತ್ರ ಹಾಳಾಗಿ ಹೋಗಿದೆ. ಯಾವ ಸರ್ಕಾರಕ್ಕೂ ಈ ಸಹಕಾರಿ ಸಕ್ಕರೆ ಕಾರ್ಖಾನೆಗಳು ಹಿಡಿತದಲ್ಲಿಲ್ಲ. ಈ ರಾಜ್ಯಕ್ಕೆ ಹೈಯೆಸ್ಟ್ ಉತ್ಪಾದನೆ ಬರುತ್ತದೆಂದರೆ, ಹೆಚ್ಚು ಆದಾಯ ಬರುತ್ತದೆಂದರೆ, ಅದು ಸಕ್ಕರೆ ಉದ್ಯಮದಿಂದ. ಹೌದೋ ಇಲ್ಲವೋ ಮಾನ್ಯ ಉದಾಸಿಯವರೆ, ಮೋಲಾಸಿಸ್, ಸ್ಪಿರಿಟ್, ಬೈಪ್ರೊಡಕ್ಟ್ಸ್ ಭಗಾಸ್ ಎಲ್ಲವೂ ಇದರಿಂದ ಬರುತ್ತದೆ. ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಒಂದು ಸಕ್ಕರೆ ಕಾರ್ಖಾನೆಯ ಅಧ್ಯಕ್ಷರಾಗಿದ್ದರು. ಸಾರಾಯಿ ಅಲ್ಲಿಂದ ಬರುತ್ತದೆ, I.M.F.L. ಎಲ್ಲವೂ ಅದರಿಂದ ಬರುತ್ತದೆ. ಇಷ್ಟೆಲ್ಲಾ ಬಂದರೂ ಕೂಡ ಸರ್ಕಾರದಿಂದ ಕೇವಲ ಇವತ್ತು

65 ರೂ.ಗಳ ಪರ್ಚೇಸ್ ಟ್ಯಾಕ್ಸ್ ಕಬ್ಬಿನ ಮೇಲೆ ತೆಗೆಯುವುದಕ್ಕಾಗುತ್ತಿಲ್ಲವೆಂದರೆ, ಇದು ನಾಚಿಕೆಗೇಡಿನ ಸಂಗತಿ. ಇವತ್ತು ರೈತರ ಸಾಲವನ್ನು ಮನ್ನಾ ಮಾಡುತ್ತಿದ್ದೀರಿ, highest income ಈ ರಾಜ್ಯದಲ್ಲಿ ಏನಾದರೂ ಬರುತ್ತದೆಂದರೆ, ಅದು ಸಕ್ಕರೆ ಕಾರ್ಖಾನೆಗಳಿಂದ, ನೀವು ಲೆಕ್ಕವನ್ನು ತೆಗೆದು ಹೇಳಿ, ಈ ಸಕ್ಕರೆ ಕಾರ್ಖಾನೆಗಳಿಂದ ಎಷ್ಟು ಉತ್ಪಾದನೆ ಬಂದಿದೆ ಎಂದು ಹೇಳಬೇಕು. ಸಕ್ಕರೆ ಅಷ್ಟೆ ಅಲ್ಲ, ಒಂದು ಕಾರ್ಖಾನೆಯಲ್ಲಿ 3 ರಿಂದ 4 ಸಾವಿರ ಕುಟುಂಬಗಳು ಉದ್ಯೋಗದಿಂದ ಬದುಕುವ ಪ್ರಸಂಗವಿದೆ. ನಮ್ಮಲ್ಲಿ ಎಷ್ಟು ರಿಕವರಿ ಇದೆ, ಎಷ್ಟು ಕಾರ್ಖಾನೆಗಳು ಇವೆ. ಇವತ್ತು ಒಳ್ಳೆಯ ಒಂದು ಕಬ್ಬು ಬರುತ್ತಿದೆ. Agriculture Department ದಿಂದ ಸಹಾಯವಿಲ್ಲ, ನಮ್ಮಲ್ಲಿ ಒಂದು Research Center ಅನ್ನು ಇವತ್ತು ತೆಗೆದಿದ್ದೇವೆ. ಇವತ್ತು Agriculture College ಮುಖಾಂತರ ನಡೆಸುತ್ತಿದ್ದಾರೆ. ಮಂತ್ರಿಗಳಿಗೂ ಗೊತ್ತಿದೆ ನಾನು ಅವರಿಗೂ ಹೇಳಿದ್ದೇನೆ. ಮಹಾರಾಷ್ಟ್ರದಲ್ಲಿ ಇವತ್ತು ಹೊಸ ತಳಿಯ ಕಬ್ಬನ್ನು ಬೆಳೆಯುತ್ತಿದ್ದಾರೆ. ನಮ್ಮಲ್ಲಿರುವ ಸಂಕೇಶ್ವರದ Research Center ನಲ್ಲಿ ಒಂದು ಹೊಸ ತಳಿಯನ್ನು ವಿಜ್ಞಾನಿಗಳು ಪ್ರಾರಂಭ ಮಾಡಿದ್ದಾರೆ. ಇವತ್ತಿನವರೆಗೂ Agriculture Department ದಿಂದ ಒಂದು ಪೈಸೆಯನ್ನು ಸಹಾಯ ಕೊಟ್ಟಿಲ್ಲ. ಹಾಗಾದರೆ ರೈತರು ಕಬ್ಬನ್ನು ಹೇಗೆ ಬೆಳೆಯಬೇಕು. ನಮ್ಮಲ್ಲಿ ಇನ್ನು ಹಳೆಯ ತಳಿಗಳು ಇವೆ. ಶುಗರ್‌ಕೇನ್ ಡೆವಲಪ್‌ಮೆಂಟ್ ಕಮಿಷನ್‌ರವರು ಡೆವಲಪ್‌ಮೆಂಟ್‌ನ್ನು ನೋಡಿಕೊಳ್ಳಬೇಕಾದ ಕರ್ತವ್ಯ ಇರುತ್ತದೆ. ಅಧಿಕಾರಿಗಳನ್ನು ನಾನು ಆ ಸಭೆಯಲ್ಲಿ ಕೇಳಿದೆ. ಅದಕ್ಕೆ ಅವರು ನಮಗೆ ದುಡ್ಡಿಲ್ಲ ನಾವು ಏನು ಮಾಡೋಣವೆಂದು ಕೇಳುತ್ತಾರೆ. ಈ ಪರಿಸ್ಥಿತಿ ಆದರೆ, ರಾಜ್ಯದಲ್ಲಿ ಕಬ್ಬು ಬೆಳೆಗಾರರ ಪರಿಸ್ಥಿತಿ ಏನು? ನಾವು ಚಿಂತನೆ ಮಾಡುವ ಪರಿಸ್ಥಿತಿ ಬಂದಿದೆ. ಇವತ್ತು ಮೂಲ ಆದಾಯ ಮಧ್ಯಮ ವರ್ಗದ ರೈತರು ಏನಾದರೂ ಮೇಲೆ ಬಂದಿದ್ದರೆ, ಅದು ಕೇವಲ ಕಬ್ಬಿನ ಬೆಳೆಯಿಂದ, ನಾನು ಮಾನ್ಯ ಸಚಿವರಿಗೆ ಹೇಳಿದ್ದೇನೆ, ಅವರು ಕೂಡ ಎಲ್ಲಾ ಕಾರ್ಖಾನೆಗಳಿಗೆ ಹೋಗಿ ಬಂದಿದ್ದಾರೆ. ಅವರು ತಿರುಗಾಡಿ ಬಂದು ಏನು ಮಾಡಿದರೂ ನನಗೆ ಗೊತ್ತಿಲ್ಲ. ಅವರು ಏನು ಹೇಳುತ್ತಾರೆ ಅದನ್ನೆ ನೀವು ಹೇಳುವುದು. ಅದಕ್ಕೆ ಇವತ್ತು ಸಕ್ಕರೆ ಉದ್ಯಮಗಳ ಬಗ್ಗೆ ನಾವು ಏನಾದರೊಂದು ವಿಚಾರ ಮಾಡಬೇಕು. ಮಹಾರಾಷ್ಟ್ರದಲ್ಲಿ Transportation ಇವತ್ತು ಬಿಟ್ಟು ಬಿಟ್ಟರು. ನೀವು ಇವತ್ತು ಪರ್ಚೇಸ್ ಟ್ಯಾಕ್ಸ್‌ನ್ನಾದರೂ ಬಿಟ್ಟುಬಿಟ್ಟರೆ ಒಂದು ಟನ್‌ಗೆ 65 ರೂ.ಗಳು ಉಳಿಯುತ್ತದೆ, ಅದು ರೈತರ ದುಡ್ಡು, ನೀವು ಏನು ಕೊಡುತ್ತಿದ್ದೀರಿ. ಇದು ಅಷ್ಟೆ ಅಲ್ಲ, ಯಾವುದೆ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಗೆ ಬರುವಂಥ ರಸ್ತೆಗಳು ಸಹ ಇವತ್ತು ಅಭಿವೃದ್ಧಿ ಪಡಿಸುವ ಸಲುವಾಗಿ Raod Cess ಅನ್ನು ಸರ್ಕಾರದಿಂದ ತೆಗೆದುಕೊಳ್ಳುತ್ತಿದ್ದಾರೆ. ಅದು ಇವತ್ತು ಎಲ್ಲಿ ಹೋಗುತ್ತದೆ. ಇವತ್ತು ಸರ್ಕಾರಕ್ಕೆ ಎಲ್ಲಾ ಮೂಲದಿಂದ ಆದಾಯ

ಬರುತ್ತಿದ್ದರೂ ಕೂಡ ಈ ಸಕ್ಕರೆ ಉದ್ಯಮಕ್ಕೆ ಸರ್ಕಾರದಿಂದ ನಿರ್ಲಕ್ಷ್ಯ. ಮಾನ್ಯ ವೈಜನಾಥ್ ಪಾಟೀಲ್‌ರವರು ಮತ್ತು ಇನ್ನಿತರರು ಇದರ ಬಗ್ಗೆ ಬಹಳ ಹೇಳುವವರಿದ್ದಾರೆ. ಹೇಳಿದರೆ ಬಹಳ ನೋವಾಗುತ್ತದೆ. ಒಂದು ಕಾರ್ಖಾನೆಗೆ ವೇಬ್ರಿಡ್ಜ್ 4 ಇರುತ್ತವೆ. ನಮ್ಮ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ, ಇದು ಇಡೀ ರಾಜ್ಯದಲ್ಲಿ ಅಷ್ಟೆ ಅಲ್ಲ, ದೇಶದಲ್ಲಿಯೇ ಉತ್ತಮವಾದ ಒಂದು ಸಹಕಾರಿ ಸಕ್ಕರೆ ಕಾರ್ಖಾನೆ. ಮಾನ್ಯ ಉದಾಸಿಯವರೆ ಈಗ ಅದು ಎಲ್ಲಿಗೆ ಹೋಗಿದೆ, ಲಾಸ್ಟ್‌ಗೆ ಬಂದಿದೆ. ನೀವು ಒಪ್ಪಿಕೊಳ್ಳುತ್ತೀರಾ? ಇದು ಏಕೆ? ಅದು ಏಕೆ ಅನ್ನುವುದು ತಮಗೆ ಗೊತ್ತಿದೆ, ನಾನು ಹೇಳುತ್ತೇನೆ. ಮಾನ್ಯ ಶ್ರೀನಿವಾಸಗೌಡರೆ, ನಾನು ರಿಕವರಿ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ರಿಕವರಿ ಮಾಡುವುದಿಲ್ಲ. ಇವತ್ತು ಏನಾಗಿದೆ ಎನ್ನುವುದರ ಬಗ್ಗೆ ಮಾನ್ಯ ಅಧ್ಯಕ್ಷರಿಗೆ ಒಂದು ಪತ್ರವನ್ನು ಕಳುಹಿಸಿ ಕೊಡುತ್ತೇನೆ. ಒಂದು ಟ್ರಕ್ ಕಬ್ಬನ್ನು ತೂಕ ಮಾಡಿದರೆ, 20 ಟನ್ ಇರುತ್ತದೆ. ಅದು ಅಲ್ಲಿಗೆ ಹೋಗುವುದಕ್ಕೆ ಮುಂಚಿತವಾಗಿ, ಬೇರೆ ಕಡೆ ವೇಬ್ರಿಡ್ಜ್‌ದಿಂದ ತೂಕ ಮಡಿದಾಗ ಅದು 19 ಟನ್ ಆಗುತ್ತದೆ. ಆದರೆ ಆ ಕಾರ್ಖಾನೆಯ ವೇಬ್ರಿಡ್ಜ್‌ನಲ್ಲಿ 17 ಟನ್ ಆಗುತ್ತದೆ. ಇವತ್ತು ಸರ್ಕಾರಕ್ಕೆ ತಾಕತ್ತಿದ್ದರೆ ತೆಗೆಸಿ ರೆಕಾರ್ಡ್‌ನ್ನು, ಅದನ್ನು ಮಾಡುತ್ತೀರಾ? ಉಗಾರ ಷುಗರ್ ಫ್ಯಾಕ್ಟರಿ ಬಗ್ಗೆ ಮಾನ್ಯ ಕಾಗೆಯವರು ಹೇಳಿದರು, ಹೋದ ಸಲ ರಿಕವರಿ ಮಾಡಿ ಇವತ್ತು ಟನ್‌ಗೆ ಬೆಲೆ ಕೊಡಿಸುತ್ತಿದ್ದಾರೆ. ಹೋದ ಸಲ ಉಗಾರ್ ಷುಗರ್ ಫ್ಯಾಕ್ಟರಿಯವರು ಮಾಡಿದ್ದರು. ನಾವು ಹೇಳುವುದು ಎಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಗಳು ಮಾಡುತ್ತವೆಂದು ಅಪವಾದ ಇದೆ, ಇದರ ಬಗ್ಗೆ ನಮ್ಮ ಹತ್ತಿರ proof ಇದೆ. ಅದನ್ನು ಬೇಕಾದರೆ ತೆಗಿಸಿ.

ಶ್ರೀ ರಾಜು ಭರಮಗೌಡ ಕಾಗೆ :- ಮಾನ್ಯ ಛೇರ್ಮನ್‌ರೆ, ಇವತ್ತು ಅಥಣಿ ಫಾರ್ಮರ್ಸ್ ಷುಗರ್ ಫ್ಯಾಕ್ಟರಿಯವರು ಹೇಗೆ ಲೂಟಿಯನ್ನು ಮಾಡುತ್ತಿದ್ದಾರೆಂದರೆ, ಈ ಸಲ ಷುಗರ್‌ಕೇನ್ ಹೆಚ್ಚಿದೆ. ರೈತರಿಗೆ ಕಾರ್ಖಾನೆಗಳಿಂದ ಕಬ್ಬು ನುರಿಸುವುದಕ್ಕೆ ಆಗುವುದಿಲ್ಲವೆನ್ನುವುದು ಗೊತ್ತಾಗಿ ಬಿಟ್ಟಿದೆ. ಈಗ ಜಮಖಂಡಿ, ಬಾಗಲಕೋಟೆ, ಕಡೆಯಿಂದ ಷುಗರ್‌ಕೇನ್ ನಮ್ಮ ಅಥಣಿ ತಾಲ್ಲೂಕಿಗೆ ಬರುತ್ತಿದೆ. ನನ್ನ ಮತಕ್ಷೇತ್ರದಲ್ಲಿ ಮೂರು ಸಕ್ಕರೆ ಕಾರ್ಖಾನೆಗಳು ಇವೆ. ನನ್ನ ಮತಕ್ಷೇತ್ರದ ಅಥಣಿ ತಾಲ್ಲೂಕಿನಲ್ಲಿ 50 ರಿಂದ 60 ಲಕ್ಷ ಟನ್ ಕಬ್ಬು ಇದೆ, ಆ ಮೂರು ಸಕ್ಕರೆ ಕಾರ್ಖಾನೆಯಿಂದ ಇವತ್ತು ನುರಿಸುವುದಕ್ಕಾಗುವುದಿಲ್ಲ. ಮಹಾರಾಷ್ಟ್ರದ 4–5 ಷುಗರ್ ಫ್ಯಾಕ್ಟರಿಯವರು ಕಬ್ಬನ್ನು ಒಯ್ಯುತ್ತಿದ್ದಾರೆ. ಅಥಣಿ ತಾಲ್ಲೂಕಿನಲ್ಲಿ ಅವರು ತೂಕದಲ್ಲಿ ವ್ಯತ್ಯಾಸವನ್ನು ಮಾಡುತ್ತಿದ್ದಾರೆ. 20 ಟನ್ ಆಗಿದ್ದರೆ ಆ ರೈತರಿಗೆ 16 ಟನ್ ಎಂದು ಬರೆದು ಕೊಡುತ್ತಾರೆ. ಬೇಕಾದರೆ ತಂದು ಹಾಕು, ಇಲ್ಲದಿದ್ದರೆ ಬಿಡು ಎಂದು 4 ಟನ್ ಕಟ್ ಮಾಡುತ್ತಾರೆ, ಅಂದರೆ, ಒಂದು ಟನ್ 800 ರೂ.ಗಳು ಒಬ್ಬ ರೈತನ ಒಂದು ಟ್ರಿಪ್ ಕಬ್ಬಿಗೆ 3200 ರೂಗಳು ಕಡಿಮೆಯಾಯಿತು. ಅಂದರೆ ಯಾವ ತರಹದಿಂದ

ಲೂಟಿಯನ್ನು ಮಾಡುತ್ತಿದ್ದಾರೆ. 20 ಟನ್ ಆದರೆ 16 ಟನ್ ಎಂದು ರೈತರಿಗೆ ಬರೆದು ಕೊಡುತ್ತಾರೆ. ನಿಮಗೆ ಬೇಕಾದರೆ ತಂದು ಹಾಕಿ, ಇಲ್ಲದಿದ್ದರೆ ಬಿಡಿ. ಈ ತರಹ ಲೂಟಿ ನಡೆದಿದೆ. ಇನ್ನು ನಾನು ಹೆಚ್ಚಿಗೆ ಮಾತನಾಡುವವನಿದ್ದೇನೆ. ಮಾನ್ಯ ಎ.ಬಿ. ಪಾಟೀಲ್‌ರದ್ದು ಆದ ನಂತರ ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಡಿ.

ಶ್ರೀ ಎ.ಬಿ. ಪಾಟೀಲ್ :– ನಾನು ನಿಮಗೆ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕರ್ಖಾನೆಯ ಬಗ್ಗೆ ಒಂದು ಉದಾಹರಣೆಯನ್ನು ತೋರಿಸಿದೆ. ರೈತರು ಕಬ್ಬಿಗೆ ಹಾಡುಹಗಲೇ ದರೋಡೆಯನ್ನು ಮಾಡುತ್ತಿದ್ದಾರೆಂದು ಗೊತ್ತು. ಅದು ಅಷ್ಟೆ ಅಲ್ಲ, ಕಬ್ಬು ಇಲ್ಲಿ ತೂಕವಾಗುತ್ತದೆ. ಯಾವ ಸರ್ಕಾರಕ್ಕೆ ಎನ್‌ಕ್ವೈರಿ ಮಾಡುವ ತಾಕತ್ತು ಇದೆ ಮಾಡಿ ನೋಡೋಣ. ಅಲ್ಲಿ ರೈತರು ಇವತ್ತು ಹೇಳುತ್ತಿದ್ದಾರೆ. ಹೇಗೆ ಕಾರ್ಖಾನೆ ನಡೆಸುತ್ತಿದ್ದಾರೆ. ಏನು ದುರಾಡಳಿತವೆಂದರೆ, ನಾನು ತಮಗೆ ಈ ಪತ್ರವನ್ನು ಕಳುಹಿಸಿ ಕೊಡುತ್ತೇನೆ, ತಾವು ಅದನ್ನು ಸಂಬಂಧಪಟ್ಟ ಸಚಿವರಿಗೆ ಕಳುಹಿಸಿಕೊಡಿ. ಈಗಿನಿಂದಲೇ ಇದನ್ನು ಸೀಜ್ ಮಾಡುವುದಕ್ಕೆ ಸಾಧ್ಯವಿದೆಯೇ? ಇದಕ್ಕೆ C.O.D enquiry ಮಾಡಬೇಕು. ಇವತ್ತು ಕೋಟ್ಯಾಂತರ ರೂಪಾಯಿ ಸಕ್ಕರೆ ಉದ್ಯಮಗಳಲ್ಲಿ ಹಣ ದುರುಪಯೋಗವಾಗುತ್ತಿದೆ. ದುರಾಡಳಿತ ನಡೆಯುತ್ತಿದೆ ಲೂಟಿ ಮಾಡುತ್ತಿದ್ದಾರೆ. ಇದು ಲಘುವಾದ ಮಾತಲ್ಲ, 150 ಕೋಟಿ ರೂ.ಗಳ ಗಣಿ ಹಗರಣ ಇದ್ದರೆ, ಇದು ಅದರ ಅಪ್ಪನಂತದ್ದು, ಸಾವಿರಾರು ಕೋಟಿ ರೂಪಾಯಿಗಳ ಅವ್ಯವಹಾರ ಇವತ್ತು ನಮ್ಮ ಕಾರ್ಖಾನೆಗಳಲ್ಲಿ ನಡೆದಿವೆ. ಈ ರಾಜ್ಯದಲ್ಲಿ ಇದ್ದದ್ದೇ ಹೇಳುತ್ತಿದ್ದೇನೆ, ಹಾಗಾಗಿ ಇವೆಲ್ಲವನ್ನು ಕೂಡ ಇವತ್ತು ಸರ್ಕಾರದವರು ಸಮಗ್ರವಾಗಿ ತನಿಖೆ ಮಾಡಿ Weigh and Measures ಈ ವೇವ್ ಬ್ರಿಡ್ಜ್ ಬಗ್ಗೆ ಏನು ಮಾಡುತ್ತೀರಿ. ಎಲ್ಲಾ ನಿಮ್ಮ ಕಂಟ್ರೋಲ್‌ನಲ್ಲಿ ಬರುತ್ತದೆ. State Government control. ಮಾನ್ಯ ಸಕ್ಕರೆ ಸಚಿವರು ಉತ್ತರ ಕೊಟ್ಟಿದ್ದರು, ನಾನು ಶಶಿಕಾಂತ ನಾಯಕರವರು, ಅವರು ಉಸ್ತುವಾರಿ ಸಚಿವರು ಇವತ್ತು ಇಲ್ಲ, ಅವರು ನಾವು ಕೂಡ ಕೇಳಿದ್ದು, ಈ ಕಾರ್ಖಾನೆ ನಮ್ಮ ಕಕ್ಷೆಯಲ್ಲಿ ಬರುವುದಿಲ್ಲವೆಂದು ಹೇಳಿಬಿಟ್ಟರು. ಅದು ಏನು Monthly Sales Tax ಆದರೆ Weights and Measures ಇವರಿಗೆ ತಾನೇ ಬರುವುದೋ ಇಲ್ಲವೋ, ಅದನ್ನು ಏಕೆ ಮಾಡಬಾರದು ಇವತ್ತು. State excise ನಿಮ್ಮ ಕಡೆ ಬರುತ್ತದೆ Sprit ಇತ್ಯಾದಿ ನಿಮ್ಮ ಕಡೆ ಬರುತ್ತದೆ. ಆಮೇಲೆ ಟ್ಯಾಂಕರ್‌ಗಳ ಮೂಲಕ ಸಾಗಾಣಿಕೆ ಮಾಡುವುದು ನಿಮ್ಮ ಕಡೆ ಬರುತ್ತದೆ, ಬಿಲ್ಸ್ ಇಲ್ಲವೇ ಇಲ್ಲ, ಆ ಕಡೆ ಶಿಫ್ಟ್ ಮಾಡಿಸುವುದು ಈ ಕಡೆ ಟ್ರಾನ್ಸ್‌ಫರ್ ಮಾಡಿಸುವುದು, ಹೀಗಾದರೆ ಯಾವ ಕಾರ್ಖಾನೆಗಳು ಉಳಿಯುತ್ತವೆ. ಇದಲ್ಲದೆ ಇವತ್ತು ಸರ್ಕಾರದವರು ಕೇಂದ್ರಸರ್ಕಾರದವರಿಗೆ ಒಂದು ವರದಿಯನ್ನು ಕಳುಹಿಸಿಕೊಟ್ಟಿದ್ದಾರೆ. ಶುಗರ್ ಡೈರೆಕ್ಟರ್, ಈ ಸಕ್ಕರೆ ಕಾರ್ಖಾನೆಯಲ್ಲಿ ಯಾವ ರೀತಿ ಅವ್ಯವಹಾರ ನಡೆದಿದೆ,

ಎನ್ನುವ ಬಗ್ಗೆ ತೆಗೆಸಿ ಅದನ್ನು ಟೇಬಲ್ ಮುಂದೆ ಪ್ಲೇಸ್ ಮಾಡಿ, ಆ ವರದಿಯನ್ನು ನೋಡೋಣ. ಕೇಂದ್ರ ಸರ್ಕಾರಕ್ಕೆ ಬರೆದಿದ್ದಾರೆ, ಇವತ್ತು ಕೋಟಿಗಟ್ಟಲೆ ದುರುಪಯೋಗವಾಗಿದೆ. ಅವ್ಯವಹಾರವಾಗಿದೆಯೆಂದು, ಉದಾಸಿಯವರೇ ಮುಚ್ಚಿಟ್ಟಿದ್ದೀರಿ, ಅದು ಕೇಂದ್ರ ಸರ್ಕಾರಕ್ಕೆ ಹೋಗಿದೆ. ನಿಮ್ಮ ಶುಗರ್ ಡೈರೆಕ್ಟರ್ ರಿಪೋರ್ಟ್ ಬರೆದಿದ್ದಾರೆ. ಏನು ಆ್ಯಕ್ಷನ್ ತೆಗೆದುಕೊಳ್ಳುತ್ತೀರಾ, ಹೇಳುವುದು ಬೇಡ. ಅದಕ್ಕೆ ಶಕ್ತಿ ಬೇಕು. ರೈತರ ಬಗ್ಗೆ ಮಾತನಾಡುವವರು ನೀವು ಏನು ಮಾಡುತ್ತೀರಿ ಹೇಳಿ. ಅದಕ್ಕೆ ಇವತ್ತು ಅಧ್ಯಕ್ಷರೇ ಇವೆಲ್ಲ ತನಿಖೆ ಆಗಬೇಕಾದರೆ ಇಲಾಖೆಯವರೇ ಸೋತಿದ್ದಾರೆ. ಶುಗರ್ ಡೈರೆಕ್ಟರ್ enquiry ಮಾಡಿ ಆ ರಿಪೋರ್ಟ್ ಕಳುಹಿಸಿಕೊಟ್ಟಿದ್ದಾರೆ. ಯಾವ ಸಕಾರಕ್ಕೂ ಏನು ಮಾಡಲಿಕ್ಕಾಗುತ್ತಿಲ್ಲ, ಅದಕ್ಕೆ ನಾನು ಇದನ್ನು ಸಿ.ಒ.ಡಿ. ತನಿಖೆಯನ್ನೇ ಈ ಕೇಸ್ ಮೇಲೆ ಮಾಡಬೇಕೆಂದು ಹೇಳಿ ಅವರೆಲ್ಲರ ಮೇಲೆ ಕೇಸ್ ಹಾಕಬೇಕೆಂದು ಕೇಳಿಕೊಂಡು ಸಮಗ್ರವಾಗಿ ತನಿಖೆ ನಡೆಸಬೇಕು, ಈ ಸಕ್ಕರೆ ಉದ್ಯಮವನ್ನು ಉಳಿಸಬೇಕಾದರೆ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಕೂಡ ಇವತ್ತು ಹೇಳಲಿ, ಅವರನ್ನು ಕೇಳಿ, ಏನು ಮಾಡಿದ್ದಾರೆ, ಡಿ.ಸಿ.ಗೆ ಹೇಳಲಿಕ್ಕೂ ಆಗಿಲ್ಲ, ದಯವಿಟ್ಟು ಇದನ್ನು ಸಿ.ಒ.ಡಿ ಮುಖಾಂತರ ತನಿಖೆ ಮಾಡಿಸಬೇಕು. ಒಂದು ವಿಚಾರಣೆ ಆಗಬೇಕೆಂದು ಹೇಳಿ ಇಡೀ ರಾಜ್ಯದಲ್ಲಿ ಸಕ್ಕರೆ ಉದ್ದಿಮೆ ಏನಾದರೂ ಉಳಿಯಬೇಕಾದರೆ ಅಗ್ರಿಕಲ್ಚರ್ ಹಾಗೂ ಶುಗರ್ ಡಿಪಾರ್ಟ್‌ಮೆಂಟ್ ಕೂಡಿ ಮಾಡಬೇಕಾಗುತ್ತದೆ. ನಾನು ಹೇಳುವುದೇನೆಂದರೆ, ಇಷ್ಟೆಲ್ಲಾ ತಳಿಗಳನ್ನು ತರಿಸುತ್ತಿದ್ದೇವೆ. ಹೊಸ ಕಬ್ಬಿನ ತಳಿಯ ಬಗ್ಗೆ ಸಂಶೋಧನೆಯನ್ನು ಮಾಡಬೇಕಾದರೆ ಒಂದು ಪೈಸೆ ಕೊಟ್ಟಿಲ್ಲ, ರೀಸರ್ಚ್ ಸ್ಟೇಷನ್‌ಗೆ ಇವತ್ತು ದುಡ್ಡಿಲ್ಲ, ಉದಾಸಿಯವರೇ ಒಪ್ಪಿಕೊಳ್ಳುವಿರಾ? ಹೊಸ ತಳಿ ನಮ್ಮಲೇ ಪ್ರಾರಂಭ ಮಾಡಿದ್ದಾರೆ. ನಾನು ಶ್ರೀನಿವಾಸಗೌಡರಿಗೆ ತೋರಿಸಿದ್ದೇನೆ. ಈ ಬಿಳಿ ರೋಗ ಬರುತ್ತದೆ ಅದನ್ನು ತಡೆ ಹಿಡಿಯಲಿಕ್ಕೆ, ಒಂದು ತಳಿಯನ್ನು ಕಂಡು ಹಿಡಿದಿದ್ದಾರೆ. ಎಲ್ಲಾ ಕಬ್ಬಿನ ರೈತರಿಗೋಸ್ಕರ ಅವರು ಪ್ರಾರಂಭ ಮಾಡಿದ್ದಾರೆ. ಅದಕ್ಕೆ ಸರ್ಕಾರದಿಂದ ಎಷ್ಟು ದುಡ್ಡು ಕೊಟ್ಟಿದ್ದೀರಿ, ಮಹಾರಾಷ್ಟ್ರದವರು ಯಾವ ರೀತಿ ಇವತ್ತು ಹೊಸ ತಳಿಗಳನ್ನು ಪ್ರಾರಂಭ ಮಾಡಿದ್ದಾರೆ. ಇದಲ್ಲದೆ ಮತ್ತೊಂದು ಸಲಹೆಯನ್ನು ಕೊಟ್ಟಿದ್ದರು, ಏನು ಒಂದು ಟನ್‌ಗೆ ಹತ್ತು ರೂ. ಇಡಿ. farmers ready ಕೊಡುವುದಕ್ಕೆ ಒಂದು ಫಂಡ್ ಮಾಡಿ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಿಂದ ಕೊಡುವಂತದ್ದು, ಅಭಿವೃದ್ಧಿ ಕ್ಷೇತ್ರಕ್ಕೆ ಏನೂ ಇಲ್ಲ, ಅದರ ಕಡೆ ಲಕ್ಷ್ಯ ಇಲ್ಲ, ದಯವಿಟ್ಟು ಈ ರಾಜ್ಯದ ಕಬ್ಬಿನ ಉದ್ಯೋಗ ಉಳಿಸಬೇಕಾದರೆ ರೈತರ ಬಗ್ಗೆ ನಿಜವಾಗಿ ನಿಮಗೆ ಕಳಕಳಿ ಇದ್ದರೆ. . . .

ಶ್ರೀ ಬಿ.ಆರ್. ಪಾಟೀಲ್ :- ಅಧ್ಯಕ್ಷರೆ, ಮೊದಲು ನೋಟಿಸ್ ಕೊಟ್ಟಿರುವುದು ನಾವು ನಮಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್ :– ನೋಟಿಸ್ ಕೊಟ್ಟವರು ಮೊದಲು ಮಾತನಾಡಬೇಕು, ಇದು ಯಾವ ನಿಯಮ?

ಶ್ರೀ ವೈಜನಾಥ್ ಪಾಟೀಲ್ :– ನಾವು ನೋಟಿಸ್ ಕೊಟ್ಟವರು.

ಛೇರ್ಮನ್ :– ನಿಮಗೂ ಅವಕಾಶ ಕೊಡುತ್ತೇನೆ. ಎ.ಬಿ. ಪಾಟೀಲ್ ನೀವು ಮುಗಿಸಿ.

ಶ್ರೀ ಎ.ಬಿ. ಪಾಟೀಲ್ :– ಇಡೀ ರಾಜ್ಯದ ಕಬ್ಬಿನ ಸಮಸ್ಯೆ ಬಗ್ಗೆ ರೈತರಿಗೆ ನೀವು ಏನಾದರೂ ನ್ಯಾಯ ಕೊಡಿಸಬೇಕಾಗಿದ್ದರೆ ಈ ಸರ್ಕಾರ ಅದರ ಬಗ್ಗೆ ಚಿಂತನೆ ಮಾಡಬೇಕು. ಇದು 65.00 ರೂ.ಗಳನ್ನು ಪರ್ಚೇಸ್ ಟ್ಯಾಕ್ಸ್ ಅನ್ನು ಪ್ರತಿ ಟನ್ ಮೇಲೆ ಕಡಿಮೆ ಮಾಡಬೇಕು. ಮಹಾರಾಷ್ಟ್ರದಿಂದ ಇವತ್ತು ಯಾವ ರೀತಿ ಟ್ರಾನ್ಸ್‌ಪೋರ್ಟ್ ಬಿಲ್ ಕೊಡುತ್ತಾರೆ, ಸಹಾಯ ಧನ ಕೊಡುತ್ತಿದ್ದಾರೆ, ಅದನ್ನೂ ಕೂಡ ಇವತ್ತು ಕೊಡಬೇಕು ಮತ್ತು ಹೊಸ ತಳಿಗಳನ್ನು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನವರು ಸಂಶೋಧನೆ ಮಾಡಲಿಕ್ಕೆ ಹೆಚ್ಚಿನ ಹಣವನ್ನು ಕೊಟ್ಟು ಅಭಿವೃದ್ಧಿಗೊಳಿಸಿ ಅದನ್ನು ಬೆಳೆಸಬೇಕು ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್ :– ವೈಜನಾಥ ಪಾಟೀಲ್, ಪ್ರಕಾಶ್ ಕುಳಿತುಕೊಳ್ಳಿ ಅವರದಾದ ಮೇಲೆ ನಿಮಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ) :– ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಗಾರರ ಸಮಸ್ಯೆ ಇಷ್ಟು ದೊಡ್ಡದಾಗಿರುವುದು ಇದೇ ಮೊದಲನೇ ಸಲ. ಕರ್ನಾಟಕದಲ್ಲಿ ಮೊದಲೆಂದೂ ಉದ್ಭವವಾಗಿಲ್ಲ. ಎರಡು ಸಮಸ್ಯೆಗಳಿವೆ, ಒಂದು ಕಬ್ಬು ಏನು ಬೆಳೆದಿದ್ದಾರೆ, ಅದನ್ನು ಫ್ಯಾಕ್ಟರಿಗೆ ಹಾಕಿದ್ದಾರೆ, ಕೆಲವರಿಗೆ ರೇಟ್ ಸರಿಯಾಗಿ ಸಿಗುತ್ತಿಲ್ಲ. ಸಮಯಕ್ಕೆ ಸರಿಯಾಗಿ ಹಣ ಸಿಗುತ್ತಿಲ್ಲವೆಂಬುದು ಒಂದು ಸಮಸ್ಯೆ. ಮತ್ತೊಂದು ಕಡೆ ಬಹಳಷ್ಟು ರೈತರಿಂದ ಕಬ್ಬೇ ಹೋಗಿಲ್ಲ, ಹೋಗುವ ಪರಿಸ್ಥಿತಿಯೂ ಇಲ್ಲ. ಸುಮಾರು 30, 40 ಲಕ್ಷ ಟನ್ ಕಬ್ಬು ಹೆಚ್ಚಾಗಿ ಹಾಗೆ ಉಳಿಯುತ್ತದೆ ಎಂದು ಒಂದು ಅಂದಾಜಿದೆ. ಇದಕ್ಕೆ ಕಾರಣ, ಕಾರ್ಖಾನೆಗಳು ಕೂಡ ಸಮಯಕ್ಕೆ ಸರಿಯಾಗಿ ಪ್ರಾರಂಭ ಮಾಡಿಲ್ಲ, ಸೆಪ್ಟೆಂಬರ್‌ನಲ್ಲಿ ಪ್ರಾರಂಭವಾಗಬೇಕಿತ್ತು ಬಹಳ ತಡವಾಗಿ ಮಾಡಿದರು. ಆದ್ದರಿಂದ ಇವತ್ತು ಕಬ್ಬು ಬೆಳೆಗಾರರ ಸಮಸ್ಯೆ ಬಹಳ ದೊಡ್ಡದಾಗಿದೆ. ಇವತ್ತು ಕಬ್ಬು ಬೆಳೆಗಾರರು, ಬೇರೆ ಬೇರೆ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಕೇಳಿದ್ದೇವೆ. ಆದರೆ ಕಬ್ಬು ಬೆಳೆಗಾರರು, ಮೊದಲನೇ ಸಲ

ಬೀದರ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದಕ್ಕೆ ಕಾರಣ ಹೇಳಿ, ನಮ್ಮ ಕಬ್ಬಿನ ಮೇಲೆ ಭರವಸೆಯೇ ಇಲ್ಲ, ಅದನ್ನು ಉಳಿಯುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ರೈತರು ಫಾಸಿ ಹಾಕಿಕೊಳ್ಳುತ್ತಾರೆ. ಆತ್ಮಹತ್ಯೆ ಮಾಡಿಕೊಂಡವರು ಬೀದರ್‌ನಲ್ಲೆ, ಅನಂತರ ಮಂಡ್ಯದಲ್ಲಿ ಕೂಡ ಒಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ. ಮುಂದೆ ಎಷ್ಟು ಜನ ಈ ರೀತಿ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬರುತ್ತದೆಂದು ಗೊತ್ತಿಲ್ಲ. ಏಕೆಂದರೆ ಕಬ್ಬು ಹೋಗುವ ಭರವಸೆಯೇ ಇಲ್ಲ, ಸುಮಾರು 30, 40, ಲಕ್ಷ ಟನ್ ಹಾಗೇ ಉಳಿಯುತ್ತದೆ. ಉಳಿದಿರುವ ಕಬ್ಬು ಹೋಗದಿದ್ದರೆ, ರೈತರ ಪರಿಸ್ಥಿತಿ ಏನು? ಈಗೆಷ್ಟೋ ರೈತರು ನಮ್ಮ ಹೊಲದಲ್ಲಿರುವ ಕಬ್ಬು ಹೋದರೆ ಸಾಕೆನ್ನುತ್ತಾರೆ. ಹೋದ ವರ್ಷ ಒಳ್ಳೆಯ ರೇಟ್ ಸಿಕ್ಕಿತ್ತು. ಅದರ ಸಲುವಾಗಿ ರೈತರು ಇದ್ದಿದ್ದು ಎಲ್ಲವನ್ನು ಮಾರಿಕೊಂಡು ಬಾಕಿ ಮಾಡಿ, ಮತ್ತೊಂದು ಮಾಡಿ ಒಳ್ಳೆಯ ರೀತಿಯಲ್ಲಿ ಕಬ್ಬು ಬೆಳೆಸಿದ್ದಾರೆ. ಬಹಳ ಖರ್ಚು ಮಾಡಿದ್ದಾರೆ. ಆದರೂ ಕೂಡ ಇವತ್ತು ಕಬ್ಬು ಹೋಗುವ ಪರಿಸ್ಥಿತಿಯೇ ಇಲ್ಲ. ಕಾರಣ ಸರ್ಕಾರದ ನೀತಿ, ಮತ್ತೊಂದು ಕಡೆಗೆ ಪ್ರೈವೇಟ್ ಕಾರ್ಖಾನೆಗಳು ಬಂದವು, ಅವರು ಕೆಲವು Bureaucrats ಅನ್ನು ಇಟ್ಟುಕೊಂಡು ಅವರ ಸ್ಥಾನಮಾನಗಳು ಕೂಡ ಇದಕ್ಕೆ ಕಾರಣವಿದೆ, ಇವತ್ತು ನಮ್ಮ ಕರ್ನಾಟಕದಲ್ಲಿ ಮೊಲಾಸಿಸ್ ಇದೆ, ಮೊಲಾಸಿಸ್ 500 ರೂ.ಗಳಿಗೆ ಒಂದು ಟನ್ ಮಾಡಿದ್ದಾರೆ. ಅದು ಹೊರಗಿನ ರಾಜ್ಯಗಳಿಗೆ, ಹೊರ ದೇಶಕ್ಕೆ ಹೋಗಲಿಕ್ಕೆ ಸರ್ಕಾರ ಅನುವು ಮಾಡಿಕೊಡುತ್ತಿಲ್ಲ. ಶರದ್ ಪವಾರ್‌ರವರು ಮೂರು ವರ್ಷಗಳ ಹಿಂದೆ 5,000 ರೂಪಾಯಿ ಟನ್ ಮೊಲಾಸಿಸ್ ಹೋಗಬೇಕೆಂದು ಆರ್ಡರ್ ಮಾಡಿದ್ದರು. ಆಗ ರೈತರು ಖುಷಿಯಿಂದಿದ್ದರು. ಆದರೆ ನಮ್ಮ ಕರ್ನಾಟಕದಲ್ಲಂತೂ ಇವತ್ತು ಮೊಲಾಸಿಸ್ ಸರ್‌ಪ್ಲಸ್ ಆಗಿದೆ. ಹೋಗುತ್ತಿಲ್ಲ, ಇವರು ಕಬ್ಬಿನದು ಲೆಕ್ಕ ಇಡುತ್ತಿಲ್ಲ, ಬರೇ ಸಕ್ಕರೆಯದು ಮಾತ್ರವಷ್ಟೇ ಲೆಕ್ಕ ಇಡುತ್ತಾರೆ. ಕಬ್ಬು ಬೆಳೆಯಿಂದ ಮೊಲಾಸಿಸ್ ತಯಾರಾಗುವುದು, ಸಾರಾಯಿ ತಾಯಾರಾಗುವುದು, ಕಾಗದ ತಯಾರು ಆಗುತ್ತದೆ. ಎಥೆನಾಲ್ ತಯಾರಾಗುತ್ತದೆ, ಅದರಿಂದ ಪವರ್ ಜನರೇಷನ್ ಆಗುತ್ತದೆ. ಇದರಿಂದ ಎಲ್ಲಾ ಲಾಭ ಬೇರೆ ಜನರದು. ಪವರ್ ಜನರೇಟ್ ಮಾಡುವವರು ಬೇರೆ ಕಾರ್ಖಾನೆಗಳಿಗೆ ಕೊಡುತ್ತಾರೆ. ಅವರಿಗೆಲ್ಲಾ ಅದರ ಲಾಭ ಹೋಗುತ್ತದೆ. ಆದರೆ ರೈತರಿಗೆ ಸಿಗುವುದಿಲ್ಲ. ಈಗ ಪವರ್ ಜನರೇಷನ್ ಕಡಿಮೆ ಇದೆ. ಇಂಥದ್ದಕ್ಕೆಲ್ಲಾ ಅಲೋ ಮಾಡಬೇಕು. ಮೂರ್‍ನಾಲ್ಕು ವರ್ಷಗಳಿಂದ ಎಷ್ಟೋ ಕಾರ್ಖಾನೆಗಳು ಅಪ್ಲಿಕೇಷನ್ ಕೊಟ್ಟಿದ್ದಾರೆ. ಆದರೆ ಅವರೊಂದಿಗೆ ಅಗ್ರಿಮೆಂಟ್ ಮಾಡಿಕೊಳ್ಳುತ್ತಿಲ್ಲ, ಕಾರಣವೇನು? ಅವರು ಬಂದು ಪ್ರೈವೇಟ್ ಆಗಿ ಭೇಟಿಯಾಗುತ್ತಿಲ್ಲ. ಇದರ ಬಗ್ಗೆ 4 ವರ್ಷಗಳಿಂದ ಕೇಳುತ್ತಿದ್ದಾರೆ. ಮೊದಲು ನಮ್ಮಲ್ಲಿ ಪವರ್ ಜನರೇಷನ್ ಪ್ರಾಬ್ಲಮ್ ಇತ್ತು. ಅನುಮತಿ ಸಿಕ್ಕಿದರೆ ಎಷ್ಟು ಬೇಕಾದರೂ ಅಷ್ಟು

ಪವರ್ ಜನರೇಷನ್ ಮಾಡಿಕೊಳ್ಳಲಿಕ್ಕೆ ಅಗ್ರಿಮೆಂಟ್ ಮಾಡಿಕೊಳ್ಳಬಹುದು. ಅದು ಒಂದು ಕಡೆ ರೈತರಿಗೂ ಲಾಭವಾಗುತ್ತದೆ. ಮತ್ತೊಂದು ಕಡೆ ಪವರ್ ಹೆಚ್ಚಿಗೆ ಜನರೇಟ್ ಆಯಿತು, ಆ ಕಡೆ ಸರ್ಕಾರ ಗಮನಹರಿಸುತ್ತಿಲ್ಲ. ಈಗ 30-40 ಲಕ್ಷ ಟನ್ ಏನು ಹೆಚ್ಚಾಗುತ್ತದೆ, ಅದನ್ನು ಅವರು ಏನು ಮಾಡಬೇಕೆಂದು ಗೊತ್ತಾಗುತ್ತಿಲ್ಲ ಬಹುಶಃ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವುದು, ಇವರ ಸಂಖ್ಯೆ ದೇಶದಲ್ಲಿ ಹೆಚ್ಚಾಗಿ ವಿಶೇಷವಾಗಿ ಕರ್ನಾಟಕದಲ್ಲಿ ಹೆಚ್ಚು ಆಯಿತು. ಈ ರೈತರ ಬಗ್ಗೆ ಯಾವುದನ್ನು ಸರಿಮಾಡಬೇಕು, ಅವರಿಗೆ ಯಾವ ಸವಲತ್ತು ಕೊಡಬೇಕು ಎಂದು ಅವರಿಗೆ ಕರೆದು ಮಾತನಾಡುವಂಥ ಸೌಜನ್ಯ ಕೂಡ ಇಲ್ಲ. ಸುಮ್ಮನೆ formal ಆಗಿ ಮಾತನಾಡುವುದು, ಬಿಟ್ಟುಬಿಡುವುದು, ಕಾರ್ಖಾನೆಯನ್ನು ಇಂಥ ಟೈಮಿಗೆ ಪ್ರಾರಂಭ ಮಾಡಿ ಅಥವಾ ಹೆಚ್ಚಿನ ರೇಟ್ಸ್ ಫಿಕ್ಸ್ ಮಾಡುವುದು ಸರ್ಕಾರ ಅವರ ಮೇಲೆ ಒತ್ತಾಯ ತರಬೇಕು. ಕಾರ್ಖಾನೆಯವರ ಮೇಲೆ ಒತ್ತಾಯ ತರಬೇಕು. ಅದನ್ನು ಮಾಡುತ್ತಿಲ್ಲ. ರೈತರು ಅಂದರೆ ಅವರು ನಮ್ಮ ರಾಜ್ಯದಲ್ಲಿ ಇಲ್ಲ. ಏನು ಮಾಡಿದರೂ ನಡೆಯುತ್ತದೆಂದು ಬಿಟ್ಟುಬಿಟ್ಟಿದ್ದಾರೆ. ಇವತ್ತು ಇಂಥ ಪರಿಸ್ಥಿತಿಯಲ್ಲಿ ಏನು ಮಾಡಬೇಕು? ಒಟ್ಟು ರೈತರೇ ಪ್ರಾಬ್ಲಮ್‌ನಲ್ಲಿದ್ದಾರೆ. ವಿಶೇಷವಾಗಿ ಕಬ್ಬಿನ ಬೆಳೆಗಾರರು ಈ ವರ್ಷ ದೊಡ್ಡ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ವರ್ಷ ಮಹಾರಾಷ್ಟ್ರದಲ್ಲಿ ಒಂದು ವ್ಯವಸ್ಥೆ ಮಾಡಿದ್ದಾರೆ. ಪರ್ಚೇಸ್ ಟ್ಯಾಕ್ಸ್ ಕಡಿಮೆ ಮಾಡಿದ್ದಾರೆ. per ton purchase tax ರಾಜ್ಯ ಸರ್ಕಾರದವರು ಅದನ್ನು ಮಾಡಬಹುದಿತ್ತು, ಬಜೆಟ್ ಭಾಷಣದಲ್ಲಿ ಹೇಳಬಹುದಿತ್ತು, ಇದು ಇವರ ಕೈಯಲ್ಲಿದೆ. ಅದೇ ತರಹ ಮಹಾರಷ್ಟ್ರದಲ್ಲಿ ಏನು ಮಾಡಿದ್ದಾರೆಂದರೆ ಅವರು ಮೇ-ಜೂನ್ ವರೆಗೆ ನಡೆಸುವಂಥ ವ್ಯವಸ್ಥೆ ಮಾಡಿದ್ದಾರೆ. ಒಂದು ವೇಳೆ ಇಳುವರಿಯಲ್ಲಿ ಪರ್ಸೆಂಟೇಜ್ 11% ನಿಂದ 10% ಬಂದರೆ ಸರ್ಕಾರದವರೆ ಅವರಿಗೆ ಸಬ್ಸಿಡಿ ಕೊಡುವುದು. ಅಂಥ ವ್ಯವಸ್ಥೆಯನ್ನಾದರೂ ಸರ್ಕಾರ ಮಾಡಬಹುದು ಮಾಡದಿದ್ದರೆ ರೈತರು ಕಬ್ಬು ಬೆಳೆಗಾರರು ಉಳಿಯುವುದು ಸಾಧ್ಯವೇ ಇಲ್ಲ. ಕೇಂದ್ರದಿಂದ ಒಂದು ಫಂಡ್ ಇದೆ, Karnataka Sugarcane Development Fund ಎಂದು. ಆ ಫಂಡ್ ಕೊಡುವುದೆಲ್ಲಾ ಪ್ರೈವೇಟ್‌ನವರಿಗೆ ಕೊಡುತ್ತಾರೆ. ಬಹಳಷ್ಟು ಕೋ ಆಪರೇಟಿವ್ ಶುಗರ್ ಫ್ಯಾಕ್ಟರಿಯವರು ಹೇಳಿದರು. ಏಕೆಂದರೆ ಸಾವಿರಾರು ಕೋಟಿಯಷ್ಟು ಉತ್ತರ ಪ್ರದೇಶ ಅಲ್ಲಿ ಇಲ್ಲಿ ಹೋಗುತ್ತಿತ್ತು. ಈಗ ಇಲ್ಲಿ ಆ ಫಂಡ್‌ಅನ್ನು ಕೊಟ್ಟರೆ ಪ್ರೈವೇಟ್‌ನವರಿಗೆ ಕೊಡುತ್ತಾರೆ. ಕೋ ಆಪರೇಟಿವ್‌ನವರಿಗೆ ಕೊಡಬೇಕು, ಕೊಡುವುದಿಲ್ಲ. ಏಕೆಂದರೆ ಅವರು ಅಲ್ಲಿ ಹೋಗಿ ಧಂದೆ ಮಾಡುತ್ತಾರೆ. ಪ್ರೈವೇಟ್‌ನವರಿಗೆ ಕೊಡುತ್ತಾರೆ. ಆ ದೃಷ್ಟಿಯಿಂದ ಕೋ ಆಪರೇಟಿವ್ ಶುಗರ್ ಫ್ಯಾಕ್ಟರಿಗೆ ಕೊಡಲಿಕ್ಕೆ ಸಾಧ್ಯವಿಲ್ಲ, ಬೆಳೆಯಲಿಕ್ಕೂ ಸಾಧ್ಯವಿಲ್ಲ. ಈಗ ಪ್ರೈವೇಟ್‌ನವರು ಬೇಕಾದ ಹಾಗೆ exploitation ಮಾಡುತ್ತಿದ್ದಾರೆ. ಇದರಿಂದ ರೈತರಿಗೂ ಪ್ರಾಬ್ಲಮ್ ಆಗಿ ಏನಾದರೂ ಆಗಿ

ಕಬ್ಬು ಹೋಗಲಿ ಎಂದು ಇವರು ಬೇಡಿಕೊಳ್ಳುತ್ತಿದ್ದಾರೆ. ಅವರು ಹೆಚ್ಚು ರೇಟ್ ಅನ್ನು ಕೇಳುತ್ತಿಲ್ಲ. ಕೆಲವು ಕಡೆಯಂತೂ ಅವರು ರೊಕ್ಕವನ್ನು ಕೇಳುತ್ತಿಲ್ಲ, ಇವತ್ತೇ ಕೊಡಿ, ನಾಳೆ ಕೊಡಿ ಎಂದು ಕೇಳುತ್ತಿಲ್ಲ. ಕಬ್ಬು ಕಟಾವ್ ಮಾಡಿಕೊಂಡು ಹೋದರೆ ಸಾಕು. ಇಲ್ಲದಿದ್ದರೆ ಆ ಕಬ್ಬು ಕಟ್ ಮಾಡುವುದಕ್ಕೆ ಅವರಿಗೆ ಶಕ್ತಿ ಇಲ್ಲ. ಅವರಲ್ಲಿ ಸಾಮರ್ಥ್ಯ ಇಲ್ಲ, ಅವರಿಗೆ ಅದಕ್ಕೆಷ್ಟು ಹಣ ಒದಗಿಸಬೇಕು, ಅದಕ್ಕೂ ಕೂಡ ಅವರ ಹತ್ತಿರ ಹಣವಿಲ್ಲ. ಇಂಥ ಪರಿಸ್ಥಿತಿಯಲ್ಲಿ ಸರ್ಕಾರ ಅವರ rescue ಗೆ ಬರಬೇಕು. ಪರ್ ಟನ್ ಗೆ ಎಷ್ಟು ಲಾಸ್ ಆಗುತ್ತದೆ ಅಷ್ಟು ಸಬ್ಸಿಡಿ ಕೊಡಬೇಕು. ರೈತರ ಪರ ಬಜೆಟ್ ಮಾಡಿ ಇದರ ಬಗ್ಗೆ ಬಜೆಟ್ ಭಾಷಣದಲ್ಲಿ ಹೇಳಬೇಕಾಗಿತ್ತು, ಹೇಳದಿದ್ದರೂ ಈಗಲಾದರೂ ಸರ್ಕಾರ ನಿರ್ಣಯ ತೆಗೆದುಕೊಳ್ಳಬೇಕು, ಸರ್ಕಾರ ತೆಗೆದುಕೊಳ್ಳಬಹುದು, ನೂರಾರು, ಸಾವಿರಾರು ಕೋಟಿ ರೂ.ಗಳನ್ನು ಏನು ರೈತರ ಮೇಲಿನ ಸಾಲ ಮನ್ನಾ ಮಾಡಿದ್ದೇವೆಂದು ಸರ್ಕಾರ ಹೇಳಿದೆ, ವಿಶೇಷವಾಗಿ ಕಬ್ಬು ಬೆಳೆಗಾರರ ಬಗ್ಗೆ ಇವತ್ತು ಸರ್ಕಾರದವರು ಗಮನ ಹರಿಸುವುದು ಅತ್ಯಾವಶ್ಯಕವಿದೆ. ಇಲ್ಲದೇ ಹೋದರೆ ಮುಂದೆ ಯಾರೂ ಕಬ್ಬು ಹಾರ್ವೆಸ್ಟ್ ಮಾಡಲಿಕ್ಕೆ ಸಾಧ್ಯವಿಲ್ಲ. ಕಬ್ಬುಕಟಾವ್ ಮಾಡುವುದಕ್ಕೆ ಸಾಧ್ಯವಿಲ್ಲ. ಅದು ಬೇರೆ ಕಡೆಗೆ ಹಾಕುವುದು ಸಾಧ್ಯವಿಲ್ಲ, ಆ ದೃಷ್ಟಿಯಿಂದ ಎಷ್ಟೋ ಪ್ರೈವೇಟ್ ಸಣ್ಣ ಸಣ್ಣ ಕಾರ್ಖಾನೆಯವರು ಸಾಕಷ್ಟು exploitation ಮಾಡುತ್ತಿದ್ದಾರೆ. ಆದರೂ ಕೂಡ ರೈತರು ಕಬ್ಬು ಹೋದರೆ ಸಾಕು ಎಂದಿದ್ದಾರೆ. no loss, no gain ಆದರೂ ಪರವಾಗಿಲ್ಲವೆನ್ನುತ್ತಾರೆ. At least ಮುಂದೆ ಏನಾದರೂ plantation ಮಾಡಲಿಕ್ಕೆ ಅವಕಾಶ ಸಿಕ್ಕರೆ ಸಾಕು ಎನ್ನುವಂಥ ಪರಿಸ್ಥಿತಿ ಇತ್ತು, ಆದರೆ ದುರ್ದೈವದಿಂದ ಸರ್ಕಾರ ಇದರ ಬಗ್ಗೆ ಸಾಕಷ್ಟು ಮೌನ ವಹಿಸಿದೆ. as if ಅವರಿಗೆ ಇದು ಗೊತ್ತೇ ಇಲ್ಲ. ಕರ್ನಾಟಕದಲ್ಲಿ ಇದರ ಸಮಸ್ಯೆಯಿಲ್ಲ ಎನ್ನುವ ತರಹ ವರ್ತನೆ ಮಾಡುತ್ತಿದ್ದಾರೆ. ಈ ರೀತಿ ಇದ್ದರೆ ಅವರು ಯಾವ ಕಡೆಗೆ ಹೋಗಬೇಕು, ಸರ್ಕಾರ ಅವರ rescue ಗೆ ಬರದಿದ್ದರೆ ಎಲ್ಲಿಗೆ ಹೋಗಬೇಕು, ಮೊದಲೇ ರೈತರು ಯಾವಾಗಲೂ ಒಂದು ಸಾರಿ ಒಳ್ಳೆಯ ರೇಟ್ ಬರುತ್ತದೆಂದು ಅದರ ಮೇಲೆ ಸಾಕಷ್ಟು ಹಣ ಹಾಕುವುದು, fertilizer ಹಾಕುವುದು, ಮತ್ತೊಂದು ಹಾಕುವುದು, ನೀರಾವರಿ ಮಾಡುವುದು, ಪಂಪ್‌ಸೆಟ್ ತರುವುದು, ಬಹಳಷ್ಟು ಖರ್ಚು ಮಾಡಿದ್ದಾರೆ. ಈಗ ವಾಪಸ್ಸು ಕೊಡಿ ಎಂದರೆ ಸಾಧ್ಯವಿಲ್ಲ, At least ಅವರು ಕಬ್ಬನ್ನು ಕಟಾವ್ ಮಾಡಿ ಬೇರೆ ಕಡೆಗೆ ಒಯ್ದು ಎಲ್ಲಾದರೂ ಹಾಕಲಿಕ್ಕೆ ಕೂಡ ಅವರಿಗೆ ಶಕ್ತಿ ಇಲ್ಲ. ಸರ್ಕಾರ ಅವರ ಸಹಾಯಕ್ಕೆ ಬರದೇ ಇದ್ದರೆ ಅವರು ಉಳಿಯಲಿಕ್ಕೆ ಸಾಧ್ಯವಿಲ್ಲ. ಕಬ್ಬು ಬೆಳೆಗಾರರು ಉಳಿಯಲಿಕ್ಕೆ ಸಾಧ್ಯವಿಲ್ಲ. ಆ ದೃಷ್ಟಿಯಿಂದ ಸರ್ಕಾರ ಪರ್ ಟನ್ ಇಂತಿಷ್ಟು ಎಂದು ಅದಕ್ಕೆ ಒಂದು ಪರ್ಸೆಂಟ್ ಕಡಿಮೆಯಾಯಿತು ಎಂದರೆ 100–00 ರೂ. 2% ಎಂದರೆ 200–00 ರೂ.

ಈ ತರಹ ಒಂದು ಅವರಿಗೆ compensation ಕೊಡುವ ವ್ಯವಸ್ಥೆ ಮಾಡಬೇಕು. ಈ ರೀತಿ ಸರ್ಕಾರ ಮನಸ್ಸು ಮಾಡಿದರೆ ಮಾಡಬಹುದು. ತೊಗರಿಬೇಳೆ ಬೆಳೆಗಾರರು ಬಹಳ ಸಂಕಷ್ಟದಲ್ಲಿದ್ದರು 1991-92 ರಲ್ಲಿ ಅವರು ಹೋರಾಟ ಮಾಡಿದ್ದಾಗ ಮೊಯಿಲಿ ಅವರು ಮುಖ್ಯಮಂತ್ರಿಯಾಗಿದ್ದಾಗ ಸರ್ಕಾರದವರು 12.00 ಕೋಟಿ ರೂ.ಗಳ compensation ಒಂದೆರಡು ಜಿಲ್ಲೆಗಳಿಗೆ ಕೊಟ್ಟರು. ಒಂದು ಎಕರೆಗೆ 500 ರೂ. ಪಾವತಿ ಮಾಡಿದರು, ಲಾಭವಾಯಿತು, ಹಾಗೆ ಸರ್ಕಾರ ಯಾವುದಕ್ಕಾದರೂ ನಿಗಾವಹಿಸಿ ರೈತರನ್ನು ಉಳಿಸಬಹುದು ಆ ಕಡೆ ಪ್ರಯತ್ನ ಮಾಡಬೇಕು, ಆ ಕಡೆ ಗಮನಹರಿಸಬೇಕು, ಏಕೆಂದರೆ ಇವತ್ತು ರೈತ ಪರ ಸರ್ಕಾರ ಎಂದು ಹೇಳುತ್ತಿದ್ದೀರಿ, ಇವತ್ತು ಒಂದೇ ವಿಷಯದ ಮೇಲೆ ಬಹುಶಃ ತಮಗೆ ರೆಕಾರ್ಡ್ ಆಗಬೇಕು, ಆ ದೃಷ್ಟಿಯಿಂದ ಸರ್ಕಾರ ಎಷ್ಟೋ ಸಾವಿರ ಕೋಟಿ ರೂ.ಗಳನ್ನು ಬೇರೆ ಬೇರೆಯವರಿಗೆ ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ, ಆದರೆ ಈ ಕಬ್ಬು ಬೆಳೆಗಾರರನ್ನು ಉಳಿಸಲಿಕ್ಕೆ ಪ್ರಯತ್ನ ಮಾಡಬೇಕು. ಕಾರ್ಖಾನೆಯವರ ಮೇಲೆ ಒತ್ತಡ ತರಬೇಕು, ಯಾರು ಮೊಲಾಸಿಸ್ ಹೋಗುತ್ತಿಲ್ಲ, ಅಂಥವರಿಗೆ ಅಲೋ ಮಾಡಬೇಕು. ಮತ್ತೆ ಕೋ ಜನರೇಷನ್ ಯಾರು ಮಾಡುತ್ತಿಲ್ಲ ಅವರಿಗೆ ಅಗ್ರಿಮೆಂಟ್ ಮಾಡಿಸಬೇಕು, ಬೇಗ ಅವರಿಗೆ ರಿಲೀಫ್ ಕೊಡಿಸಬೇಕು, ಈಗ ಎಥೆನಾಲ್ ಎಂದು ಬಂದಿದೆ ಮುಂದೆ ಸಕ್ಕರೆ ಕಾರ್ಖಾನೆಗಳನ್ನು ಸಕ್ಕರೆ ಸಲುವಾಗಿ ಯಾರೂ ತೆರೆಯುತ್ತಿಲ್ಲ. ಈಗ computation ಬಹಳ ಬರುತ್ತಿದೆ. ಈ ಎಥೆನಾಲ್ ಹಿಂದೆ ದೇಶದ ದೊಡ್ಡ ದೊಡ್ಡ ಕ್ಯಾಪಿಟಲಿಸ್ಟ್‌ನ ಕಬ್ಬಿನ ಕಡೆ ಬರುತ್ತಾರೆ. ಎಥೆನಾಲ್ ಅಂದರೆ, ಪೆಟ್ರೋಲ್, ದೊಡ್ಡ ಬೆಲೆ ಬರುತ್ತದೆ. ಬಹುಶಃ ಅವರು ಎಲ್ಲಾ ಸಣ್ಣ ಸಣ್ಣ ಕಾರ್ಖಾನೆಗಳನ್ನು ನುಂಗಿಬಿಡುತ್ತಾರೆ. ನುಂಗಿಬಿಟ್ಟು ಅವರು ಇದಕ್ಕಿಂತ ಹೆಚ್ಚು ರೇಟನ್ನು ಕೊಟ್ಟು ಇವರೆಲ್ಲಾ ಸತ್ತ ಮೇಲೆ ಪೂರ್ಣ ಅವರದ್ದೇ ಆದ ಮೇಲೆ ಈ ದೇಶದ ಕೆಲವು ಕ್ಯಾಪಿಟಲಿಸ್ಟ್ಸ್, ಇಂಡಸ್ಟ್ರೀಯಲಿಸ್ಟ್ಸ್ ಅಥವಾ ಮಲ್ಟಿ ನ್ಯಾಷನಲ್ಸ್ ಇಂಥದ್ದನ್ನು ಲೆಕ್ಕ ಹಾಕುತ್ತಾರೆ, ಇಂಥ ಸಂದರ್ಭದಲ್ಲಿ ಇದು ಒಕ್ಕಲುತನದಿಂದ ದಾಟ ಬಿಸಿನೆಸ್ ಆಗುತ್ತದೆ. ಅಮೇರಿಕಾ ದೇಶದಲ್ಲಿ ರೈತರು ಸಾಯಬಾರದು ವಿಶೇಷವಾಗಿ ಕಬ್ಬಿನದು ಇಂತಿಷ್ಟು ಎಕರೆ ಜೀವಂತವಿರಬೇಕೆಂದು ಅವರಿಗೆ ಪ್ರತಿವರ್ಷವೂ ರಿಲೀಫ್ ಕೊಡುತ್ತಾರೆ. ಏಕೆಂದರೆ ಅದು ಬೆಳೆ ಸಾಯಬಾರದು, ಸರ್ಕಾರಕ್ಕೆ ಲಾಸ್ ಆದರೂ ಸಹ ಅವರು ಉಳಿದುಕೊಳ್ಳಬೇಕೆಂದು ಮಾಡುತ್ತಾರೆ, ನಮ್ಮದಂತೂ ರೈತರ ದೇಶ. ಅಮೇರಿಕಾ ಅಂಥ ದೇಶದಲ್ಲಿ ರೈತರು ಸತ್ತರೇ ಅಥವಾ ಅದರ ಮೇಲೆ ಜೀವಂತವಿಲ್ಲ. ಅವರು ಇಂಡಸ್ಟ್ರೀಸ್ ಮೇಲೆ ಜೀವಂತ ಇರುತ್ತಾರೆ, ಬೇರೆ ಬೇರೆ ಉದ್ಯೋಗಗಳ ಮೇಲೆ ಜೀವಂತವಿದ್ದಾರೆ, ಆದರೆ ನಮ್ಮ ದೇಶದಲ್ಲಿ ರೈತರಿಂದ ಮಾತ್ರ ಈ ದೇಶ ನಡೆಯುತ್ತಿದೆ. 70% ಜನ ರೈತರಿದ್ದಾರೆ. ನಮ್ಮ ದೇಶದಲ್ಲಿ ರೈತರ ಕಡೆ ವಿಶೇಷ ಲಕ್ಷ್ಯ ವಹಿಸಬೇಕು. ನಾವೆಲ್ಲ ರೈತರ ಮಕ್ಕಳೇ. ಆದರೂ ಕೂಡ ನಾವು

ಗಮನಹರಿಸುತ್ತಿಲ್ಲ. ವಿಶೇಷವಾಗಿ ಇವತ್ತು ಒಳ್ಳೆಯ ಚರ್ಚೆಯಾಗಿದೆ. ಬೆಳಗಾಂನಲ್ಲಂತೂ ಬಹಳ ಕಬ್ಬು ಬೆಳೆಯುತ್ತಾರೆ, ಆದರೆ ಬೀದರ್, ಗುಲ್ಬರ್ಗಾದಲ್ಲಿ ದೊಡ್ಡ ಸಮಸ್ಯೆಯಿದೆ. ಗುಲ್ಬರ್ಗಾದಲ್ಲಿ ಕಬ್ಬು ಈ ವರ್ಷ ವಿಪರೀತ ಇದೆ, ಒಯ್ಯುವವರು ಇಲ್ಲ. ಬಹುಶಃ ಆತ್ಮಹತ್ಯೆ ಸಂಖ್ಯೆ ಮುಂಬರುವ ದಿವಸಗಳಲ್ಲಿ ಬಹಳ ಬೆಳೆಯುತ್ತದೆಂದು ಅನಿಸುತ್ತದೆ. ಅವರು ಉಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇಂಥ ಸಂದರ್ಭದಲ್ಲಿ ಸರ್ಕಾರ ಯಾವುದಾದರೂ ದಾರಿ ತೆಗೆದು ಅವರಿಗೆ ರಿಲೀಫ್ ಕೊಡಬೇಕು. ಅದು ಬಿಟ್ಟು ಬೇರೆ ದಾರಿಯೇ ಇಲ್ಲ. ಅವರನ್ನು ಉಳಿಸುವ ಕೆಲಸ ಮಾಡಬೇಕು. ಆಗ ಮಾತ್ರ ಕರ್ನಾಟಕ ಕಬ್ಬು ಬೆಳೆಗಾರರು ಉಳಿಯುತ್ತಾರೆ. ಇಲ್ಲದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳದ ಹೊರತು ಬೇರೆ ದಾರಿಯೇ ಇಲ್ಲ. ಆ ದೃಷ್ಟಿಯಿಂದ ಸರ್ಕಾರದವರು ವಿಶೇಷ ಲಕ್ಷ್ಯ ವಹಿಸಿ, ಮತ್ತೆ ಪ್ರೈವೇಟ್ ಕಾರ್ಖಾನೆಯವರು ಏನು exploitation ಮಾಡುತ್ತಿದ್ದಾರೆ. ಈಗಾಗಲೇ ಎ.ಬಿ. ಪಾಟೀಲರು ಮಾತನಾಡಿದರು, ಅವರು ಸಾಕಷ್ಟು exploitation ಬಗ್ಗೆ ಮಾತನಡಿದರು, ಆ ವೇವ್ ಬ್ರಿಡ್ಜ್ ಹೇಗೆ ಇಡುತ್ತಾರೋ, ಯಾವ ತರಹ ಅಳೆಯುತ್ತಾರೋ, ಎಷ್ಟು ಕೊಡುತ್ತಾರೋ, ಗೊತ್ತಿಲ್ಲ ಅವರನ್ನು ನೋಡುವವರು ಇಲ್ಲ. ಸರ್ಕಾರ ರೈತರ ಪರವಾಗಿ ನಿಂತು ಅವರ ಮೇಲೆ ಕ್ರಮವನ್ನು ಕೈಗೊಳ್ಳಬೇಕು. ಎಷ್ಟು ಕಾರ್ಖಾನೆಗಳ ವಿರುದ್ಧ ಇವತ್ತು ಕ್ರಮ ಕೈಗೊಂಡಿದ್ದಾರೆ? ನಮ್ಮ Sugar Director 4 ವರ್ಷದಿಂದ ಅವರೇ ಇದ್ದಾರೆ. ಒಬ್ಬರು ಒಂದೇ ಪೋಸ್ಟಿನಲ್ಲಿ ಅಷ್ಟು ವರ್ಷ ಇರಬಾರದು ಅಂತ ಹೇಳುತ್ತಾರೆ. ಮತ್ತೆ ಅವರು ಸರ್ಕಾರವನ್ನು mislead ಮಾಡುತ್ತಾರೆ ಅಂತಲೂ ಹೇಳುತ್ತಾರೆ. ಅದು ನನಗೆ ಗೊತ್ತಿಲ್ಲ. ಆದ್ದರಿಂದ ಈ ಕಡೆಯಲ್ಲ ವಿಶೇಷ ಲಕ್ಷ್ಯ ವಹಿಸಬೇಕು. ಸರ್ಕಾರ ರೈತರ ಪರ ಅಂತ ಹೇಳುತ್ತದೆ ಆದ್ದರಿಂದ ಇವತ್ತು ಕಬ್ಬು ಬೆಳೆಗಾರರನ್ನು ಉಳಿಸಲು ಸರ್ಕಾರ ಮುಂದೆ ಬರಬೇಕು. ಅವರು ಉಳಿದರೆ ಮಾತ್ರ ಕರ್ನಾಟಕದ ರೈತವರ್ಗ ಉಳೀತದೆ. ಒಟ್ಟಿನಲ್ಲಿ ಈಗ ಅಂಥಾ ಸಂಕಟ ಬಂದಿದೆ, ಹಿಂದೆಂದೂ ಬಂದಿರಲಿಲ್ಲ. ಮುಂದೆ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಸುಡಬೇಕಾಗುತ್ತದೆ, ಸುಡುವಷ್ಟು ಹಣ ಈಗ ಇಲ್ಲ ಎಷ್ಟೋ ಕಡೆ ಸುಡುವುದಕ್ಕಿಂತ ಬೇರೆ ದಾರೀನೆ ಇಲ್ಲ. ಸುಟ್ಟ ನಂತರ ಕಟ್ ಮಾಡಿಕೊಂಡು ಎಲ್ಲಿಗೆ ಒಯ್ಯುವುದು. ಅದಕ್ಕೆ ಕೂಲಿ ಎಲ್ಲಿ ಕೊಡಬೇಕು? ಇಂಥ ಪರಿಸ್ಥಿತಿ ಇದೆ. ಆದ್ದರಿಂದ ನಾನು ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯಿಸುತ್ತೇನೆ, ಬೇಡಿಕೊಳ್ಳುತ್ತೇನೆ. ತಾವು ಈ ಎಲ್ಲದರ ಮೇಲೆ top priority ಕೊಟ್ಟು ಕಬ್ಬು ಬೆಳೆಗಾರರ ಸಮಸ್ಯೆ ಕೈಗೆತ್ತಿಕೊಳ್ಳಬೇಕು. ಅವರ ಸಂಕಷ್ಟದಲ್ಲಿ ರಿಲೀಫ್ ಕೊಡಲು ಸರ್ಕಾರ ಮುಂದೆ ಬರಬೇಕು ಅಂತ ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಪ್ರಕಾಶ್ ಹುಕ್ಕೇರಿ (ಸದಲಗ) :- ಅಧ್ಯಕ್ಷರೇ ಮೊದಲನೆಯದಾಗಿ ಸಹಕಾರಿ ತತ್ವದ ಮೇಲೇನು ಸಹಕಾರಿ ಸಕ್ಕರೆ ಕಾರ್ಖಾನೆಗಳು ನಡೆಯುತ್ತಿವೆ ಅವು ನಷ್ಟ ಅನುಭವಿಸಲು

ಕಾರಣವೇನು? ಇನ್ನು ಹಲವಾರು ವರ್ಷಗಳಿಂದ ಈ ಸಮಸ್ಯೆಯನ್ನು ತಮ್ಮ ಮುಂದೆ ತರುತ್ತಲೇ ಇದ್ದೇವೆ. ಇದರ ಬಗ್ಗೆ ತಾವು ಸಮಗ್ರ ಪರಿಶೀಲನೆ ಮಾಡಿ ಒಂದು ವರದಿ ಕೊಡಬೇಕು ಅಂತ ಕೇಳಿಕೊಳ್ಳುತ್ತೇನೆ. ಎರಡನೆಯದು ಅದನ್ನೇ ಖಾಸಗಿಯವರಿಗೆ ವಹಿಸಿಕೊಟ್ಟ ಮೇಲೆ ಅವು ಲಾಭದಲ್ಲಿ ನಡೆಯುತ್ತಿವೆ. ಮತ್ತು ಕಬ್ಬಿನ ಬೆಲೆಯನ್ನೂ ಅವರು ಹೆಚ್ಚಿಗೆ ಕೊಡುತ್ತಾರೆ. ಕಾರಣವೇನು? ಇವೆರಡು ತಾರತಮ್ಯಗಳನ್ನೂ ತಾವು ತಿಳಿಸಬೇಕು. ಮೂರನೆಯದು ಸಕ್ಕರೆ ಕಾರ್ಖಾನೆಗಳ ವೇಬ್ರಿಡ್ಜ್ ನ ತೂಕದಲ್ಲಿ ಹೆಚ್ಚೂ ಕಮ್ಮಿ ಏನು ಆಗುತ್ತಿದೆ, ಇದರ ಬಗ್ಗೆ ನಾನು APMC ಸಚಿವನಿದ್ದಾಗ ಎರಡು ವೇಬ್ರಿಡ್ಜ್‌ಗಳನ್ನು ಅಥಣಿ ತಾಲ್ಲೂಕಿನ ಬಾರ್ಡರ್‌ನಲ್ಲೊಂದು, ಚಿಕ್ಕೋಡಿ ತಾಲ್ಲೂಕಿನ ಒಂದು ಮಾಂಜ್ರದಲ್ಲಿ ಇನ್ನೊಂದು ಬೇಡಿಕಾರದಲ್ಲಿ. ಯಾಕೆಂದರೆ ರೈತ ಬೆಳೆದ ಮಾಲು, ಕಬ್ಬು ಇರಬಹುದು ಮೆಣಸಿನಕಾಯಿ ಇರಬಹುದು ತೂಕ ಮಾಡಲು ಅನುಕೂಲವಾಗಲಿ ಅಂತ APMC ಮೂಲಕ ನಾನು ಪ್ರಾರಂಭ ಮಾಡಬೇಕೆನ್ನುವುದರಲ್ಲಿ ನಿಮ್ಮ APMC secretary Nippani ಯವರು ಪ್ರಾರಂಭ ಮಾಡುವುದಕ್ಕೆ ಅಲ್ಲಿಯ ಸಕ್ಕರೆ ಕಾರ್ಖಾನೆಯವರು ಬಿಡುತ್ತಾ ಇಲ್ಲ. ದಯವಿಟ್ಟು ತಕ್ಷಣ ಆ ವೇಬ್ರಿಡ್ಜ್‌ಗಳನ್ನು ಪ್ರಾರಂಭ ಮಾಡಿದರೆ ಜನರು ಅವುಗಳಲ್ಲಿ ಪುಕ್ಕಟೆಯಾಗಿ APMC ಮುಖಾಂತರ ತೂಕ ಮಾಡಿಕೊಂಡು ಸಕ್ಕರೆ ಕಾರ್ಖಾನೆಗೆ ಕಬ್ಬು ಕಳಿಸುವ ವ್ಯವಸ್ಥೆಯಾಗುತ್ತದೆ. ದಯವಿಟ್ಟು ಎಲ್ಲೆಲ್ಲಿ ಸಕ್ಕರೆ ಕಾರ್ಖಾನೆಗಳಿವೆ ಅಲ್ಲೆಲ್ಲ APMC ಮೂಲಕ ಒಂದೊಂದು ವೇಬ್ರಿಡ್ಜ್ ಅನ್ನು ಸರ್ಕಾರ ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಮೂರನೆಯದಾಗಿ ನಮ್ಮ ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಗಡಿಭಾಗದಲ್ಲಿ ಇವತ್ತೇನು ಸಕ್ಕರೆ ಕಾರ್ಖಾನೆಗಳಿವೆ ಅವೆಲ್ಲ multy act ಕೆಳಗಡೆ ಇವೆ. ಉದಾಹರಣೆಗೆ ಬೆಳಗಾಂ ಜಿಲ್ಲೆಯಲ್ಲಿ ಮಹಾರಷ್ಟ್ರ ಮತ್ತು ಕರ್ನಾಟಕದಲ್ಲಿ ಮಲ್ಟಿ ಆಕ್ಟ್ ಕೆಳಗೆ ಸಕ್ಕರೆ ಕಾರ್ಖಾನೆಗಳು both under Maharashtra and Karnataka Act ಕೆಳಗಿರುವುದರಿಂದ ಸೊಲ್ಲಾಪುರದಲ್ಲಿ ಹೋದ ವರ್ಷ 6, 7 ರಂದು ಜಿಲ್ಲಾಧಿಕಾರಿ ಕಛೇರಿಯಲ್ಲಿ ಒಂದು ಸಭೆ ನಡೆಸಿದೆವು. ಆಗ ಅವರು 1200 ಕೊಡುತ್ತೇವೆ ಅಂತ ಜಿಲ್ಲಾಧಿಕಾರಿಯವರ ಸಮ್ಮುಖದಲ್ಲಿ ಹೇಳಿದರು. ಕರ್ನಾಟಕ ಮಹಾರಾಷ್ಟ್ರ ರೈತರ ಮುಂದೆ ಬೆಲೆ ಕೊಡುತ್ತೇವೆ ಅಂತ ಒಪ್ಪಿಕೊಂಡರು. ಆದರೆ ನಮ್ಮ ಸರ್ಕಾರ ನಮ್ಮ ಬೆಲೆ ಘೋಷಣೆ ಮಾಡಲಿಲ್ಲ, ಹಾಗಾಗಿ ಮಹಾರಾಷ್ಟ್ರ ಸಕ್ಕರೆ ಕಾರ್ಖಾನೆಗಳೂ 300 ರೂ. ಕೆಳಗೆ ಬಂದರು. ಅವರೀಗ 900 ರೂ. ಕೊಡುತ್ತಿದ್ದಾರೆ. ಎಲ್ಲಾ ರೈತ ಮುಖಂಡರು ಸುಮಾರು 2 ತಿಂಗಳು ಒಂದು ಹೋರಾಟ ಮಾಡಿ ಮಹಾರಾಷ್ಟ್ರ ಮತ್ತು ಕರ್ನಾಟಕದ ಎಲ್ಲಾ ಸಕ್ಕರೆ ಕಾರ್ಖಾನೆಗಳನ್ನೂ ಬಂದ್ ಮಾಡಿದರು. ಆವಾಗ 1200 ರೂ. ಕೊಡುತ್ತೇವೆ ಅಂತ ಒಪ್ಪಿಕೊಂಡವರು ಕರ್ನಾಟಕ ಸರ್ಕಾರ ಯಾವಾಗ ಇದರ ಬಗ್ಗೆ ನಿರ್ಣಯ ತಗೊಳಲಿಲ್ಲ,

ಬೆಳಗಾವಿ ಅಧಿವೇಶನದಲ್ಲಿ ನಿರ್ಣಯ ತಗೊಳಲಿಲ್ಲ ಆ ನಿರ್ಣಯ ಮೇಲೆ ಅವರು ಈಗ 900 ರೂ. ಕೊಡುತ್ತಿದ್ದಾರೆ. ಉದಾಹರಣೆಗೆ ನಿಪ್ಪಾಣೀ ಹಾಲಸಿದ್ದನಾಥ ಸಕ್ಕರೆ ಕಾರ್ಖಾನೆ ಮಹಾರಾಷ್ಟ್ರದವರು 1200 ರೂ. ಕೊಟ್ಟಾಗ ನಮ್ಮ ಹರಸಿದ್ದ ಸಕ್ಕರೆ ಕಾರ್ಖಾನೆಯವರು ಕೇವಲ 1140 ರೂ. ಕೊಟ್ಟರು. ನವೆಂಬರ್ ಡಿಸೆಂಬರ್‌ವರೆಗೆ 1140 ರೂ. ನೇ ಕೊಟ್ಟರು. ಆಮೇಲೆ ಉಳಿದ ಬೆಳಗಾಂ ಜಿಲ್ಲಾ ಸಕ್ಕರೆ ಕಾರ್ಖಾನೆ ಮಾಲೀಕರು ನಿಪ್ಪಾಣಿ ಸಕ್ಕರೆ ಕಾರ್ಖಾನೆ ಮೇಲೆ ಒತ್ತಡ ತಂದು ನಾವೆಲ್ಲ 700 ರೂ. ಕೊಡುತ್ತಿರುವಾಗ ನೀನು 1140 ರೂ. ಯಾಕೆ ಕೊಡ್ತೀಯ ಅಂತ ಹೇಳಿ ಅದನ್ನ ಕಡಿಮೆ ಮಾಡು ಎಂದಾಗ ಅವನೂ ಇವತ್ತು 700 ರೂಪಾಯಿ ಕೊಡುವ ವ್ಯವಸ್ಥೆಯಾಯಿತು. ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ: ಇದರ ಬಗ್ಗೆ ತನಿಖೆ ಆಗಬೇಕು. ಇವತ್ತು ನಿಪ್ಪಾಣಿ ಸಕ್ಕರೆ ಕಾರ್ಖಾನೆ ಲಾಭದಲ್ಲಿದ್ದಾಗ ಅವರ ಖುಷಿಯಿಂದ ರೈತರಿಗೆ 1140 ರೂ. ದರ ಕೊಡುತ್ತೇವೆಂದರೂ ಕೊಡಲು ಬಿಡಲಿಲ್ಲ. ಇದರ ಬಗ್ಗೆಯೂ ತಾವು ವಿಚಾರ ಮಾಡಬೇಕು. ಕೊನೆಯದಾಗಿ ಈಗಾಗಲೇ ಎ.ಬಿ. ಪಾಟೀಲ್‌ರು ಹೇಳಿದಂತೆ ಮಹಾರಾಷ್ಟ್ರದಲ್ಲಿ ಸಾರಿಗೆ ಲೆಕ್ಕ 100 ರೂ. ಖರೀದಿ ತೆರಿಗೆ 65 ರೂ. ಹೀಗೆ ಒಟ್ಟು 165 ನ್ನು ರೈತರು ಕಾರ್ಖಾನೆಗೆ ತುಂಬುತ್ತಿದ್ದಾರೆ. ಕರ್ನಾಟಕದ ಕಬ್ಬು ಮಹಾರಾಷ್ಟ್ರಕ್ಕೆ ಹೋದಾಗ 165+900 = 1065 ದರ ಸಿಗುತ್ತದೆ. ಕರ್ನಾಟಕದಲ್ಲಿ ಮಾತ್ರ 700 ರೂ. ಈ ಕರ್ನಾಟಕದಲ್ಲಿ ಬೆಳೆದ ಕಬ್ಬು ಮಹಾರಾಷ್ಟ್ರಕ್ಕೆ ಹೋದರೆ 1065 ರೂ. ಸಿಗುತ್ತದೆ. ಅದೇ ನಮ್ಮ ಕರ್ನಾಟಕದ ಬೆಳಗಾಂ ಜಿಲ್ಲೆಯಲ್ಲಿ ಕಬ್ಬು ನುರಿಸಿದರೆ 700 ರೂ. ಸಿಗುತ್ತದೆ. ಈ ತಾರತಮ್ಯವನ್ನು ತಾವು ವಿಚಾರ ಮಾಡಬೇಕು. ಮಹಾರಾಷ್ಟ್ರದವರು 165 ರೂ. ಘೋಷಣೆ ಮಾಡಿರುವ ಗೆಜೆಟ್‌ನ್ನೂ ಅಲ್ಲಿಂದ ತರಿಸಿದ್ದೇನೆ. ಅಲ್ಲಿ ಅಸೆಂಬ್ಲಿಯಲ್ಲಿ ಸಹಕಾರ ಸಚಿವರು ಘೋಷಣೆ ಮಾಡಿದರು. ಇವತ್ತು ಕಬ್ಬುದಾರರ ಸಮಸ್ಯೆ ಅರಿತು ಇಂಥ ಪರಿಹಾರ ಕೊಡುತ್ತಿದ್ದೇವೆ ಅಂತ. ಇನ್ನೊಂದಿದೆ, ಇವತ್ತು ಕೇಂದ್ರ ಸರ್ಕಾರದ ಮೇಲೆ ಗೂಬೆ ಇಡುತ್ತಿದ್ದೀರಿ, ಮಹಾರಾಷ್ಟ್ರ ಸರ್ಕಾರದ ಶರದ್ ಪವಾರ್ ನೀಡಿದ ಪ್ಯಾಕೇಜ್‌ನ ಹಣ ತಗೊಂಡಿದ್ದಾರೆ. ಆದರೆ ಕರ್ನಾಟಕ ಸರ್ಕಾರ ಆ ಪ್ಯಾಕೇಜ್‌ನ್ನು ಯಾಕೆ ತಗೊಂಡಿಲ್ಲ? ಇದರಲ್ಲಿ ಕೇಂದ್ರ ಸರ್ಕಾರದ ತಪ್ಪಿದೆಯೋ ಕರ್ನಾಟಕ ಸರ್ಕಾರದ ತಪ್ಪಿದೆಯೋ ಎಂದು ತಾವು ಹೇಳಿಕೆ ಕೊಡಬೇಕು. ಕೇಂದ್ರದ ಪ್ಯಾಕೇಜ್‌ನ್ನು ಕರ್ನಾಟಕ ಯಾಕೆ ತಗೊಳಲಿಲ್ಲ? ಕೊಡುವುದರಲ್ಲೇ ಕೇಂದ್ರ ತಾರತಮ್ಯ ಮಾಡಿತೋ ಅಥವಾ ನಮ್ಮ ಪ್ರಪೋಸಲ್ ಕೇಂದ್ರಕ್ಕೆ ಹೋಗಲಿಲ್ಲವೋ ಎಂಬುದರ ಕುರಿತು ವಿವರಣೆ ಕೊಡಬೇಕು. ಪ್ಯಾಕೇಜ್ ವಿವರಗಳನ್ನು ನಿಮ್ಮ ಡೈರೆಕ್ಟರ್‌ಗೆ ಕೇಳಿ.

ಶ್ರೀ ಸಿದ್ದು ಸವದಿ :– ಕೇಂದ್ರ ಮಹಾರಾಷ್ಟ್ರಕ್ಕೆ ಪ್ಯಾಕೇಜ್ ಘೋಷಣೆ ಮಾಡಿದ್ದು ಕರ್ನಾಟಕಕ್ಕೆ ಮಲತಾಯಿ ಧೋರಣೆ ತೋರಿದೆ. ಕರ್ನಾಟಕ ವಿರೋಧಿ ಕೇಂದ್ರ ಸರ್ಕಾರ.

ಶ್ರೀ ಶಿವಾನಂದ ಪಾಟೀಲ್ :- ಪ್ಯಾಕೇಜ್ ಬಗ್ಗೆ ಬಹಳ excite ಇದೆ ನಿಮಗೆ, purchase tax exemption ಕೊಡಿ, recovery reduce ಆದಾಗ per ton 100 Rs. exemption ಅವರು ಕೊಡುತ್ತಾರೆ. ಅದನ್ನಾದರೂ ಕೊಡುತ್ತೇವೆ ಅಂತ ಒಪ್ಪಿಕೊಳ್ಳಿ.

ಶ್ರೀ ಪ್ರಕಾಶ್ ಹುಕ್ಕೇರಿ :- ಆ ಪ್ಯಾಕೇಜ್ ತಾರತಮ್ಯ ಯಾಕಿಲ್ಲಿ? ಅದು ಕರ್ನಾಟಕಕ್ಕೆ ಸಿಗುವುದಿಲ್ಲ ಅಂದರೆ ಸಿಗುವುದಿಲ್ಲ ಅಂತ ಹೇಳಿಕೆ ನೀಡಿ. ಒಟ್ಟಿನಲ್ಲಿ ಆ ಪ್ಯಾಕೇಜ್ ಬಗ್ಗೆ ಸಂಪೂರ್ಣ ಮಾಹಿತಿ ಸದನಕ್ಕೆ ನೀಡಬೇಕು. ಆಗ ಗೊಂದಲ ನಿವಾರಣೆಯಾಗುತ್ತದೆ. ಇವತ್ತೇನು ಮಹಾರಾಷ್ಟ್ರದಲ್ಲಿ ಟನ್ನಿಗೆ 1065 ರೂ. ಕರ್ನಾಟಕದಲ್ಲಿ 700 ರೂ ಮಾತ್ರ ಸಿಗುತ್ತದೆ. ಹೀಗಾಗಿ ರೈತರು ಇವತ್ತು ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿಯಲ್ಲಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್ :- ನಾವು ನೋಟೀಸನ್ನು ಕೊಟ್ಟವರು.

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ :- ಮಾನ್ಯ ಅಧ್ಯಕ್ಷರೇ, ಎ.ಬಿ. ಪಾಟೀಲರು ಮತ್ತು ಪ್ರಕಾಶ್ ಹುಕ್ಕೇರಿಯವರು ಹೇಳಿದ ಅಂಶಗಳೇನು ಇವೆ, ಅವುಗಳು ಸತ್ಯ ಇದೆ. ನನಗೂ ಸಹಿತ ಆ ಬಗ್ಗೆ ಮಾಹಿತಿ ಎಂದರೆ ಕಬ್ಬಿನ ತೂಕದಲ್ಲಿ ಬೆಳಗಾಂ ಜಿಲ್ಲೆಯಲ್ಲಿ ಅನೇಕ ಸಕ್ಕರೆ ಕಾರ್ಖಾನೆಗಳು ಹಾಗೆ ಖಾಸಗಿ ಸಕ್ಕರೆ ಕಾರ್ಖಾನೆಗಳಲ್ಲೂ ಸಹಿತ ತೂಕದ ಹಿನ್ನೆಲೆಯಲ್ಲಿ ಸಾಕಷ್ಟು ವ್ಯತ್ಯಾಸವಾಗುತ್ತಿದೆ. ಅಲ್ಲಿ ಅದು ಸಾಕಷ್ಟು ಕಂಡು ಬಂದಿದೆ. ಈಗಾಗಲೇ ನಾನು ಸಹಿತ ನಮ್ಮ ಜಿಲ್ಲಾ ಡಿಸಿಯವರಿಗೆ ಒಂದು ಸಲ ಹೇಳಿದ್ದೇನೆ. ಆದರೂ ಅವರು ತಪಾಸಣೆಯನ್ನು ಮಾಡಿದಾಗ ಸರಿಯಾಗಿ ಗೊತ್ತಾಗಿಲ್ಲ. ಆದರೆ ಒಂದು ಮಾತ್ರ ನಿಖರವಾಗಿ ಗೊತ್ತಾಗಿದೆ. ಅದರ ಬಗ್ಗೆ ನನಗೂ ಸಹಿತ ವರದಿ ಬಂದಿದೆ. ತೂಕದ ಹಿನ್ನೆಲೆಯಲ್ಲಿ ಸರಿಯಾದ ಬಿಗುವಾದ ನಿಲುವನ್ನು ತೆಗೆದುಕೊಳ್ಳುವುದಕ್ಕೆ ನಾವು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಇದ್ದೇವೆ.

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಏನು ಕ್ರಮವನ್ನು ತೆಗೆದುಕೊಂಡಿದ್ದಾರೆಂದು ಹೇಳಬೇಕಲ್ಲ. ಇಂಥದ್ದು ಆಗುತ್ತಿದೆ ಎಂದ ಮೇಲೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ ಎಂದು ಹೇಳಬೇಕು.

ಶ್ರೀ ಬಿ.ಆರ್. ಪಾಟೀಲ್ :- ಶಶಿಕಾಂತ್ ನಾಯಕರು ಮಂತ್ರಿಗಳು. ಅವರು ಮಂತ್ರಿಯಾಗಿ ಹೇಳುತ್ತಿದ್ದಾರೊ ಹೇಗೆ?

(ಗೊಂದಲ)

ಶ್ರೀ ಎ.ಬಿ. ಪಾಟೀಲ್ :– ಯಾವ ಕಾರ್ಖಾನೆ ಎಂದು ಅವರು ಹೇಳಬೇಕು?

(ಗೊಂದಲ)

ಶ್ರೀ ಪ್ರಕಾಶ್ ಹುಕ್ಕೇರಿ :– ಇವರು ಜಿಲ್ಲಾ ಉಸ್ತುವಾರಿ ಸಚಿವರಾಗಿರುವುದರಿಂದ ಇವರಿಗೆ ನಿಖರವಾದ ಮಾಹಿತಿ ಬಂದಿದೆ ಎಂದು ಹೇಳುತ್ತಾರೆ. ನಿಖರವಾದ ಮಾಹಿತಿ ಬಂದ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ. ಅಧ್ಯಕ್ಷರೇ, ತಾವು ನಮ್ಮ ರಕ್ಷಣೆಗೆ ಬರಬೇಕು. ನಿಖರವಾಗಿ ಮಾಹಿತಿ ಬಂದಿದೆ ಎಂದು ಅವರೇ ಹೇಳುತ್ತಾರೆ. ಜಿಲ್ಲಾ ಉಸ್ತುವಾರಿ ಸಚಿವರಾಗಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮೀಟಿಂಗ್ ಕೂಡ ಮಾಡಿದ್ದಾರೆ. ಕ್ರಮ ಏಕೆ ತೆಗೆದುಕೊಳ್ಳಲಿಲ್ಲ? ನಿಖರವಾದ ಮಾಹಿತಿ ಬಂದಾಗ ನಾವು ಏಕೆ ಸುಮ್ಮನೆ ಕೂರಬೇಕು? ಅದಕ್ಕೆ ಕಾರಣವೇನು? ಇವರು ರೈತರ ಪ್ರತಿನಿಧಿ. ರೈತರ ಪ್ರತಿನಿಧಿಯಾಗಿ ಬೆಳೆದ ಒಬ್ಬ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಿದ್ದಾಗ ಆ ರೀತಿ ಸುಮ್ಮನೆ ಏಕೆ ಕೂತರು? ಅಧ್ಯಕ್ಷರೇ, ತಾವು ನಮ್ಮ ರಕ್ಷಣೆಗೆ ಬರಬೇಕು. ಅದರ ಬಗ್ಗೆ ಏನು ಎಂದು ಅವರು ಹೇಳಬೇಕು. ನಾವ್ಯಾರು ಅವರನ್ನು ಕೇಳಲಿಲ್ಲ ಈ ವಿಷಯದ ಬಗ್ಗೆ.

ಶ್ರೀ ಎ.ಬಿ. ಪಾಟೀಲ್ :– ಯಾವ ಯಾವ ಕಾರ್ಖಾನೆಗಳನ್ನು ವಿಚಾರಣೆ ಮಾಡುವುದಕ್ಕೆ ಹೇಳಿದ್ದೀರಿ? ಇವತ್ತು ಅದನ್ನು ಅವರು ಹೇಳಬೇಕಾಗುತ್ತದೆ.

ಶ್ರೀ ಬಿ.ಆರ್. ಪಾಟೀಲ್ :– ಉತ್ತರ ಕೊಡುವಾಗ ಸರ್ಕಾರದವರು ಹೇಳಲಿ.

(ಗೊಂದಲ)

ಶ್ರೀ ಪ್ರಕಾಶ್ ಹುಕ್ಕೇರಿ :– ಶಶಿಕಾಂತ್ ನಾಯಕ್ ಅವರಿಗೆ ನಾವೇನು ಕೇಳಲಿಲ್ಲ. ಅವರಾಗಿಯೇ ಹೇಳಿದ್ದಾರೆ.

(ಗೊಂದಲ)

ಶ್ರೀ ಸಿ.ಎಂ. ಉದಾಸಿ :– ಮಾಹಿತಿ ತರಿಸಿಕೊಂಡು ಹೇಳುತ್ತೇನೆ.

(ಗೊಂದಲ)

ಶ್ರೀ ಬಸವರಾಜ ಹೊರಟ್ಟಿ :– ಉತ್ತರವನ್ನು ಸಂಬಂಧಪಟ್ಟ ಮಂತ್ರಿಯವರು ಹೇಳುತ್ತಾರೆ.

(ಗೊಂದಲ)

ಶ್ರೀ ಪ್ರಕಾಶ್ ಹುಕ್ಕೇರಿ :– ಅವರಿಗೆ ನಾವು ಕೇಳಲಿಲ್ಲ. ಅವರೇ ಹೇಳಿದ್ದಾರೆ. ನಾನು ಡಿಸಿ ಮುಖಾಂತರ ತನಿಖೆ ಮಾಡಿದ್ದೇನೆಂದು ಹೇಳಿದ್ದಾರೆ. ಅದನ್ನು ಅವರು ಹೇಳಬೇಕಾಗುತ್ತದೆ.

ಶ್ರೀ ಬಸವರಾಜ ಹೊರಟ್ಟಿ :– ಉತ್ತರವನ್ನು ಹೇಳುತ್ತಾರೆ.

ಶ್ರೀ ಗೋವಿಂದ ಕಾರಜೋಳ :– ಸಂಬಂಧಪಟ್ಟ ಮಂತ್ರಿಯಾಗಿ ನಾನು ಇದ್ದೇನೆ. ಸರ್ಕಾರದ ಉತ್ತರ ಬೇಕೆಂದರೆ ತಾವುಗಳು ಕೊಡಬೇಕು. ನಾನು ಹೇಳುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ :– ವಿಷಯ ಪ್ರಸ್ತಾಪವಾಗಲಿ. ವಿಷಯ ಪ್ರಸ್ತಾಪವಾದ ಮೇಲೆ ಸರ್ಕಾರ ಉತ್ತರವನ್ನು ಕೊಡಲಿ. ಮಧ್ಯೆ ನಿಂತು ಮಾತನಾಡಿದರೆ ಚರ್ಚೆ ಸರಿಯಾಗುವುದಿಲ್ಲ.

ಶ್ರೀ ಎ.ಬಿ. ಪಾಟೀಲ್ :– ತೋಟಗಾರಿಕೆ ಸಚಿವರಿಗೆ ನಾವೇನು ಹೇಳಲಿಲ್ಲ. ಅವರೇ ಹೇಳಿದ್ದಾರೆ. ಯಾವ ಕಾರ್ಖಾನೆ ಎಂದು ಹೇಳಬೇಕಲ್ಲ.

ಶ್ರೀ ಬಿ.ಆರ್. ಪಾಟೀಲ್ :– ಶಶಿಕಾಂತ್ ನಾಯಕರಿಗೆ ಹೇಳಿ ಎಂದು ಹೇಳಲಿಲ್ಲ, ಗೋವಿಂದ ಕಾರಜೋಳ್ ಅವರಿಗೂ ಹೇಳಿ ಎಂದು ಹೇಳಲಿಲ್ಲ. ಅವರೇ ಹೇಳುತ್ತಿದ್ದಾರೆ. ಇನ್ನು ಚರ್ಚೆ ನಡೆದಿದೆ. ಚರ್ಚೆಯಲ್ಲಿ ಭಾಗವಹಿಸುವವರು ಇದ್ದಾರೆ. ಇಲ್ಲಿದ್ದಾರೆ, ಅಲ್ಲಿದ್ದಾರೆ ಮಾತನಾಡುವವರು.

ಶ್ರೀ ಪ್ರಕಾಶ್ ಹುಕ್ಕೇರಿ :– ಅವರೇ ನಿಖರವಾಗಿ ನಮ್ಮ ಗಮನಕ್ಕೆ ಬಂದಿದೆ ಎಂದು ಹೇಳುವಾಗ ಅವರ ಗಮನಕ್ಕೆ ಏನು ಬಂದಿದೆ ಎನ್ನುವುದನ್ನು ಹೇಳಬೇಕಲ್ಲ. ನಾವೇನಾದರೂ ಅವರನ್ನು ಕೇಳಿದ್ದೀವಾ? ಅವರಿಂದ ನಾವು ಉತ್ತರವನ್ನು ಅಪೇಕ್ಷೆ ಪಟ್ಟಿದ್ದೀವಾ? ಕಾರಜೋಳ್ ಅವರ ಕಡೆಯಿಂದ ಉತ್ತರವನ್ನು ನಾವು ಅಪೇಕ್ಷೆ ಪಟ್ಟಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಾವು ಎಲ್ಲ ರುಜು ಹಾಕಿದ್ದೇವೆ. ರೈತರ ಕಬ್ಬು ಅರೆಯುವ ಪ್ರಶ್ನೆ ಇಲ್ಲಿ ಚರ್ಚೆಯಾಗಬೇಕಾಗಿರುವುದು. ಯಾವುದ್ಯಾವುದೋ ಕುಳಿತುಕೊಂಡು divert ಮಾಡಿದರೆ ನಾವೆಲ್ಲ ಇನ್ನು ನಿಂತುಕೊಳ್ಳುತ್ತೇವೆ. ಏನೋ ಕಬ್ಬು ಬೆಳೆಯುವ ಪ್ರದೇಶದವರು ಮಾತನಾಡಲಿ ಎಂದರೆ ಯಾವುದೋ ಬಿಟ್ಟುಬಿಟ್ಟು ಯಾವುದೊ ಹಿಡಿದುಕೊಂಡು ಕೂತರೆ ಇದನ್ನು ಚರ್ಚೆ ಎನ್ನುತ್ತಾರಾ?

ಶ್ರೀ ಬಿ.ಆರ್. ಪಾಟೀಲ್ (ಆಳಂದ್) :– ಮಾನ್ಯ ಅಧ್ಯಕ್ಷರೇ, ಈ ವಿಷಯ ಅನೇಕ ಸಲ ಪ್ರಸ್ತಾಪ ಮಾಡಬೇಕೆಂದರೆ ಸಮಯದ ಅಭಾವದಿಂದ ಈ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕಾಗಲಿಲ್ಲ. ಬಹಳ ಜನ ಶಾಸಕರು ಇದರ ಬಗ್ಗೆ ಆತಂಕವನ್ನು ಅನೇಕ ಸಂದರ್ಭದಲ್ಲಿ ವ್ಯಕ್ತಪಡಿಸಿದ್ದಾರೆ. ಒಂದು, ಇಲ್ಲಿ ಐದು ಜನ ಸಚಿವರಿದ್ದಾರೆ. ತಮ್ಮ ಮುಖಾಂತರ ಒಂದು ಮಾಹಿತಿಯನ್ನು ಕೇಳುತ್ತೇನೆ. ಈ ರಾಜ್ಯದಲ್ಲಿ Sugar Minister ಎಂದು ಏನಿದೆ? ಅದು ಇದೆಯೇ? ಏಕೆಂದರೆ ಆ ಮಂತ್ರಿಗಳ ಕಚೇರಿಗೆ ನಾನು ಹೋಗಿದ್ದೆ. ಅಲ್ಲಿ ಮಂತ್ರಿಗಳ

ಕಚೇರಿ ಬೋರ್ಡ್ ಕುಡಿಯುವ ನೀರಿನ ಮಂತ್ರಿ ಎಂದು ಮಾತ್ರ ಇದೆ. ಸಕ್ಕರೆ ಮಂತ್ರಿ ಎಂದು ಇಲ್ಲ. ಹಾಗಾಗಿ ನಮಗೆ ಈ ರಾಜ್ಯದಲ್ಲಿ ಈಗ ಮಾತನಾಡುವವರು ಒಬ್ಬರೋ ಇಬ್ಬರೋ ಎದ್ದು ನಿಂತು ಮಾತನಾಡಲು ಶುರುಮಾಡಿದ್ದಾರೆ. ಯಾರು ಸಕ್ಕರೆ ಮಂತ್ರಿಯೋ ಯಾರೂ ಬೆಲ್ಲದ ಮಂತ್ರಿಯೋ ಯಾರು ಇರುವೆ ಮಂತ್ರಿಯೋ ನಮಗೆ ಗೊತ್ತಾಗುತ್ತಿಲ್ಲ. ನನಗೆ ಒಂದು ಮಾತು ಅನುಮಾನ ಇದೆ. ಏಕೆಂದರೆ ಈ ರಾಜ್ಯದಲ್ಲಿ Sugar Ministry, ಮಂತ್ರಾಲಯ ಎನ್ನುವುದು ಇಲ್ಲ. Directorate ಇರಬಹುದು, Commissionarate ಇರಬಹುದು, ಮತ್ತೊಂದು ಇರಬಹುದು, ಆದರೆ ಮಂತ್ರಿ ಎನ್ನುವುದು ಸರ್ಕಾರದಲ್ಲಿ ಇಲ್ಲ ಎಂದು ನಾನು ಬಹಳ ಸ್ಪಷ್ಟವಾಗಿ ನೋಡಿ ಹೇಳಿದ್ದೇನೆಯೇ ಹೊರತು ಬೇರೆ ಆರೋಪ ಇಲ್ಲ. ಹಾಗಾಗಿ ಇದಕ್ಕೆ ಯಾರು ಮುಖ್ಯಸ್ಥ? ಇದಕ್ಕೆ ಯಾರು ಜವಾಬ್ದಾರಿ ಉತ್ತರವನ್ನು ಕೊಡುವವರು? ಎಲ್ಲರಿಗೂ ಸಂಬಂಧಪಟ್ಟಿದೆ ಎಂದು ಎಲ್ಲರೂ ಉತ್ತರ ಕೊಡುವುದಕ್ಕೆ ಶುರುಮಾಡಿದರೆ ನಿರ್ದಿಷ್ಟವಾದ ಉತ್ತರ ಸಿಗುವುದಕ್ಕೆ ಸಾಧ್ಯತೆ ಇಲ್ಲ. ಈಗ ಸರ್ಕಾರದವರು ಏನು ಭರಾಟೆಯಿಂದ ಬಜೆಟ್ ಪೂರ್ವದಲ್ಲಿ ನಾವು ರೈತರಿಗೆ ಏನೇನೊ ಮಾಡುತ್ತೇವೆ, ಬಹಳ ಕೊಡುತ್ತಿದ್ದೇವೆ, ಎಂದು ಹೇಳಿ, ಹೇಳಿ ಕಡೆಗೆ ಈ ಬೆಟ್ಟ ಕೆದರಿ ಇಲಿ ತೆಗೆದರು. ಬಂದದ್ದು ಏನೆಂದರೆ ಇಲಿ ಬಂತು ಹೊರಗಡೆ. ನಾವೆಲ್ಲ ಹುಲಿ ಬಂತು ಎಂದು ತಿಳಿದುಕೊಂಡಿದ್ದೆವು, ಇಲಿ ಬಂತು. ನಾವೆಲ್ಲ ಮಾನ್ಯ ಯಡಿಯೂರಪ್ಪನವರು ಉತ್ತರವನ್ನು ಕೊಡುವಾಗ ವಿರೋಧ ಪಕ್ಷದವರು ಹೋಗಿ ಧರಣಿ ಮಾಡಿದೆವು, ರೈತರ ಪರವಾಗಿ ನೀವೇನು ಕೊಡಲಿಲ್ಲ, ಕಬ್ಬು ಬೆಳೆಗಾರರು ಇವತ್ತು ಕಷ್ಟದಲ್ಲಿದ್ದಾರೆ, ಅವರ ಪರವಾಗಿ ಏನೂ ಇಲ್ಲ, ಗುಡಿ ಗುಂಡಾರಗಳಿಗೆ ನೀವು ಯತೇಚ್ಚವಾಗಿ ಹಣವನ್ನು ಕೊಟ್ಟಿರಿ ಎಂದು ಹೇಳಿ ನಾವು ಅವತ್ತು ಧರಣಿ ಮಾಡಿ ನಮ್ಮ ಪ್ರತಿಭಟನೆಯನ್ನು ವ್ಯಕ್ತಿಪಡಿಸಿದ್ದೇವೆ. ನನಗೆ ಇವತ್ತು ಏನು ಅನ್ನಿಸುತ್ತದೆ ಎಂದರೆ ಈ ಸರ್ಕಾರ ಈ ರೈತರ ಮತ್ತು ಸಾಮಾನ್ಯ ಬಡ ಜನರ ಆರ್ಥಿಕ ಅಭಿವೃದ್ಧಿಗೋಸ್ಕರ ಪೂರಕವಾಗಿಲ್ಲ, ಇವರು ಗುಡಿ ಗುಂಡಾರಗಳನ್ನು ಕಟ್ಟಿ ಅದರ ಮೂಲಕ ಭಾವನಾತ್ಮಕವಾದ ಅದಕ್ಕೆ ಪೂರಕವಾದ ಎಲ್ಲಾ ಲಾಭವನ್ನು ಪಡೆಯುವಂಥ ಈ ಪ್ರಯತ್ನವನ್ನು ಮಾಡುತ್ತಿದ್ದಾರೆಂದು ಬಹಳ ಸ್ಪಷ್ಟವಾಗಿ, ಇವತ್ತು ರಾಜ್ಯಕ್ಕೆ ಅಲ್ಲ, ರಾಷ್ಟ್ರದ ಜನತೆಗೆ ಗೊತ್ತಾಗಿದೆ. ಹಾಗಾಗಿ ಇವತ್ತೇನು ನಾವು ನಿರೀಕ್ಷೆ ಮಾಡಿದ್ದೇವೆ, ಇವತ್ತು ಕಬ್ಬು ಬೆಳೆಗಾರರು ಕಷ್ಟದಲ್ಲಿದ್ದಾರೆಂದು ಪತ್ರಿಕೆಯಲ್ಲಿ ವರದಿ ಬಂತು, ಮಾನ್ಯ ವೈಜನಾಥ ಪಾಟೀಲರು ಹೇಳಿದಂತೆ ಮೊದಲನೇ ಸಲ ಕಬ್ಬು ಬೆಳೆಗಾರರು ಇಬ್ಬರು ಆತ್ಮಹತ್ಯೆಯನ್ನು ಮಾಡಿಕೊಂಡರು.

4–30 ಗಂಟೆ

ಒಂದು ಬೀದರ್ ಜಿಲ್ಲೆಯಲ್ಲಿ. ಮತ್ತೊಂದು ಈ ಕಡೆ ಕೆ.ಆರ್.ನಗರದಲ್ಲಿ. ಇಬ್ಬರು ರೈತರು ಆತ್ಮಹತ್ಯೆ ಮಾಡಿಕೊಂಡರು. ಈ ರೀತಿ ಯಾವತ್ತೂ ಕೂಡ ಆಗಿರಲಿಲ್ಲ. ಇದೊಂದು commercial crop. ಮೊದಲು ಹಂಗಾಮಿ ಪ್ರಾರಂಭವಾಗುವುದಕ್ಕಿಂತಲೂ ಮುಂಚೆ ಪತ್ರಿಕೆಯಲ್ಲಿ ಏನು ವರದಿ ಬಂತೆಂದರೆ, ಈ ಸಲ Sugar Industry ಗೆ ಬಹಳ boom ಇದೆ. ಏಕೆಂದರೆ, Ethnyl production ಗೆ ಅವಕಾಶವಿದೆ. International Market ನಲ್ಲಿ ಈಗ Petrol ಗೆ ಬೆಲೆ ಇರುವುದರಿಂದ ಇಥೆನಾಲ್‌ಗೆ ಬಹಳ ಅವಕಾಶವಿದೆ. Sugar Industry ಗೆ boom ಇದೆ ಎನ್ನುವಂಥಾದ್ದು ಈ Economic Survey ಯಿಂದ ತಿಳಿದು ಬಂತು. ರೈತರಿಗೆ ಈ ವರ್ಷ ಅನುಕೂಲವಾಗುತ್ತದೆಂದು ತಿಳಿದು ನಮಗೂ ಬಹಳ ಖುಷಿಯಾಯಿತು. ಆಮೇಲೆ, ಶರದ್ ಪವಾರ್‌ರವರು ಕೂಡ ಬೆಂಗಳೂರಿಗೆ ಬಂದಾಗ ಈ ದೇಶದ ಸಕ್ಕರೆ ಉತ್ಪಾದನೆ, buffer stock ಮತ್ತು ಹೊರಗಡೆ ಕಳುಹಿಸಬೇಕಾದಂತಹ ಅವಕಾಶ ಬೇರೆ ಬೇರೆ ರಾಷ್ಟ್ರಗಳಲ್ಲಿ ಎಷ್ಟು ಉತ್ಪಾದನೆಯಾಗುತ್ತದೆ ಎನ್ನುವುದರ ಬಗ್ಗೆ ವಾಸ್ತವಿಕ ಸತ್ಯವನ್ನು ಹೇಳಿದ್ದಾರೆ. ಈ ಸತ್ಯವನ್ನು ಮುಂದಿಟ್ಟುಕೊಂಡು ಇವತ್ತು ಸರ್ಕಾರ ಕೈಚೆಲ್ಲಿ ಕೂರುವಂಥಾದ್ದು ಆಗಬಾರದು. ಒಂದು High Power Committee ಇದೆ. ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು High Power Committee ಇದೆ. ಮಾನ್ಯ ಅಧ್ಯಕ್ಷರೆ, ಇವತ್ತೂ ಹೇಳುತ್ತೇನೆ ಒಂದು ಸಲವೂ ಕೂಡ High Power Committee ಸಭೆ ಸೇರಲಿಲ್ಲ. ಚರ್ಚೆ ಮಾಡಲಿಲ್ಲ, ಸಂಬಂಧಪಟ್ಟವರೊಂದಿಗೆ ಮಾತನಾಡಲಿಲ್ಲ. ಇದರ ಬಗ್ಗೆ ಖಾಸಗಿ ಕಾರ್ಖಾನೆಗಳು ಮತ್ತು ಸಹಕಾರಿ ಕಾರ್ಖಾನೆಗಳು ಸ್ಪಷ್ಟವಾದ, ನಿರ್ದಿಷ್ಟವಾದ ನಿರ್ದೇಶನಗಳನ್ನು, ಸೂಚನೆಗಳನ್ನು ಕೊಡುವಂಥ ಪ್ರಯತ್ನ ಈ ರಾಜ್ಯದಲ್ಲಿ ಆಗಲಿಲ್ಲ. ಕೊನೆಗೆ, ರೈತರು ಅಲ್ಲಲ್ಲಿ ಹೋರಾಟ, ಸತ್ಯಾಗ್ರಹ ಮಾಡಿದ ಮೇಲೆ ನಮ್ಮಲ್ಲಿ ಕೂಡ ಗುಲ್ಬರ್ಗಾದಲ್ಲಿ ಮೊದಲು ಆಳಂದ ಸಕ್ಕರೆ ಕಾರ್ಖಾನೆ ಒಂದೇ ಇತ್ತು. ಅನಂತರ ನಾಲ್ಕು ಲೈಸೆನ್ಸ್‌ಗಳು ಬಂದಿವೆ. ಅಫಜಲಪುರದಲ್ಲಿ ರೇಣುಕಾ ಶುಗರ್ಸ್‌ನವರು ಲೈಸೆನ್ಸ್ ತೆಗೆದುಕೊಂಡು ಅವರೂ ಪ್ರಾರಂಭ ಮಾಡಿದರು. ಜೇವರ್ಗಿಯಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆಗಳು ಬರುತ್ತಿದೆ. ಚಿಂಚೋಳಿ ತಾಲ್ಲೂಕಿನಲ್ಲಿ ಹೊಸದಾಗಿ ಒಂದು ಸಕ್ಕರೆ ಕಾರ್ಖಾನೆ ಬರುತ್ತಿದೆ. ಈಗ ಸಕ್ಕರೆ ಬೆಲೆ ಬಿದ್ದಿದೆ. ಆದರೂ ಕೂಡ ರೇಣುಕಾ ಶುಗರ್ಸ್‌ನವರು ಶಹಾಪುರ ತಾಲ್ಲೂಕಿನಲ್ಲಿ ಮತ್ತೊಂದು ಲೈಸೆನ್ಸ್‌ಗೆ ಹಾಕಿ ಒಂದು ಹೊಸ ಕಾರ್ಖಾನೆ ಕಟ್ಟುವುದಕ್ಕೆ ಹೊರಟಿದ್ದಾರೆ. ನಮಗೆ ಏನು ಅನುಮಾನ ಬರುತ್ತದೆ? ಒಂದು ಕಡೆ ಸಕ್ಕರೆ ಬೆಲೆ ಬೀಳುತ್ತದೆಯೆಂದು ನೀವು ರೈತರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳದೆ, ಇವತ್ತು 700 ರೂಪಾಯಿ, 800 ರೂಪಾಯಿ ಬೆಲೆ ಕೊಡುವುದಕ್ಕೆ ಹೊರಟು ಇವತ್ತು ರೈತರ ಬಾಯಿಗೆ ಮಣ್ಣು ಹಾಕುತ್ತಿದ್ದೀರಿ. ಮತ್ತೊಂದು ಕಡೆ ಸಕ್ಕರೆ ಕಾರ್ಖಾನೆಗಳಿಗೆ

ಲೈಸೆನ್ಸ್ ತೆಗೆದುಕೊಳ್ಳಿರೆಂದು ಪೈಪೋಟಿ ನಡೆಸುತ್ತಿದ್ದೀರಿ. ಇದು ಯಾವ ಲೆಕ್ಕಾಚಾರ, ಹೊಂದಾಣಿಕೆಯಾಗುತ್ತದೆ? ಲಾಭ ಇಲ್ಲದೆ ಯಾರೂ ಕೂಡ, ವ್ಯವಹಾರ, ಉದ್ಯೋಗ ಮಾಡುವುದಿಲ್ಲ. ವಿಶೇಷವಾಗಿ, ಖಾಸಗಿಯವರಂತೂ ಲಾಭ ಇದ್ದರೆ ಮಾತ್ರ ಬಂಡವಾಳ ಹೂಡುತ್ತಾರೆ. ಲಾಭ ಇಲ್ಲದಿದ್ದರೆ, ಏಕೆ ಕಾರ್ಖಾನೆ ಸ್ಥಾಪಿಸುತ್ತಾರೆ? ಕಾರ್ಖಾನೆಯವರದು ಇದರಲ್ಲಿ ಏನಾದರೂ ಗೋಲ್‌ಮಾಲ್ ಇದ್ದದ್ದೇ. ಇವತ್ತು 40 ಲಕ್ಷ ಟನ್ ಕಬ್ಬು ಏನು ಜಾಸ್ತಿ ಇದೆ, ಅಷ್ಟು ಕಬ್ಬು ಉಳಿಯುತ್ತದೆಂಬ ಭಾವನೆ ಏನಿದೆ, ಇದಕ್ಕೆ ಯಾವ ತರಹ ಮಾಡಬೇಕು ಎನ್ನುವುದರ ಬಗ್ಗೆ ಒಂದು ಪ್ರಯತ್ನ ನಡೆಯಿತು. ನಮ್ಮಲ್ಲಿ ರೈತರು ಪ್ರತಿಭಟನೆ ಮಾಡಿದಾಗ ಸಚಿವರಾದ ಮಾನ್ಯ ದರ್ಶನಾಪೂರ್‌ರವರು, ರೇವುನಾಯಕ್‌ರವರು, ಶ್ರೀಮಾನ್ ಎಂ.ವೈ. ಪಾಟೀಲರು ಮತ್ತು ಶಾಸಕರುಗಳಾದ ನಾವೆಲ್ಲರೂ ಸೇರಿಕೊಂಡು ಜಿಲ್ಲಾಧಿಕಾರಿಗಳು ಸಭೆ ಕರೆದಾಗ, ಅಲ್ಲಿ ಖಾಸಗಿ ಕಂಪನಿಯ ಮಾಲೀಕರಾದ ರೇಣುಕಾ ಶುಗರ್ಸ್‌ನವರು ಬಂದರು. ನಾವು ಹೇಳಿದೆವು, 'ನೋಡ್ರಿ, ನೀವು ಕಾರ್ಖಾನೆ ಪ್ರಾರಂಭ ಮಾಡುವಾಗ 1,000 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದಿರಿ. ನಾವು 1,250 ರೂಪಾಯಿ ಕೇಳಿದ್ದೇವೆ. ಆದರೆ, ಕೊನೆಗೆ, ನೀವು 1,000 ರೂಪಾಯಿಗಳಿಗೆ ಒಪ್ಪಿದಿರಿ. ಒಪ್ಪಿಕೊಂಡ 1,000 ರೂಪಾಯಿಗಳನ್ನೂ ಕೊಡದೆ, ನೀವು 800 ರೂಪಾಯಿಗಳಿಗೆ ಬಂದು ನಿಂತಿದ್ದೀರಲ್ಲ, ಇದು ಬಹಳ ಅನ್ಯಾಯವಾಗುತ್ತದೆ. ನೀವು ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕು. ರೈತರಲ್ಲಿ ಭರವಸೆ ಮೂಡಿಸಬೇಕು, ಅವರಲ್ಲಿ ಆತ್ಮವಿಶ್ವಾಸ ಮೂಡಿಸಬೇಕು' ಎನ್ನುವಂತಹ ಮಾತುಗಳನ್ನು ಹೇಳಿದಾಗ, ಮಾನ್ಯ ಅಧ್ಯಕ್ಷರೆ, ಘನ ಸರ್ಕಾರದ ಇಬ್ಬರು ಸಚಿವರು... ಮಾನ್ಯ ದರ್ಶನಾಪೂರ್‌ರವರು ಇಲ್ಲಿಯೇ ಇದ್ದಾರೆ. ಈ ಸರ್ಕಾರದ ಮಂತ್ರಿಗಳ ಮಾತಿಗೆ ಅವರು ಒಪ್ಪಲಿಲ್ಲ. ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಚರ್ಚೆ ನಡೆಯಿತು. ಇದೇನಿದು ಎಂದು ನನಗೆ ಆಶ್ಚರ್ಯವಾಯಿತು. ಒಂದು ಖಾಸಗಿ ಕಂಪನಿಯ ಮಾಲೀಕರು, ಇಬ್ಬರು ಸಚಿವರು, ಶಾಸಕರುಗಳಿಗೆ ಗೊತ್ತು. ನಾವು ಒಂದು ಮಾತನ್ನು ಹೇಳಿದರೆ, ಅದನ್ನುಕನಿಷ್ಠ ಸೌಜನ್ಯದಿಂದ, ಆ ಮಾತಿನ ಬಗ್ಗೆ ಒಂದು ಸಕಾರಾತ್ಮಕವಾದ ಉತ್ತರವನ್ನೂ ಕೊಡುವಂತಹ ಪ್ರಯತ್ನವನ್ನು ಅವತ್ತು ಮಾಡಲಿಲ್ಲ. ಇವತ್ತು ಇದಕ್ಕೆ ಮಾನ್ಯ ದರ್ಶನಾಪೂರ್‌ರವರೇ ಸಾಕ್ಷಿಯಾಗಿದ್ದಾರೆ. ಬೇಕಾದರೆ, ಅವರು ಹೇಳಲಿ. ಕೊನೆಗೆ ಆಗಲಿಲ್ಲ. ಎಲ್ಲಾ ಶಾಸಕರುಗಳು ಕೊನೆಗೆ ಇದೇ ತರಹದ ಒಂದು ವಿಷಯ ಬಂದಾಗ ಮಾನ್ಯ ಸಕ್ಕರೆ ಸಚಿವರಾದ ರವೀಂದ್ರನಾಥ್‌ರವರು ಮೂರನೇ ಮಹಡಿಯಲ್ಲಿದ್ದ Conference Hall ನಲ್ಲಿ ಒಂದು Meeting ನಡೆಸುತ್ತಿದ್ದರು. ಅವತ್ತು ಶಾಸಕರುಗಳಾದ ನಾವು, ಮಿರಾಜುದ್ದೀನ್ ಪಟೇಲ್ ಎಲ್ಲರೂ ಸೇರಿದೆವು. ಒಂದು Co-operative Federation ನವರು ಬಂದರು. ಅನಂತರ, ಎಲ್ಲಾ ಪ್ರೈವೇಟ್ ಫ್ಯಾಕ್ಟರಿಯವರೂ ಬಂದರು. ಬಂದಾಗ ಮತ್ತೆ ಇದೇ ವಿಷಯ

ಚರ್ಚೆಯಾಯಿತು. ಅನೇಕ ವಿಷಯಗಳು ಚರ್ಚೆಯಾದಾಗ, ಕೊನೆಗೆ ಮಂತ್ರಿಗಳು ಏನು ಹೇಳಿದರು ಎಂದರೆ, ' ಮತ್ತೆ ನಾನು ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರ ಬಳಿಗೆ ವಿಷಯವನ್ನು ತೆಗೆದುಕೊಂಡು ಹೋಗುತ್ತೇನೆ. ಅದರ ಬಗ್ಗೆ ವಿಸ್ತಾರವಾಗಿ ಚರ್ಚೆ ಮಾಡುತ್ತೇನೆ. ಸಾಧ್ಯವಾದಷ್ಟು ಮಟ್ಟಿಗೆ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಒಂದು ಸಭೆ ಕರೆದು, ಇದರ ಬಗ್ಗೆ ಪರಿಪೂರ್ಣವಾದ ಪರಿಹಾರವೊಂದನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತೇನೆ' ಎನ್ನುವಂತಹ ಮಾತುಗಳನ್ನು ಹೇಳಿ, ಮಾನ್ಯ ರವೀಂದ್ರನಾಥ್‌ರವರು ಈ ಕಾರ್ಖಾನೆಯರಿಗೆ ಒಂದು ಮಾತು ಹೇಳಿದರು. ಒಂದು, ಏನು ಕಬ್ಬನ್ನು ಅರೆಯುತ್ತೇವೆ, 15 ದಿವಸಗಳಲ್ಲಿ ಅದರ ಹಣ ಪಾವತಿಯಾಗಬೇಕು. ಇದು ಒಂದು ಬೇಡಿಕೆ. ಎರಡನೆಯದು ಮೇ ತಿಂಗಳ ಅಂತ್ಯದವರೆಗೆ ಕಬ್ಬನ್ನು ಅರೆಯಬೇಕು ಎನ್ನುವಂತಹ ಬಹಳ ಉತ್ತಮವಾದ ಎರಡು ಸಲಹೆಗಳನ್ನು ಕೊಟ್ಟರು. ಅವರು ಬೆಲೆ ನಿಗದಿ ಬಗ್ಗೆ, ಮತ್ತೊಂದರ ಬಗ್ಗೆ ಅವತ್ತು ಹೇಳಲಿಲ್ಲ. ಆದರೆ ಮಾನ್ಯ ಅಧ್ಯಕ್ಷರೆ. . . ವಾಟಾಳ್ ನಾಗರಾಜ್‌ರವರೆ, ಮುಂದಿನ ಬೆಂಚ್‌ನಲ್ಲಿ ಕುಳಿತಿರುವ ನೀವು ನಮಗೆಲ್ಲರಿಗೂ ರಕ್ಷಣೆ ಕೊಡದಿದ್ದರೆ ಹೇಗೆ? ನೀವು ಪ್ರತಿ ಸಲ ನಮ್ಮ ಪರವಾಗಿ ನಿಂತು ಮಾತನಾಡುತ್ತೀರಿ. ನಾನು ಹೇಳುವ ಮಾತುಗಳನ್ನು ಸ್ವಲ್ಪ ಕೇಳಿ. ಮಾನ್ಯ ಸಕ್ಕರೆ ಸಚಿವರು ಮೀಟಿಂಗ್ ಕರೆದಾಗ, ಎಲ್ಲಾ ವಿಷಯಗಳ ಬಗ್ಗೆ ಚರ್ಚೆಯಾಯಿತು. ರೇಟ್ ಬಗ್ಗೆ, ಮತ್ತೊಂದರ ಬಗ್ಗೆ. ಸಕ್ಕರೆ ಸಚಿವರು ಎರಡು ಸಲಹೆಗಳನ್ನು ಕೊಟ್ಟರು. ಒಂದು, ಮೇ ಅಂತ್ಯದವರೆಗೆ ಎಲ್ಲಾ ಕಬ್ಬನ್ನು ಅರೆಯುವುದನ್ನು ನೀವು ನಿಲ್ಲಿಸಬಾರದು, ಅರೆಯಬೇಕೆಂಬ ಒಂದು ಸಲಹೆ ಕೊಟ್ಟರು. ಎರಡನೆಯದು, 15 ದಿವಸಗಳಲ್ಲಿ ರೈತರಿಗೆ ದುಡ್ಡನ್ನು ಪಾವತಿಸಬೇಕೆಂಬುದು. ನಾನು ಬಹಳ ದುಃಖದಿಂದ ಹೇಳುತ್ತೇನೆ, ದುರ್ದೈವದಿಂದ ಹೇಳುತ್ತೇನೆ. ಆ ಒಂದು ಸಲಹೆಗೆ ಈ ಖಾಸಗಿ ಕಂಪನಿಯ ಮಾಲೀಕರು ಒಪ್ಪಲಿಲ್ಲ. ಸರಿ, ಅದು ಅಲ್ಲಿಗೇ ಮುಗಿಯಿತು. ಒಂದು ಸಕಾರಾತ್ಮಕವಾದ ಉತ್ತರ, ಪೂರಕವಾದು ಮಾತು ಕೂಡ ಈ ಖಾಸಗಿ ಕಂಪನಿಯ ಮಾಲೀಕರುಗಳಿಂದ ಬರಲಿಲ್ಲ. ಅಧ್ಯಕ್ಷರೆ, ಇದರಿಂದ ನಮಗೆ ಏನು ಅನುಮಾನ ಬರುತ್ತದೆಂದರೆ, ಸರ್ಕಾರವೇನಾದರೂ ಖಾಸಗಿ ಕಂಪನಿಯ ಕೈಯಲ್ಲಿದೆಯೇ? ಅಥವಾ ಒಂದು ಸಾರ್ವಭೌಮ ಸರ್ಕಾರ ಇದೆ. ಸರ್ಕಾರ ಎಂದರೆ ಆಳಬೇಕು, govern ಮಾಡಬೇಕು. ರೈತರು ಕಷ್ಟದಲ್ಲಿದ್ದಾಗ ಅವರುಗಳ ರಕ್ಷಣೆಗೆ ಹೋಗಬೇಕು. ಅದಕ್ಕೋಸ್ಕರ ಸರ್ಕಾರ ಇರುವುದು. ಆದರೆ, ಅವತ್ತು ನಮಗೆ ಬಹಳ ನಿರಾಶೆಯಾಯಿತು. ಒಬ್ಬ ಸರ್ಕಾರದ ಮಂತ್ರಿ ಕುಳಿತು ಸಭೆ ನಡೆಸಿದಾಗ, ಆ ಕಾರ್ಖಾನೆಯವರು ಇವರ ಮಾತಿಗೆ ಚಕಾರವೆತ್ತದೆ ಸಭೆ ಅಲ್ಲಿಗೇ ಮುಕ್ತಾಯವಾಯಿತು. ಇವತ್ತು ಈ ಖಾಸಗಿ ಕಾರ್ಖಾನೆಯವರು ಎಷ್ಟೊಂದು ಕೊಬ್ಬಿದ್ದಾರೆನ್ನುವಂತಹ ಮಾತನ್ನು ಹೇಳಬೇಕಾಗಿದೆ. ಇದು ಪ್ರಜಾತಂತ್ರ ವ್ಯವಸ್ಥೆಗೆ ದೊಡ್ಡ ಅಪಮಾನ.

ಶ್ರೀ ಭರಮಗೌಡ (ರಾಜು) ಅಲಗೌಡ ಕಾಗೆ :- ಮಾನ್ಯ ಅಧ್ಯಕ್ಷರೆ, ಈ port folio ಮಾಡಿದ್ದೇ ತಪ್ಪು. ಕಳೆದ ವರ್ಷದಲ್ಲೂ ನಾನು ಮಾತನಾಡಿದ್ದೆ. ನಮ್ಮ ರೆಡ್ಡಿಯವರು ಹೇಳಿದರು. 'ಏನ್ರಿ, ನಿಮ್ಮ ಹಿಂದೆ ಕುಳಿತವರು Sugar Minister ಗೆ ಏನೂ ಪವರ್ ಇಲ್ಲ'ವೆಂದು ಮಾತನಾಡಿದವರಲ್ಲವೆಂದು. ಸರ್, Sugar Minister ಗೆ ಏನೂ ಪವರ್ ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇವರು ಒಂದೊಂದು ಸಲ ನಮ್ಮ ಉಪಮುಖ್ಯಮಂತ್ರಿಗಳು ಮತ್ತು ಸಕ್ಕರೆ ಮಂತ್ರಿಗಳು ಹಾಗೂ ರೈತರು ಒಂದು ಮೀಟಿಂಗ್ ಕರೆದು, ಅಲ್ಲಿ ಒಂದು ಸಲಹೆ ಕೊಟ್ಟರು. ಕಳೆದ ಸಲ ಬೆಂಬಲ ಬೆಲೆ ಕೊಡಬೇಕೆಂದು ಅಲ್ಲಿ ರೈತರು ಹೋರಾಟ ಮಾಡುತ್ತಿದ್ದರು. ಜಮಖಂಡಿ ತಾಲ್ಲೂಕು, ಬಾಗಲಕೋಟೆ ತಾಲ್ಲೂಕಾಗಲಿ ಅಥವಾ ಅಥಣಿ ತಾಲ್ಲೂಕಾಗಲಿ ಆಗ ಉಪಮುಖ್ಯಮಂತ್ರಿಗಳು ಒಂದು ವಾಯಿದೆ ಹೇಳಿದ್ದಾರೆ. ರೈತರು 1200 ಕೇಳುತ್ತಿದ್ದರು ಎಲ್ಲಾ ಸಕ್ಕರೆ ಕಾರ್ಖಾನೆಯವರು 900 ರೂಪಾಯಿ ಕೊಡುತ್ತಿದ್ದರಂದು ರೇಗುತ್ತಿದ್ದರು. ಇಲ್ಲವೇ, 1,000 ರೂಪಾಯಿಗಳೆಂದು ಮಾಡಿ ಎಂದು ಹೇಳಿದರು. ಆಗ ಉಪಮುಖ್ಯಮಂತ್ರಿಯವರು ಏನು ಹೇಳಿದರೆಂದರೆ, ಅವರು ಹೇಳಿದ ತಕ್ಷಣವೇ, 'ಅಷ್ಟು ಬೆಲೆಗೆ ಕೊಡುವುದಕ್ಕಾಗುವುದಿಲ್ಲ, ನೀವು ಏನು ಮಾಡಿಕೊಳ್ಳುತ್ತೀರೋ, ಮಾಡಿಕೊಳ್ಳಿ' ಎಂದು ಎದ್ದು ಹೊರಟು ಹೋದರು. ಅಂದರೆ, ಸಕ್ಕರೆ ಕಾರ್ಖಾನೆಯವರ ಮೇಲೆ ಸರ್ಕಾರದ ಯಾವುದೇ binding ಇಲ್ಲವೆಂಬ ಮಾತನ್ನು ನಿಮಗೆ ಹೇಳುತ್ತಿದ್ದೇನೆ.

ಶ್ರೀ ಬಿ.ಆರ್. ಪಾಟೀಲ್ :- ನಾವು ಈ ಮಾತನ್ನು ಹೇಳಿ ವಿಧಾನಸೌಧದಲ್ಲಿ ಕುಳಿತುಕೊಂಡರೆ, ಇನ್ನು ನಾವು ರಾಜ್ಯವನ್ನು ನಡೆಸುವುದಕ್ಕಾಗುವುದಿಲ್ಲ. ಯಾವುದೇ ಪಕ್ಷದವರಾಗಿರಲಿ, ಒಂದು ಸರ್ಕಾರದ ಮಾತನ್ನು ಒಬ್ಬ Deputy Chief Minister ಮತ್ತು ಸಂಬಂಧಪಟ್ಟ ಮಂತ್ರಿಗಳು ಹೇಳಿದರೆ, ಅದನ್ನು ಒಪ್ಪುವುದಕ್ಕಾಗುವುದಿಲ್ಲ ಎನ್ನುವಂತಹ ಮಾತನ್ನು ಹೇಳುತ್ತಾರಲ್ಲ, ಹಾಗಿದ್ದರೆ, ಸರ್ಕಾರಗಳು ಇರಬಾರದು. The Government should regulate to govern. Otherwise, ಈ ಸರ್ಕಾರಗಳಿಗೆ ಯಾವುದೇ ಅರ್ಥಗಳಿರುವುದಿಲ್ಲ. ಇಲ್ಲಿ ಏನೊಂದು ಅನುಮಾನ ಬರುತ್ತದೆಂದರೆ, ಈ ಸಕ್ಕರೆ ಕಾರ್ಖಾನೆ ಲಾಬಿಯು ಸರ್ಕಾರದ ಮಾತಿಗೆ ಬೆಲೆ ಕೊಡುವುದಿಲ್ಲವೆಂದರೆ, ಸರ್ಕಾರ ಎಲ್ಲಿಯೋ ಒಂದು ಕಡೆ ಶಾಮೀಲಾಗಿರಬಹುದೆಂಬ ಅನುಮಾನ ಬರುತ್ತದೆ. ಇಲ್ಲದಿದ್ದರೆ, ಬೇರೆ ಯಾವುದೇ ಅರ್ಥ ಮೂಡಿಸುವುದಕ್ಕೆ ಸಾಧ್ಯವಿಲ್ಲ. ಖಾಸಗಿ ಕಾರ್ಖಾನೆಯವರು ಈ ರೀತಿ ಕನಿಷ್ಠ ಸಲಹೆಗಳಿಗೂ ಕೂಡ ಅವರು ಸ್ಪಂದಿಸದೇ ಹೋದರೆ, ಇವರ ಮತ್ತು ಅವರ ನಡುವೆ ಒಳಗಡೆ ಏನೋ ಹೊಂದಾಣಿಕೆ ಇದೆಯೆಂಬ ಮಾತನ್ನು ಬಹಳ ನೇರವಾಗಿ ಹೇಳಬೇಕಾಗುತ್ತದೆ. ಇದಕ್ಕೆ ಬೇರೆ ಅರ್ಥ ಬರಲು ಸಾಧ್ಯವಿಲ್ಲ. ಈಗ ಮಹಾರಾಷ್ಟ್ರದಲ್ಲೂ ಕೂಡ ಒಂದು ಸರ್ಕಾರವಿದೆ. ಯಾವಾಗೆಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ವಿಪತ್ತು ಬರುತ್ತದೋ,

ಅವತ್ತು ಸರ್ಕಾರದವರು ಕಾರ್ಖಾನೆಯವರ ರಕ್ಷಣೆಗೆ ಬಂದು ನಿಲ್ಲುತ್ತಾರೆ. ಇದಕ್ಕಿಂತ ಮುಂಚಿನ ವರ್ಷ ಅವರಿಗೆ ಪ್ರತಿ ಟನ್ನಿಗೆ 100 ರೂಪಾಯಿಗಳ incentive ಕೊಟ್ಟು, ಆ ಕಬ್ಬು ಬೆಳೆ ಉಳಿಸಿಕೊಂಡು ತನ್ಮೂಲಕ ಕಾರ್ಖಾನೆಗಳನ್ನು ಉಳಿಸಿಕೊಳ್ಳುವಂತ ಪ್ರಯತ್ನ ಮಾಡಿದರು. ಈ ಸರ್ಕಾರವೇಕೆ ಮಾಡುವುದಕ್ಕೆ ಸಾಧ್ಯವಿಲ್ಲ? ಈಗ ನೀವು ದೇವಸ್ಥಾನಗಳಿಗೆ ಕೋಟಿಗಟ್ಟಲೆ ದುಡ್ಡು ಕೊಡುತ್ತೀರಿ. ಇವತ್ತು ರೈತರುಗಳು ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಿರಬೇಕಾದರೆ, ನಿಮಗೆ ಯಾರು ಮುಖ್ಯ ಸ್ವಾಮಿ? ಇವತ್ತು ನಿಮಗೆ ಜೀವಂತ ದೇವರು ಮುಖ್ಯವೇ? ಅಥವಾ ಕಲ್ಲು ದೇವರು ಮುಖ್ಯವೇ? ಈ ದೇಶದಲ್ಲಿ ಇವತ್ತು ಕೇವಲ ಓಟಿನ ರಾಜಕಾರಣಕ್ಕಾಗಿ ದೇವರನ್ನು ಧರ್ಮವನ್ನು ಉಪೇಕ್ಷೆ ಮಾಡಿ ಈ ದೇಶದ ಆರ್ಥಿಕ ವ್ಯವಸ್ಥೆಯನ್ನು ಹಾಳುಮಾಡುವಂಥ ಪರಿಸ್ಥಿತಿ ಈ ಸೆಕ್ಯುಲರ್ ದೇಶದಲ್ಲಿ ಈ ರಾಜ್ಯದಲ್ಲಿ ಬಂದಿದೆಯೆಂದರೆ ನಾಚಿಕೆಪಟ್ಟುಕೊಳ್ಳಬೇಕು. ಈ ದೇಶದಲ್ಲಿ ಯಾರಿಗೆ ಆದ್ಯತೆ ಇರಬೇಕೆಂದರೆ ಸಮಾಜದ ಕಟ್ಟಕಡೇ ವ್ಯಕ್ತಿ ಯಾರು ಕಷ್ಟದಲ್ಲಿದ್ದಾರೆ, ನೋವಿನಲ್ಲಿದ್ದಾರೆ, ತೊಂದರೆಯಲ್ಲಿದ್ದಾರೆ ಅವರ ಪರವಾಗಿ ಸರ್ಕಾರ ನಿಲ್ಲಬೇಕೇ ಹೊರತು ಯಾರೋ ದೇವರ, ಧರ್ಮದ ಹೆಸರಿನಲ್ಲಿ ಶೋಷಣೆ ಮಾಡುತ್ತಾರೋ ಅಂಥವರ ಪರವಾಗಿ ಸರ್ಕಾರ ನಿಲ್ಲುತ್ತದೆಂದರೆ ಇದು ನಾಚಿಕೆಗೇಡು. ಇವತ್ತು ಸರ್ಕಾರ ಬಹಳ ದೊಡ್ಡ ತಪ್ಪನ್ನು ಮಾಡಿದೆ. ಮೊದಲು ರೈತರ ಮತ್ತು ಕಾರ್ಮಿಕರ ರಕ್ಷಣೆಗೆ ಬರಬೇಕಾದರೆ ಸರ್ಕಾರ ಇವತ್ತು ಕಲ್ಲು ಮಣ್ಣುಗಳ ಪರವಾಗಿ ನಿಂತಿದೆಯೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಈಗ ಕಾರ್ಖಾನೆಯವರು ಕಬ್ಬನ್ನು ತೆಗೆದುಕೊಂಡು ಹೋಗುತ್ತಿಲ್ಲ. ಕೊನೆಗೆ ಬೆಲ್ಲ ಮಾಡುವ ಪ್ರಯತ್ನ ಮಾಡಿದ್ದಾರೆ. ತಾವೂ ಗ್ರಾಮೀಣ ಭಾಗದಿಂದ ಬಂದಂಥವರು. ಬೆಲ್ಲ ಮಾಡುವುದೇನೆಂದರೆ ಹೊಸ industry setup ಮಾಡಿದಂತೆಯೇ. ಯಾರು ಅನುಕೂಲಸ್ಥರಿದ್ದಾರೆ ಅವರು ಬೆಲ್ಲ ಉತ್ಪಾದನೆ ಮಾಡುವುದಕ್ಕೆ ಶುರುಮಾಡಿದ್ದಾರೆ. ಮಾರುಕಟ್ಟೆಯಲ್ಲೂ ಬೆಲ್ಲದ ಬೆಲೆ ಎಷ್ಟಿರಬೇಕಾಗಿತ್ತೋ ಅಷ್ಟಿಲ್ಲ. ಇವತ್ತು ಸಕ್ಕರೆಗೆ incentive ದುಡ್ಡನ್ನು ಕೊಡುವುದರ ಜೊತೆಗೆ ಯಾರು ಬೆಲ್ಲವನ್ನು ಉತ್ಪಾದನೆ ಮಾಡುತ್ತಾರೆ ಅವರಿಗೆ ಪ್ರತಿ ಕ್ವಿಂಟಾಲ್‌ಗೆ ಕನಿಷ್ಠ 200 ರೂಪಾಯಿಯಾದರೂ ಸಹಾಯಧನವನ್ನು ನೀಡದಿದ್ದರೆ ಮುಂದಿನ ದಿವಸಗಳಲ್ಲಿ ರೈತರು ಕಬ್ಬು ಬೆಳೆಯುವುದನ್ನು ನಿಲ್ಲಿಸುತ್ತಾರೆ. ಇವತ್ತು ಖಾಸಗಿ ಕಾರ್ಖಾನೆಯವರು ಬರುತ್ತಿದ್ದಾರೆ. ಇವರು ನಮ್ಮ ನೀರು, ರಸ್ತೆ ವಿದ್ಯುತ್‌ನ್ನು ಉಪಯೋಗ ಮಾಡಿಕೊಂಡು ಸರ್ಕಾರದಿಂದ ಎಲ್ಲಾ ಸವಲತ್ತುಗಳನ್ನು ಪಡೆದುಕೊಂಡು ಸರ್ಕಾರದ ಮಾತನ್ನು ಕೇಳುವುದಿಲ್ಲವೆಂದರೆ ಇದ್ಯಾವ ನ್ಯಾಯ? ಇದು ಈ ರೀತಿಯಾಗಬೇಕಾಗಿದ್ದರೆ ಸರ್ಕಾರ ಖಾಸಗಿಯವರ ಜೊತೆ ಶಾಮೀಲಾಗಿ ರೈತರನ್ನು ಸಂಪೂರ್ಣವಾಗಿ ನಾಶ ಮಾಡುತ್ತಿದ್ದಾರೆಂಬ ಮಾತನ್ನು ಬಹಳ ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ನೀವೇನು ದೇವಸ್ಥಾನಗಳಿಗೆ, ಮಠಮಾನ್ಯಗಳಿಗೆ ದುಡ್ಡನ್ನು ಕೊಡುತ್ತೀರಿ ಅದನ್ನು ಬೇಕಾದರೆ ಒಂದು ವರ್ಷ ಪೋಸ್ಟ್‌ಪೋನ್ ಮಾಡಿ. ಏನೂ ಭಯಬೀಳುವುದಿಲ್ಲ, ಆಕಾಶ ಕೆಳಕ್ಕೆ ಬೀಳುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :–ಇಲ್ಲಿ ಚರ್ಚೆ ನಡೆಯುತ್ತಿರುವಾಗ ಅಲ್ಲೊಂದು ಗುಂಪು ಸೇರಿಕೊಂಡು ಮಾತನಾಡುತ್ತಿದೆ. ಇದೇನು ವಿಧಾನಸಭೆಯೇ?

ಶ್ರೀ ಬಿ.ಆರ್. ಪಾಟೀಲ್ :– ನಿಮ್ಮ ಕಷ್ಟ ಸುಖವನ್ನು ಮಾತನಾಡಲು ನಿಮಗೆ ಸ್ವಾತಂತ್ರ್ಯವಿದೆ. ಆದರೆ ಬೇರೆಯವರು ಮಾತನಾಡಲು ಅನುಕೂಲ ಮಾಡಿಕೊಡಬೇಕು.

ಶ್ರೀ ಹೆಚ್.ಡಿ ಬಸವರಾಜು :– ಅದನ್ನು ನೀವೇ ಹೇಳಿದ್ದರೆ ಸಮಯೋಚಿತವಾಗಿ ಒಳ್ಳೆಯದಾಗಿತ್ತು. ಆ ರೀತಿ ನಿಮಗೆ ಅಡ್ಡಿಯಾಗುತ್ತಿದೆ ಎಂಬುದು ನಿಮ್ಮ ಮನಸ್ಸಿಗೆ ಬಂದಿದ್ದರೆ ಅದನ್ನು ನೀವೇ express ಮಾಡಬಹುದಾಗಿತ್ತಲ್ಲ? ಏಕೆಂದರೆ ಈ ಸದನದಲ್ಲಿ ನಾವೆಲ್ಲ ಸ್ನೇಹಿತರು. ನಮಗೆ ನಾವೇ ಟೀಕೆ ಮಾಡಿಕೊಳ್ಳುವ ಬದಲು ನಿಮಗೇನಾದರು ತೊಂದರೆಯಾಯಿತೆಂದರೆ ನಮಗೆ ನಾವೇ ಸರಿಪಡಿಸಿಕೊಳ್ಳುತ್ತೇವೆ.

ಶ್ರೀ ಬಿ.ಆರ್. ಪಾಟೀಲ್ :– ಮಾನ್ಯ ಬಸವರಾಜ್‌ರವರೆ ತಮಗೆ ಒಂದು ಮಾತನ್ನು ಹೇಳುತ್ತೇನೆ. ನಾನೂ ಮೇಲ್ಮನೆಯಲ್ಲಿ ಆ ಜಾಗದಲ್ಲಿ ಕುಳಿತು ಕೆಲಸ ಮಾಡಿದ್ದೇನೆ. ಆದರೆ, ಇವತ್ತು ನಮ್ಮ ಮತ್ತು ಶಾಸನ ಸಭೆಯ ಬಗ್ಗೆ ಜನರಲ್ಲೇನು ಅಭಿಪ್ರಾಯ ಮೂಡಿದೆಯೆಂದರೆ, ನನ್ನನ್ನೂ ಸೇರಿಸಿ ಹೇಳುತ್ತೇನೆ, ಇದರಲ್ಲಿ ಗಾಂಭಿರ್ಯತೆಯಿಲ್ಲ, ಜನರ ಬಗ್ಗೆ ಇವರಿಗೇನು ಕಳಕಳಿ, ಕಾಳಜಿಯಿಲ್ಲ. ಸುಮ್ಮನೆ ಸದನಕ್ಕೆ ಹೋಗುತ್ತಾರೆ, ಕೂರುತ್ತಾರೆ ಮಾತನಾಡುತ್ತಾರೆ ನಿದ್ರೆ ಮಾಡುತ್ತಾರೆ ಬರುತ್ತಾರೆಂಬ ಸಾಮಾನ್ಯ ಅಭಿಪ್ರಾಯ ಬರುತ್ತಿರುವುದರಿಂದ ನಾನು ಎಲ್ಲಾ ಸದಸ್ಯರಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ, ನಾನು ಮಾತನಾಡುತ್ತೇನೆ, ನನ್ನ ಮಾತನ್ನು ಕೇಳಬೇಕೆಂಬ ಹವ್ಯಾಸಕ್ಕೆ ಹೇಳುತ್ತಿಲ್ಲ. ಸದನದಲ್ಲಿದ್ದಾಗ, ಯಾವುದೇ ಸಭೆಯಲ್ಲಿದ್ದಾಗ, ಮುಖ್ಯಮಂತ್ರಿಯವರ ಸಭೆಯಾಗಲಿ, ಇಲಾಖೆಯಾಗಲಿ, ಮತ್ತೊಂದು ಸಭೆಯೇ ಆಗಲಿ ಆ ಸಭೆಯ ಸಮಯವನ್ನು ಬಹಳ ಸಮಯೋಚಿತವಾಗಿ ಗಂಭೀರವಾಗಿ ನಮ್ಮನ್ನು ನಾವು ತೊಡಗಿಸಿಕೊಂಡು. . . . .

ಶ್ರೀ ಬಿ. ಆರ್. ರಮೇಶ್‌ಕುಮಾರ್ :– ತಾವು ಸರ್ಕಾರಗಳು ಮತ್ತು ಖಾಸಗಿ ಸಕ್ಕರೆ ಕಾರ್ಖಾನೆಗಳು ಶಾಮೀಲಾಗಿದ್ದಾರೆಂದು ಹೇಳಿದಿರಿ. ಅದನ್ನು ಬಿಡಿಸಿ ಹೇಳಿ ಹೇಗೆ, ಏನು, ಯಾವ್ಯಾವುದರಲ್ಲಾಗಿದೆ ಎಂಬ ಬಗ್ಗೆ clean ಆಗಿ eplain ಮಾಡಬೇಕು. You make out a case. You should come out with material facts and perticulars. You can't make sweeping remarks. ಅದಕ್ಕೆ ನಾವು ಹೆಚ್ಚು

ಆಸಕ್ತಿಯನ್ನು ತೋರಿಸುವುದಿಲ್ಲ. You have just made a statement. You should come out with facts and perticulars. ಇಂಥ ಶುಗರ್ ಫ್ಯಾಕ್ಟರಿಗೆ ಇಂಥ facility ಸಿಕ್ಕಿದೆ, ಸರ್ಕಾರದ ಇಂಥ ಆದೇಶವನ್ನು ಉಲ್ಲಂಘನೆ ಮಾಡಿದ್ದಾರೆ, ಸರ್ಕಾರಷ್ಟು ವೀಕಾ? ಅವರ ಹತ್ತಿರ ನಿಮ್ಮ ಮುಲಾಜೇನು ಎಂದು ಕೇಳಬೇಕಪ್ಪಾ. ನೀವು ಹೇಗೋ ಮಾತನಾಡಿದರೆ ಅದು ಹಾಗೇ ಇರುತ್ತದೆ. You should evoke response from the House.

ಶ್ರೀ ಬಿ.ಆರ್. ಪಾಟೀಲ್ :– ರಮೇಶ್ ಕುಮಾರ್‌ರವರು ಬಿಚ್ಚು ಮಾತಿಗೆ ಬಹಳ ಹೆಸರುವಾಸಿಯಾದಂಥವರು. ಬಹಳ ನೇರವಾಗಿ, ಸ್ಪಷ್ಟವಾಗಿ ಮಾತನಾಡುತ್ತಾರೆ. ಅವರು ಬಿಚ್ಚು ಹಾಗೂ ಚುಚ್ಚಿ ಬಹಳ ಸ್ಪಷ್ಟವಾಗಿ ಮಾತನಾಡುತ್ತಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಸರ್ಕಾರಕ್ಕೆ ಚುಚ್ಚಿ ಎಂದರೆ ನನಗೆ ಚುಚ್ಚುತ್ತೀರಲ್ಲ?

ಶ್ರೀ ಬಿ.ಆರ್. ಪಾಟೀಲ್ :– ನಿಮಗೆ ಚುಚ್ಚುವುದಿಲ್ಲ. ನೀವು ಚುಚ್ಚಿಯೂ ಚುಚ್ಚಲಾರದಂತೆ ಸೂಕ್ಷ್ಮವಾದ ಮಾತನ್ನು ಸರ್ಕಾರಕ್ಕೆ ಹೇಳುತ್ತಿರಿ ಎಂಬುದನ್ನೆಲ್ಲ ನಾವು ಗಮನಿಸುತ್ತೇವೆ. ಇವತ್ತಿನ ಚುನಾವಣೆಯ ವ್ಯವಸ್ಥೆಯಲ್ಲಿ, ಮೊನ್ನೆಯೇನು ಚಾಮುಂಡೇಶ್ವರಿ ಕ್ಷೇತ್ರದ ಚುನಾವಣೆ ನಡೆಯಿತು.....

(ಗೊಂದಲ)

ಮಾನ್ಯ ರಮೇಶ್ ಕುಮಾರ್‌ರವರು ಹೇಳಿದರು ಎಂದಮೇಲೆ ಅದಕ್ಕೆ ಪೂರಕವಾಗಿ ಆತ್ಮಾವಲೋಕನ ಮಾಡಿಕೊಳ್ಳೋಣ. ಯಾರೂ ಮುಚ್ಚಿಡುವುದು ಬೇಡ. ನಾವು ಯಾವ ದಿಕ್ಕಿನಲ್ಲಿ ಹೊರಟಿದ್ದೇವೆ? ಏಕೆ ಈ ಅನಾಹುತಗಳಾಗುತ್ತಿದೆ? ಏಕೆ ಈ ರೀತಿಯ ಪರಿಸ್ಥಿತಿ ಬರುತ್ತಿದೆ ಎಂಬುದರ ಬಗ್ಗೆ ಇಲ್ಲಿ ನಾವುಗಳು ಆತ್ಮಾವಲೋಕನ ಮಾಡಿ ಚರ್ಚೆ ಮಾಡದಿದ್ದರೆ ನಮ್ಮಷ್ಟಕ್ಕೆ ನಾವೇ ಮೋಸ ಮಾಡಿಕೊಂಡಂತೆ ಆಗುತ್ತದೆ. ಚುನಾವಣೆಗೆ ಯಾರ ಮನೆಯಿಂದ, ಸರ್ಕಾರದ ಖಜಾನೆಯಿಂದ ಹಣ ಬರುವುದಿಲ್ಲ. ಚುನಾವಣೆಯಲ್ಲಿ ಯಾವುದೋ ಮೂಲೆಯಿಂದ ಹಣವೇನು ಹರಿದುಬರುತ್ತದೆ ಅದರ ಲಾಭವನ್ನು ರಾಜಕೀಯ ಪಕ್ಷಗಳು ತೆಗೆದುಕೊಂಡುಬಂದು ನಮ್ಮ ಶತ್ರುಗಳನ್ನು ದಮನ ಮಾಡಿ ಈ ದುಡ್ಡನ್ನು ಇದಕ್ಕೆ ಉಪಯೋಗ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತಾರೆ.

(ಮಾನ್ಯ ಯೋಗೇಶ್ ಭಟ್‌ರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

(ಗೊಂದಲ)

ಛೇರ್ಮನ್ :– ಇಲ್ಲಿ ರಾಜಕೀಯ ಬೇಡ. ಪಾಟೀಲರೆ ವಿಷಯಕ್ಕೆ ಬನ್ನಿ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್ :– ಅಲ್ಲಿ ಹಣ ನೀರು ಹರಿದಂತೆ ಬಂತು. ಆ ರೀತಿ ನೀರು ಹರಿದಂತೆ ಬಂದಾಗ ಅದನ್ನು ಹರಿಸಿದವರು ಕೇಳುತ್ತಾರೆಯೇ?

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್ :– ವಿಚಾರದನ್ನು ಬಿಚ್ಚಿ ಹೇಳು ಎಂದರು, ಅದಕ್ಕೆ ನಾನು ಸುಮ್ಮಸುಮ್ಮನೆ ಯಾರಿಗಾದರು ಆರೋಪ ಮಾಡಬೇಕೆ?

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಸಭೆ ಎಂದರೆ ಒಂದು ಕಳೆ ಇರಬೇಕು. ನೋಡಿ ಈಗ ಎಷ್ಟೊಂದು ಚೆನ್ನಾಗಿದೆ ! ಅದಕ್ಕೆ ನಾನು ಆ ರೀತಿ ಹೇಳಿದ್ದು.

ಶ್ರೀ ವಾಟಾಳ್ ನಾಗರಾಜ್ :– ಪಾಟೀಲರೆ, ನೀವು ದಡ್ಡರೆಂದು ನಾನು ತಿಳಿದುಕೊಂಡಿರಲಿಲ್ಲ. ನೀವು ಅವರ ಮಾತನ್ನು ಕೇಳಿ ಕೆಟ್ಟಿರಿ. ಯಾರೂ ಯಾವತ್ತೂ ಅವರ ಮಾತನ್ನು ಕೇಳಬೇಡಿ. ನಾವು ಕೇಳಿ ಕೇಳಿ ಸಾಕಾಗಿಹೋಗಿದೆ.

ಶ್ರೀ ಬಿ.ಆರ್. ಪಾಟೀಲ್:–ಅವರ ಪಕ್ಕದಲ್ಲಿ ಕುಳಿತಿರುವ ನೀವು ಮತ್ತು ಆ ನಾಲ್ಕಾರು ಜನರು ಅವರ ಮಾತನ್ನು ಜಾಸ್ತಿ ಕೇಳುತ್ತೀರೆಂದು ನಮಗೆ ಅನುಮಾನವಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಾವು ಕೆಟ್ಟಿದ್ದೇವೆ, ನೀವೂ ಕೆಡುತ್ತೀರಾ?

ಶ್ರೀ ವಾಟಾಳ್ ನಾಗರಾಜ್ :– ನಾವು ಕೆಟ್ಟುಹೋಗಿದ್ದೇವೆ.

ಶ್ರೀ ಬಿ.ಆರ್. ಪಾಟೀಲ್ :– ನಾವು ಕೆಡುವುದಿಲ್ಲ. ನಾವು ಅವರ ಮಾತನ್ನು ಕೇಳುವುದಿಲ್ಲವೆಂದು ಭರವಸೆ ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಅಷ್ಟು ಗಟ್ಟಿ ಇದ್ದೀರಾ?

ಶ್ರೀ ಬಿ.ಆರ್.ಪಾಟೀಲ್ :– ಬಹಳ ಗಟ್ಟಿಇದೆ. ಮಣ್ಣು, ಭಾಷೆ ಎಲ್ಲವೂ ಗಟ್ಟಿ ಇದೆ.

ಶ್ರೀ ಎಂ.ಟಿ. ಕೃಷ್ಣಪ್ಪ :– ಮಾನ್ಯ ಅಧ್ಯಕ್ಷರೆ, ನಮಗೂ ಅವಕಾಶ ಕೊಡಿ. ಒಂದೇ ವಿಷಯದ ಮೇಲೆ ಹತ್ತು ಜನರು ಮಾತನಾಡಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್ :– ಏನೂ ವಿಷಯವಿಲ್ಲದೇ ಮಾತನಾಡಿದ್ದೇವೆಯೇ? ಒಂದು ವೇಳೆ ಇವತ್ತು ಈ ರೈತರ ಸಂಕಷ್ಟವನ್ನು ಬಗೆಹರಿಸುವ ವಿಚಾರವೇನಾದರೂ ಸರ್ಕಾರಕ್ಕೆ ಇದ್ದರೆ, ನಾನು ತಕ್ಷಣ ಕೇಳುತ್ತೇನೆ, ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಒಂದು ಹೈಪವರ್ ಕಮಿಟಿ ಮಾಡಿ ಸಭೆ ಕರೆಯಬೇಕು. ಬೆಲೆ ನಿಗದಿಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕಿದೆಯೆಂಬ ಹಾರಿಕೆಯ ಉತ್ತರವನ್ನು ನೀಡಿ ಉಳಿದುಕೊಂಡು ಬಿಡುತ್ತಾರೆ. ಆದರೆ, ಆ ರೀತಿ ಇಲ್ಲ. ಸುಪ್ರೀಂ ಕೋರ್ಟ್‌ನವರೂ ರಾಜ್ಯ ಸರ್ಕಾರದವರೂ ಬೆಲೆ ನಿಗದಿ

ಮಾಡಬಹುದೆಂದು ಹೇಳಿದ್ದಾರೆ. ಸುಪ್ರೀಂಕೋರ್ಟ್‌ನ ಸಂಬಂಧಪಟ್ಟ ಕಾಗದಪತ್ರಗಳನ್ನು ರೆಫರೆನ್ಸ್‌ಗೆ ಬೇಕಾದರೆ ಕೊಡುತ್ತೇನೆ. ಇವರು ಹೈಪವರ್ ಕಮಿಟಿ ಮಾಡಿ ಖಾಸಗಿ ಕಾರ್ಖಾನೆಗಳಿಗೆ ರೆಗ್ಯಲೇಟ್ ಮಾಡಬೇಕು, ಕಂಟ್ರೋಲ್ ಮಾಡಬೇಕು. ರೈತರೇನು ಕಷ್ಟದಲ್ಲಿದ್ದಾರೆ ಅವರನ್ನು ಉಳಿಸುವ ಪ್ರಯತ್ನ ಮಾಡಬೇಕು. ಎರಡನೆಯದು, ಇವತ್ತೇನು ಮಾನ್ಯ ಹಣಕಾಸು ಸಚಿವರು ಖಜಾನೆ ತುಂಬಿ ತುಳುಕುತ್ತಿದೆಯೆಂದು ಹೇಳಿದ್ದಾರೆ ಆ ರೀತಿ ತುಂಬಿ ತುಳುಕಿ ಚೆಲ್ಲಿ ಹೋಗುವುದರ ಬದಲಾಗಿ ಆ ರೀತಿ ತುಳುಕಿ ಸೋರುತ್ತಿರುವ ಹಣವನ್ನು ಕಬ್ಬು ಬೆಳೆಯುವ ರೈತರಿಗೆ ಒಂದು ಟನ್ ಕನಿಷ್ಟ 200 ರೂಪಾಯಿ incentive ಕೊಟ್ಟರೆ ಬಹುಶ ಬಡ ರೈತರು ಬದುಕುತ್ತಾರೆ. ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಮೂರನೆಯದಾಗಿ, ಬೆಲ್ಲವನ್ನು ಮಾಡುವುದು ಬಹಳ ಕಷ್ಟ. ಆದ್ದರಿಂದ ಬೆಲ್ಲ ಮಾಡುವ ರೈತರಿಗೆ ಒಂದು ಕ್ವಿಂಟಾಲ್‌ಗೆ 200–300 ರೂಪಾಯಿ incentive ಕೊಡಲೇ ಬೇಕು. ಕೊಡದಿದ್ದರೆ, ಇವತ್ತೇನಾದರು ಕಬ್ಬು ಬೆಳೆಗಾರರು ಕಬ್ಬು ಬೆಳೆಯುವುದನ್ನು ಬಿಟ್ಟರೆ ಮುಂದೆ ಈ ರಾಜ್ಯದಲ್ಲಿ 44 ಕಾರ್ಖಾನೆಗಳಿವೆ, ಸುಮಾರು ಹೊಸ ಕಾರ್ಖಾನೆಗಳು ಬರುತ್ತಿವೆ. Agro based industries ನಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಉದ್ಯೋಗ ಕೊಡುವಂಥದ್ದು ಯಾವುದೂ ಇಲ್ಲ. ಅಂತಹ ಒಂದು ಉದ್ದಿಮೆಯನ್ನು ನಾವು ಕರ್ನಾಟಕದಲ್ಲಿ ಉಳಿಸಿಕೊಳ್ಳಬೇಕು. ಇವತ್ತು ರಿಕವರಿ ಬಗ್ಗೆ ಮಾನ್ಯ ಸದಸ್ಯರಾದ ಎ.ಬಿ.ಪಾಟೀಲರವರು ಮತ್ತು ಮಾನ್ಯ ಹುಕ್ಕೇರಿಯವರು ಮಾತನಾಡಿದರು.. ಮಾನ್ಯ ಅಧ್ಯಕ್ಷರೆ, ರಿಕವರಿ ಬಗ್ಗೆ ಹೇಳುವುದಾದರೆ, ಈಗ ರೈತರು ತಮ್ಮ ಕಬ್ಬನ್ನು ತೆಗೆದುಕೊಂಡು ಕಾರ್ಖಾನೆಗಳಿಗೆ ಹೋಗುತ್ತಾರೆ, ಅಲ್ಲಿ ತೆಗೆದುಕೊಂಡ ಹೋದಮೇಲೆ ಕಾರ್ಖಾನೆಯ ಗೇಟುಗಳನ್ನು ಹಾಕಲಾಗುತ್ತದೆ. ಒಮ್ಮೆ ಗೇಟುಗಳನ್ನು ಹಾಕಿದ ಮೇಲೆ ರಿಕವರಿ 10 ಪಾಯಿಂಟ್ ಬಂತೋ, 9 ಪಾಯಿಂಟ್ ಬಂತೋ, 9.5 ಬಂತೋ ಎನ್ನುವಂತಾದ್ದರ ಬಗ್ಗೆ ಖಾಸಗಿ ಕಂಪನಿಯ ಕಾರ್ಖಾನೆಗಳಲ್ಲಿ ಚೆಕ್ ಮಾಡುವಂತಹ ಅಧಿಕಾರ ಯಾರಿಗೂ ಇಲ್ಲ ಇಂಡಸ್ಟ್ರೀಯಲ್ ಆ್ಯಕ್ಟ್ ಪ್ರಕಾರ ಒಂದ್ಸಲಾ ಕಾರ್ಖಾನೆ ಗೇಟ್ ಹಾಕಿದ ಮೇಲೆ ಒಳಗಡೆ ಬೇರೆ ಯಾರಿಗೂ ಹೋಗಲಿಕ್ಕೆ ಅವಕಾಶವಿಲ್ಲ, ಆ ರೀತಿ ಕಾನೂನು ಇದೆ. ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಯಾರೂ ಕೂಡ ಗಂಭೀರವಾಗಿ ಕೇಳುತ್ತಿಲ್ಲ, ಒಬ್ಬರು ನಿದ್ದೆ ಮಾಡುತ್ತಿದ್ದಾರೆ, ಒಬ್ಬರು.....

(ಗೊಂದಲ)

ಏನಿದು? ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟರೆ, ನಾನು ಮಾತನಾಡುತ್ತಿದ್ದೇನೆ ನಾನೇನು ಬುರುಡೆ ಕಥೆಯನ್ನು ಇಲ್ಲಿ ಹೇಳುತ್ತಿಲ್ಲ.

(ಗೊಂದಲ)

ನೀವು ಯಾರು ಹೇಳುವವರು? ನನಗೆ ಅಧ್ಯಕ್ಷರು ಹೇಳಲಿ. ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಯಾರಾದರೂ ಈ ರೀತಿ ಅಡ್ಡಿ ಪಡಿಸಿದರೆ ನಾನು ಸಹಿಸುವುದಿಲ್ಲ. ಇಲ್ಲಿ ಅವರ ಅಧಿಪತ್ಯವಿಲ್ಲ. ಸದನವನ್ನು ನೀವು ನಡೆಸುತ್ತಿದ್ದೀರಿ, ಬೇರೆ ಯಾರೂ ಅಲ್ಲ. ಈ ರೀತಿ...

(ಗೊಂದಲ)

ಛೇರ್ಮನ್ :– ಅವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ದಯಮಾಡಿ ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಏನಿದು? ಇದೇನು ಸಭೆಯೋ, ಸಂತೆಯೋ? ತಾವು ಸಭೆಯನ್ನು ನಡೆಸುತ್ತಿದ್ದೀರಿ. ತಾವು ಕುಳಿತುಕೊಳ್ಳಿ ಎಂದು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ. ಅದು ಬಿಟ್ಟು ಹಿಂದೆ ಯಾರೋ ಕುಳಿತುಕೊಳ್ಳಿ ಎಂದು ಹೇಳಿದರೆ ನಾನು ಕುಳಿತುಕೊಳ್ಳುವುದಿಲ್ಲ. ಸಭೆ ನಡೆಯವ ರೀತಿ ಇದಲ್ಲ.....

(ಗೊಂದಲ)

ಛೇರ್ಮನ್ :– ಇನ್ನು ತಮಗೆ ಮಾತನಾಡಲು ಎರಡು ನಿಮಿಷಗಳ ಕಾಲಾವಕಾಶ ಮಾತ್ರವಿದೆ, ದಯವಿಟ್ಟು ಬೇಗ ಮುಗಿಸಿ.

ಶ್ರೀ ಬಿ.ಆರ್. ಪಾಟೀಲ್ :– ಆ ರೀತಿ ಹೇಳುವುದಕ್ಕೆ ತಮಗೆ ಅಧಿಕಾರವಿದೆ, ತಾವು ಹೇಳಿ. ಇನ್ನು ಎರಡು ನಿಮಿಷಗಳಲ್ಲೇ ನಾನು ಮುಗಿಸುತ್ತೇನೆ. ಏನೋ ಹೇಳಬೇಕೆಂದು ಹೊರಟರೆ, ಮಧ್ಯೆ ಅಡ್ಡಿಪಡಿಸಿ ಇವರು ಬೇರೆ ಎಲ್ಲಿಗೋ ದಿಕ್ಕನ್ನು ತಪ್ಪಿಸುತ್ತಾರೆ. ಮಾನ್ಯ ಸದಸ್ಯರು weigh bridge ಬಗ್ಗೆ ಹೇಳಿದರು. ಈ ವೇಬ್ರಿಡ್ಜ್ ಬಗ್ಗೆ ಬಹಳ ದೊಡ್ಡ ಅನುಮಾನಗಳಿವೆ. ಇಷ್ಟು ಟನ್‌ಗಳಷ್ಟು ಕಬ್ಬು ಹೋದರೆ, ಅದಕ್ಕೆ ಎಷ್ಟು ಸಕ್ಕರೆ ಉತ್ಪಾದನೆಯಾಗಬೇಕು? ಎಷ್ಟು ಕಾಕಂಬಿ ಉತ್ಪಾದನೆಯಾಗಬೇಕು? ಎಂಬ ಪ್ರಮಾಣ ವೈಜ್ಞಾನಿಕವಾಗಿ ನಮ್ಮ ರೈತರಿಗೆ ಇವತ್ತು ಗೊತ್ತಾಗಬೇಕು. ಈಗೇನಾಗುತ್ತಿದೆ ಎಂದರೆ, ಯಾವ ಕಡೆಗೆ ಲಾಭ ಬರುತ್ತದೋ, ಆ ಕಡೆಗೆ ತೆಗೆದುಕೊಂಡು ಹೋಗಿ ಬಿಡುತ್ತಾರೆ. ಕಾಕಂಬಿಗೆ ಜಾಸ್ತಿ ರೇಟ್ ಆದರೆ, ಸಕ್ಕರೆ ಮಾಡುವುದನ್ನು ಬಿಟ್ಟು ಕಾಕಂಬಿ ಕಡೆಗೆ ಹೋಗುತ್ತಾರೆ. ಆ ಕಾಕಂಬಿ ಎಷ್ಟು ಪ್ರಮಾಣದಲ್ಲಿ ಉತ್ಪಾದನೆಯಾಯಿತೋ? ಏನಾಯಿತೋ? ಅದು ಯಾರಿಗೂ ಕೂಡ ಗೊತ್ತಾಗುವುದಿಲ್ಲ. ಇದರಲ್ಲಿ ಬಹಳ ದೊಡ್ಡದಾಗಿರತಕ್ಕಂಥ ಅವ್ಯವಹಾರ ನಡೆಯುತ್ತಿದೆ. ರಿಕವರಿ ಬಗ್ಗೆ ರೈತರಿಗೆ ಹೋಗಿ ಒಳಗಡೆ ಚೆಕ್ ಮಾಡುವಂತಹ ಅಧಿಕಾರ ಯಾರಿಗೂ ಕೂಡ ಇಲ್ಲ. ಸರ್ಕಾರದವರು ಇದಕ್ಕೇನಾದರೂ ಮಾಡಬೇಕು. ಇಲ್ಲದಿದ್ದರೆ

ಅವರು 10 ಬಂದರೂ ಕೂಡ, 8 ಬಂದಿದೆ ಎಂದರೆ ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಇದರಿಂದ ರೈತರನ್ನು ಕತ್ತಲಿನಲ್ಲಿ ಇಟ್ಟಂತಾಗುತ್ತದೆ. ಇದರ ಬಗ್ಗೆ ಸರ್ಕಾರದವರು ಏನಾದರೂ ಮಾಡಿ ನಿಯಂತ್ರಣ ಮಾಡಬೇಕು. ನಿರ್ದಿಷ್ಟವಾಗಿ ಎಷ್ಟು ಕಬ್ಬು ಹೋಯಿತು? ಎಷ್ಟು ರಿಕವರಿ ಬಂತು ಎನ್ನುವುದನ್ನು ಅವರು ನಿರ್ಧರಿಸುವಂತಹ ಪ್ರಾಮಾಣಿಕವಾದ ಪ್ರಯತ್ನ ಆಗಬೇಕು. ಇಂತಹ ಅವ್ಯವಹಾರಗಳೇನಿವೆ, ಅದರ ಬಗ್ಗೆ ತನಿಖೆಯಾಗಿ ಈ ಸಕ್ಕರೆ ಉದ್ಯಮವನ್ನು ಉಳಿಸಿಕೊಳ್ಳದೇ ಹೋದರೆ, ಈ ರಾಜ್ಯದಲ್ಲಿ ಸುಮಾರು 44 ಕಾರ್ಖಾನೆಗಳಲ್ಲಿ ಕೆ[illegible]ಡತಕ್ಕಂಥ ಸಾವಿರಾರು ಜನ ಕಾರ್ಮಿಕರು ಇವತ್ತು ಬೀದಿ ಪಾಲಾಗುತ್ತಾರೆ. [illegible] ಕಡೆ ರೈತರು ಕೂಡ ಹಾಳಾಗುತ್ತಾರೆ. ಇಂತಹ ಕೆಲಸಕ್ಕೆ ಸರ್ಕಾರದವರು ಅವಕಾಶ [illegible]ಡಿಕೊಡಬಾರದು. ಇವರ ರಕ್ಷಣೆಗೆ ಈ ಸಂದರ್ಭದಲ್ಲಿ ಬರಬೇಕೆಂದು ಹೇಳಿ, ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿದ್ದು ಕಲ್ಲಪ್ಪ ಸವದಿ (ಜಮಖಂಡಿ) :– ಸನ್ಮಾನ್ಯ ಅಧ್ಯಕ್ಷರೆ, ಕಬ್ಬನ್ನು ಬೆಳೆಯುವ ರೈತರು ಇವತ್ತು ರಾಜ್ಯದಲ್ಲಿ ಬಹಳ ಕಷ್ಟದಲ್ಲಿರುವುದು ತಮಗೆಲ್ಲಾ ಗೊತ್ತಿದೆ. ಈ ಮೊದಲು ಕಾರ್ಖಾನೆಗಳು ಪ್ರಾರಂಭವಾಗುವಾಗ, ಸುಮಾರು ಎರಡು ತಿಂಗಳವರೆಗೆ ಅಲ್ಲಿರತಕ್ಕಂಥ ರೈತ ಸಮೂಹ strike ಮಾಡಿದಾಗ ಕೊನೆಗೆ ಒಪ್ಪಂದವಾಯಿತು. ನಮ್ಮ ಭಾಗದಲ್ಲಿ ಇರತಕ್ಕಂಥ ಉಗಾರ ಫ್ಯಾಕ್ಟರಿಯಲ್ಲಿ 1200 ರೂಪಾಯಿಗಳ ರೇಟ್ ಕೊಡುವ ಒಪ್ಪಂದ ಮಾಡಿಕೊಳ್ಳುವುದರೊಂದಿಗೆ ಎಲ್ಲಾ ಕಾರ್ಖಾನೆಗಳೂ ಪ್ರಾರಂಭವಾದವು. ಕೆಲವೊಂದು ಕಾರ್ಖಾನೆಗಳವರು, ನಮಗೆ 1200 ರೂ.ಗಳನ್ನು ಕೊಡಲಿಕ್ಕಾಗುವುದಿಲ್ಲ, ಅದು ಹಳೆ ಫ್ಯಾಕ್ಟರಿ, ದೊಡ್ಡ ಫ್ಯಾಕ್ಟರಿ ಇದೆ, ನಾವು 1100 ರೂ.ಗಳನ್ನು ಮಾತ್ರ ಕೊಡುತ್ತೇವೆ, ಆಮೇಲೆ ಸರ್ಕಾರವೇನಾದರೂ ಪರ್ಚೇಸ್ ಟ್ಯಾಕ್ಸ್ ಮನ್ನಾ ಮಾಡಿದಾಗ, ಅದೆಷ್ಟು ಕೊಡಬೇಕಾಗುತ್ತದೋ, ಅದನ್ನು ಕೊಡುತ್ತೇವೆ ಎನ್ನುವಂತಹ ಮಾತನ್ನು ಹೇಳಿ ಪ್ರಾರಂಭವಾದಂತಹ ಫ್ಯಾಕ್ಟರಿಗಳು ಈಗ ರೈತರನ್ನು ಬೇಕಾಬಿಟ್ಟಿಯಾಗಿ ಸುಲಿಗೆ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಕಾರಣವೇನೆಂದರೆ, ಕಬ್ಬು ಆ ಫ್ಯಾಕ್ಟರಿಗೆ ಕೊಡುವುದಕ್ಕಿಂತಲೂ ಹೆಚ್ಚಿಗೆ ಬೆಳೆದಿದ್ದರಿಂದ, ಈ ಅವಕಾಶವನ್ನು ದುರುಪಯೋಗ ಮಾಡಿಕೊಂಡಿರುವ ಶಕ್ತಿಗಳು ರೈತರನ್ನು ಮೋಸಗೊಳಿಸಿ, 'ನಿಮ್ಮ ಕಬ್ಬು ಹೋಗುವುದಿಲ್ಲ, ನಿಮ್ಮ ಕಬ್ಬು ತೆಗೆದುಕೊಳ್ಳುವುದಿಲ್ಲ, ನಿಮ್ಮ ಕಬ್ಬು ಇಲ್ಲೇ ಕೊಳೆಯುತ್ತದೆ' ಎನ್ನುವಂತಹ ಭಯ ಹುಟ್ಟಿಸಿ, ಆ ಎಲ್ಲಾ ರೈತರು ಕಬ್ಬನ್ನು ಮನಸ್ಸಿಗೆ ಬಂದಂತಹ ರೇಟ್‌ಗೆ ಕೊಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಲವೊಂದು ಫ್ಯಾಕ್ಟರಿಯವರು, ಇನ್ನೂವರೆಗೆ 1200 ರೂ.ಗಳ ಕೆಳಗೆ ಬಂದಿಲ್ಲ ಅಥವಾ ಕೆಳಗೆ ಬಂದಿದ್ದರೂ ಸಹಿತ, ಒಂದು ಪ್ರಮಾಣೀಕೃತ ರೇಟ್‌ನ್ನು ಕೊಡುವುದಾಗಿ ಒಪ್ಪಂದ ಮಾಡಿಕೊಂಡಿದ್ದಾರೆ.

ಆ ರೇಟ್ ಅನ್ನು ಆಧಾರವಾಗಿಟ್ಟುಕೊಂಡು ಬೇರೆಯವರು ಆ ಕಾರ್ಖಾನೆ ರೇಟ್ ಅನ್ನು ಕೊಡಲಿಕ್ಕೆ ಹೇಳಬೇಕೆ ವಿನಃ ಅವರು ಬೇಕಾಬಿಟ್ಟಿಯಾಗಿ ರೈತರನ್ನು ಸುಲಿಗೆ ಮಾಡಿ ಹಾಸ್ಯಾಸ್ಪದವಾಗುವಂತೆ ಮಾಡುತ್ತಿದ್ದಾರೆ. ಇದು ಯಾವ ರೀತಿ ಎಂದರೆ, ಇವತ್ತು ಮಧ್ಯವರ್ತಿಗಳು ಹುಟ್ಟಿಕೊಂಡಿದ್ದಾರೆ. ರೈತರ ಕಬ್ಬನ್ನು ಟನ್‌ಗೆ 500 ರೂ.ಗಳಂತೆ ಖರೀದಿ ಮಾಡುವುದು, ಅವರು 900 ರೂ.ಗಳಂತೆ ಬೇರೆ ಕಡೆಗೆ ಮಾರಾಟ ಮಾಡುವುದು ಮಾಡುತ್ತಿದ್ದಾರೆ. ಈ ವ್ಯವಸ್ಥೆಯಲ್ಲಿ ಈ ರೀತಿ ಮಧ್ಯವರ್ತಿಗಳು ಹುಟ್ಟಿಕೊಂಡರೆ ರೈತರ ಗತಿ ಏನಾಗಬೇಕು? 'ಗಾಳಿ ಇದ್ದಾಗ ತೂರಿಕೋ' ಎನ್ನುವಂತಹ ಶಬ್ದದ ಅರ್ಥದಲ್ಲಿ ಈ ಕಾರ್ಖಾನೆಗಳ ಮಾಲೀಕರು ಹಾಗೂ ಅನೇಕ ಮಧ್ಯವರ್ತಿಗಳು ಇದನ್ನು ದುರುಪಯೋಗ ಪಡಿಸಿಕೊಂಡು, ಆ ರೈತರನ್ನು ಮೋಸಗೊಳಿಸುವಂತಹ ವಂಚನೆಯನ್ನು ಮಾಡುತ್ತಿದ್ದಾರೆ. ದಯವಿಟ್ಟು ಇಲಾಖೆಯವರು ಇದರ ಬಗ್ಗೆ ನಿಗಾ ವಹಿಸಿ, ರೈತರಿಗೆ ನ್ಯಾಯ ಒದಗಿಸಿಕೊಡದೇ ಹೋದರೆ, ರೈತರು ನಾಶವಾಗುತ್ತಾರೆ. ಈಗೇನು ಅನೇಕ ಹಿರಿಯ ಸದಸ್ಯರು ಮಾತನಾಡಿದ್ದಾರೋ, ಅದು ಅಕ್ಷರಶಃ ನಿಜವಿದೆ. ಎಲ್ಲಾ ರೀತಿಯಿಂದಲೂ ಆ ರೈತರ ಸಹಾಯಕ್ಕೆ ಸರ್ಕಾರ ಬರಬೇಕಾಗಿದೆ. ಕೇವಲ ಸಹಾಯಕ್ಕಾಗಿ ಬರುವುದಷ್ಟೇ ಅಲ್ಲದೆ, ಏನು ಅವ್ಯವಹಾರ ಮಾಡುತ್ತಾರೋ, ಫ್ಯಾಕ್ಟರಿಗಳಿಂದ ಅಥವಾ ಮಧ್ಯವರ್ತಿಗಳಿಂದ ರೈತರನ್ನು ಮೋಸಗೊಳಿಸುವಂತಹ ಸಂಚೇನು ನಡೆದಿದೆಯೋ, ದಯವಿಟ್ಟು ಅದನ್ನಾದರೂ ನಿಲ್ಲಿಸುವಂತಹ ವ್ಯವಸ್ಥೆ ಇಲಾಖೆಯಿಂದ ಆಗಬೇಕು. ಏಕೆಂದರೆ, ಈಗಾಗಲೇ ಅನೇಕ ಸದಸ್ಯರು ಮಾತನಾಡಿದ ಪ್ರಕಾರ, ಅನೇಕ ಕಾರ್ಖಾನೆಗಳಲ್ಲಿ ತೂಕದಲ್ಲಿ ಹೊಡೆಯುವಂತಹ ವ್ಯವಸ್ಥೆ ಇದೆ. ಅವರು 20 ಟನ್ ತೆಗೆದುಕೊಂಡು ಹೋದರೆ 15 ಟನ್ ಎಂದು ಲೆಕ್ಕ ಮಾಡುತ್ತಿದ್ದಾರೆ. 18 ಟನ್ ತೆಗೆದುಕೊಂಡು ಹೋದರೆ 12 ಟನ್ ಎಂದು ಲೆಕ್ಕ ಮಾಡುತ್ತಿದ್ದಾರೆ. ಈ ರೀತಿಯ ಅವ್ಯವಸ್ಥೆ ಆಗುತ್ತಿದ್ದರೂ ಸಹಿತ ಯಾರೂ ಕೂಡ ಅದನ್ನು ತಡೆಯುವಂತಹ ಸಂದರ್ಭವಿಲ್ಲ. ಏಕೆಂದರೆ, ಕಬ್ಬೇ ಹೋಗುವುದಿಲ್ಲ ಎನ್ನುವಂತಹ ಪರಿಸ್ಥಿತಿಯಲ್ಲಿ, ನಾವೇನಾದರೂ ತಕರಾರು ತೆಗೆದರೆ, ಕಬ್ಬನ್ನು ಒಯ್ಯುವುದಿಲ್ಲ ಎನ್ನುವಂತಹ ದೃಷ್ಟಿಕೋನದಿಂದ, ಎಷ್ಟಾದರೂ ಪರವಾಗಿಲ್ಲ, ನಮ್ಮ ಕಬ್ಬು ಖಾಲಿಯಾದರೆ ಸಾಕು ಎನ್ನುವಂತಹ ಸ್ಥಿತಿಗೆ ಇವತ್ತು ಅಲ್ಲಿ ರೈತರು ಬಂದಿದ್ದಾರೆ. ದಯವಿಟ್ಟು ಇಲಾಖೆಯಿಂದ ಈ ಎಲ್ಲಾ ಒಂದು ಕಾರ್ಖಾನೆಗಳ ಮೇಲೆ ನಿಗಾ ಇಡಿ, ಅದಕ್ಕೆ ಬೇಕಾದರೆ ಒಂದು squad ನೇಮಿಸಿ. ನೀವು ಎಲ್ಲಾ ಕಾರ್ಖಾನೆಗಳಿಗೆ ಭೇಟಿ ಕೊಟ್ಟು, ಅಲ್ಲಿ ರೈತರಿಗೆ ಏನು ಮೋಸ ಮಾಡುತ್ತಿದ್ದಾರೋ, ಅದನ್ನು ತಿಳಿದುಕೊಳ್ಳುವಂತಹ, ಚೆಕ್ ಮಾಡುವಂತಹ ಒಂದು ವ್ಯವಸ್ಥೆಯನ್ನೂ ಸಹಿತ ಸರ್ಕಾರದವರು ಮಾಡಬೇಕು. ಏಕೆಂದರೆ, ಈಗ ಸಹಿತ ಅಲ್ಲಿ ಸಾಕಷ್ಟು ಕಾರ್ಖಾನೆಗಳಿವೆ. ಈಗೇನು ಕಬ್ಬು ಹೆಚ್ಚಾಗಿದೆ ಎಂಬ ಒಂದೇ ನೆಪದಿಂದ ರೈತರನ್ನು ಲೂಟಿ ಮಾಡಲು

ಹೊರಟಿರುವಂತಹ ವ್ಯವಸ್ಥೆ ಈ ರಾಜ್ಯದಲ್ಲಿ ನಡೆಯುತ್ತಿದೆ. ಅದಕ್ಕೆ ಅವಕಾಶ ಕೊಡಬಾರದು. ಒಂದು ನಿಯಮ ಮಾಡಬೇಕು ಸಕ್ಕರೆ ಕಾರ್ಖಾನೆಗಳ ಮಾಲೀಕರ ಸಭೆ ಕರೆದು, ಈ ರೀತಿ ಸಕ್ಕರೆ ಬೆಲೆ ಕಡಿಮೆಯಾದಾಗ ಯಾವ ರೇಟ್‌ನಲ್ಲಿ ನಾವು ಕೊಡಬೇಕು, ಯಾವ ರೇಟ್ ಇದ್ದಾಗ ನಾವು ಕಬ್ಬು ಬೆಳೆಯಬೇಕು? ಕಟಾವು ಯಾವ ರೀತಿಯಾಗಿ ಆಗಬೇಕು? Transportation ಯಾವ ರೀತಿ ಆಗಬೇಕು ಎನ್ನುವಂತಹ ನಿಯಮ ಮಾಡಿದರೆ ರೈತರು ಉಳಿಯಲಿಕ್ಕೆ ಸಾಧ್ಯವಿದೆ. ಅದಕ್ಕಾಗಿ ಇಲಾಖೆ ದಯವಿಟ್ಟು ಆ ಕಡೆಗೆ ಲಕ್ಷ್ಯ ಕೊಡಬೇಕು. ಆ ರೈತರನ್ನು ಉಳಿಸುವಂತಹ ಒಂದು ಕೆಲಸವನ್ನು ಮಾಡಬೇಕು ಎನ್ನುವಂತಹ ಮಾತನ್ನು ತಮ್ಮ ಮುಖಾಂತರ ಸರ್ಕಾರದ ಗಮನವನ್ನು ನಾನು ಸೆಳೆಯ ಬಯಸುತ್ತೇನೆ. ಇದಲ್ಲದೇ, ಅಲ್ಲಿರತಕ್ಕಂಥ ಅನೇಕ ಕಾರ್ಖಾನೆಗಳ ಮಾಲೀಕರು, ಈಗಾಗಲೇ ಅನೇಕ ಹಿರಿಯ ಸದಸ್ಯರು ಮಾತನಾಡಿದರು, ಬೇರೆ ಬೇರೆ ರಾಜ್ಯಗಳಲ್ಲಿ ಏನೇನು ಸಹಾಯ, ಸೌಲಭ್ಯಗಳನ್ನು ಕೊಡುತ್ತಾರೋ, ಆ ರೈತರ ಪರ್ಚೇಸ್ ಟ್ಯಾಕ್ಸ್ ಇರಬಹುದು, ಅಥವಾ 100 ರೂಪಾಯಿಗಳ incentives ಇರಬಹುದು, ಆ ರೀತಿಯಾದರೂ ಸಹಿತ ಸರ್ಕಾರ ರೈತರ ನರವಿಗೆ ಬರಬೇಕು. ಈಗಾಗಲೇ ನಮ್ಮ ಹಿರಿಯ ಸದಸ್ಯರಾದ ಶಿವಾನಂದ್ ಪಾಟೀಲ್‌ರವರು ಹೇಳಿದರು. ಕೇಂದ್ರಸರ್ಕಾರದ ಪ್ಯಾಕೇಜ್‌ನಲ್ಲಿ, ರಿಕವರಿ 6 ಇದ್ದಾಗ ಮಾತ್ರ 100 ರೂಪಾಯಿಗಳ incentives ಕೊಡುತ್ತಾರಂತೆ. ಅದು ಈ ರಾಜ್ಯದಲ್ಲಿ, ಅದರಲ್ಲೂ ವಿಶೇಷವಾಗಿ ನಮ್ಮ ಭಾಗದಲ್ಲಿ ಯಾರಿಗೂ ಗೊತ್ತಿರಲಿಲ್ಲ. ಏಕೆಂದರೆ ನಮ್ಮದು ರಿಕವರಿ 12-13 ಇದೆ. ಬಹಳಷ್ಟು ಕಡಿಮೆ ಎಂದರೆ ಅದು 9-10 ಬರಬಹುದು. ಅದಕ್ಕಿಂತ ಕೆಳಗೆ ಯಾವ ಸಂದರ್ಭದಲ್ಲೂ ಬರುವುದಿಲ್ಲ. ಆ ರೀತಿ ಉತ್ತಮ ಗುಣಮಟ್ಟದ ಕಬ್ಬು ನಮ್ಮ ಭಾಗದಲ್ಲಿ ಇರುವುದರಿಂದ, 6 ರಿಕವರಿ ಬರಲಿಕ್ಕೆ ಸಾಧ್ಯವೇ ಇಲ್ಲ. ಕೇವಲ ಪ್ಯಾಕೇಜ್ ಘೋಷಣೆ ಮಾಡಿದ್ದಾರೆ. ಆದರೆ ಆ ಪ್ಯಾಕೇಜ್ ಯಾರಿಗೂ ಕೂಡ ಮುಟ್ಟಿಲ್ಲ. ನೀವೇನಾದರೂ ಪ್ಯಾಕೇಜ್ ಕೊಡುವುದಾಗಿದ್ದರೆ, ಕಬ್ಬು ಜಾಸ್ತಿಯಾಗಿದ್ದರೆ, ಆ ಜಾಸ್ತಿ ಕಬ್ಬನ್ನು ನುರಿಸುವ ಸಲುವಾಗಿ ನೀವು ಪ್ಯಾಕೇಜ್ ಕೊಡಿ. ನೀವು ಯಾವ ಪ್ರದೇಶದಲ್ಲಿ ರೈತರು ಬೆಳೆದ ಕಬ್ಬು ಹೆಚ್ಚಾಗಿ ಉಳಿದಿದೆ ಎಂಬುದರ ಬಗ್ಗೆ ನಿಮಗೆ ಲಕ್ಷ್ಯ ಬಂದಿದ್ದರೆ, ಆ ಪ್ರದೇಶಕ್ಕೆ 100 ರೂಪಾಯಿಗಳ incentives ಕೊಡುತ್ತೇವೆ, ಆ ಕಬ್ಬನ್ನು ನೀವು ಒಯ್ಯಿರಿ ಎಂದು ಕಾರ್ಖಾನೆಗಳಿಗೆ ಹಂಚಿ ಕೊಟ್ಟರೆ, ಆ ಕಬ್ಬು ಖಾಲಿಯಾಗಲಿಕ್ಕೆ ಸಾಧ್ಯವಾಗುತ್ತದೆ. ಈ ರೀತಿ ಅನೇಕ ಸಮಸ್ಯೆಗಳಿವೆ. ಈ ಕಬ್ಬು ಬೆಳೆಗಾರರ ಸಮಸ್ಯೆಗಳಿಗೆ ಸರ್ಕಾರ ಕೂಡಲೇ ಸ್ಪಂದಿಸಬೇಕು. ಇಲ್ಲದಿದ್ದರೆ, ಮತ್ತೊಮ್ಮೆ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪ್ರಸಂಗ ರಾಜ್ಯದಲ್ಲಿ ಬರಬಹುದು. ಅಲ್ಲದೆ, ಇನ್ನೂ ಅನೇಳ ಸದಸ್ಯರು ಮಾತನಾಡಿ ಹಿಂದೆಂದೂ ಕಾಣದಂತಹ ಸಮಸ್ಯೆ ಈ ಸರ್ಕಾರದಲ್ಲಿ ಬಂದಿದೆ ಎನ್ನುವಂತಹ ಮಾತನ್ನು ಹೇಳಿದರು.

ನಾನು ಇದನ್ನು ಒಪ್ಪುವುದಿಲ್ಲ. ಈ ಹಿಂದೆ ಈ ರೀತಿ ಇರಲಿಲ್ಲ. ನಾನೂ ರೈತನಾಗಿದ್ದೇನೆ. ಹಿಂದಿನ ಸರ್ಕಾರದಲ್ಲಿ ನಮ್ಮ ಅನೇಕ ರೈತರು ಅಕ್ಷರಶಃ ಬೆಂಕಿ ಹಂಚಿ ಸುಟ್ಟು ತಿಪ್ಪೆಗುಂಡಿಯಲ್ಲಿ ತುಂಬಿದಂತಹ ಉದಾಹರಣೆಗಳಿವೆ. ಆದರೂ ಯಾರೂ ಸಹಿತ ರೈತರ ಸಹಾಯಕ್ಕೆ ಬಂದಿಲ್ಲ, ನಾವು ಅದನ್ನು ಕೇಳಿಯೇ ಇಲ್ಲ. ಆದರೂ ನಮ್ಮ ಸಮ್ಮಿಶ್ರ ಸರ್ಕಾರ ನಮ್ಮ ರೈತರ ಪರವಾಗಿದೆ, ರೈತರ ಸಾಲ ಮನ್ನಾ ಮಾಡಿದೆ, ಬಡ್ಡಿ ಮನ್ನಾ ಮಾಡಿದೆ, ಶೇಕಡ 4 ರ ಬಡ್ಡಿದರದಲ್ಲಿ ಸಾಲ ಕೊಟ್ಟಿದೆ, ರೈತರ ಪರವಾದ ನೂರಾರು ಯೋಜನೆಗಳನ್ನು ಘೋಷಣೆ ಮಾಡಿದೆ. ಅದೇ ರೀತಿಯಲ್ಲಿ ಸರ್ಕಾರ ಈ ಕಬ್ಬು ಬೆಳೆಗಾರರ ರೈತರ ಸಹಾಯಕ್ಕೂ ಸಹಿತ ಬರಬೇಕು ಎನ್ನುವಂತಹ ವಿನಂತಿಯನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ನಾನು ಮಾಡಿಕೊಳ್ಳುತ್ತಿದ್ದೇನೆ.

ಛೇರ್ಮನ್ :– ಚರ್ಚೆ ಮುಗಿದಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) :– ಮಾನ್ಯ ಅಧ್ಯಕ್ಷರೆ, ಇದು ಗಹನವಾದ ವಿಷಯವಾಗಿದೆ. ಆ ಭಾಗದವರೆಲ್ಲಾ ಮಾತನಾಡಲಿ ಎಂದು, ನಾನು ರುಜು ಹಾಕಿದ್ದರೂ ಕೂಡ, ಕೊನೆಯಲ್ಲಿ ಮಾತನಾಡಬೇಕೆಂದು ಕಾದಿದ್ದೆ. ಈಗ ನಮ್ಮ ಮುಂದಿರುವ ಪ್ರಶ್ನೆ ಏನೆಂದರೆ, ರೈತರು ಕಬ್ಬನ್ನು ಎಲ್ಲಿಗೆ ಕೊಡಬೇಕು? ಯಾವ ಫ್ಯಾಕ್ಟರಿಯವರು ಇದನ್ನು ಅರೆಯಬೇಕಾಗಿತ್ತೋ, ಅವರು ಇದನ್ನು ತೆಗೆದುಕೊಳ್ಳುತ್ತಿಲ್ಲ.

(5:00 ಗಂಟೆ)

ಮತ್ತೆ ಅವರಿಗೆ ಏನೊಂದು ಧಾರಣೆ ಕೊಡಬೇಕಾಗಿತ್ತೋ, ಅದನ್ನೂ ಕೊಡುತ್ತಿಲ್ಲ. ಮತ್ತೆ, ಪ್ರತಿದಿವಸ ಕಳೆದಂತೆ ಕಬ್ಬಿನ ತೂಕ ಕಡಿಮೆಯಾಗಿ ಮಾಹಿಶ್ಚರ್ ಅಂಶ ಕಡಿಮೆಯಾಗಿ ವೇಟ್ ಲಾಸ್ ಆಗುತ್ತದೆ. ರಿಕವರಿ ಲಾಸ್ ಆಗುತ್ತದೆ. ಇಂತಹ ಸಮಯದಲ್ಲಿ ಸರ್ಕಾರ ರೈತರ ನೆರವಿಗೆ ಏತಕ್ಕೆ ಬರಲಿಲ್ಲ? ಈ ವಿಷಯವನ್ನು ನಾವು ಮೂರ್‍ನಾಲ್ಕು ಸಾರಿ ಶಾಸನ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇವೆ. ಒಂದು ಕಬ್ಬಿನ ಕಾರ್ಖಾನೆಗೆ ಲೈಸೆನ್ಸ್ ಕೊಡಬೇಕಾದರೆ ಅವನಿಗೆ ಏರಿಯಾವನ್ನು ಮಾರ್ಕ್ ಮಾಡಿರುತ್ತೀರಿ. ಇಂತಿಂಥ ಏರಿಯಾದಿಂದ ಆ ಫ್ಯಾಕ್ಟರಿಯವರು ಕಬ್ಬನ್ನು ತೆಗೆದುಕೊಳ್ಳಬೇಕೆಂದು ಆ ಕಬ್ಬನ್ನು ಅರೆಯುವ ಸಾಮರ್ಥ್ಯ ಇದೆಯಾ ಇಲ್ಲವಾ ಎಂಬುದನ್ನು ನಿಗದಿ ಮಾಡಿರುತ್ತೀರಿ ಮತ್ತೆ ಇಲ್ಲಿ ಒಬ್ಬ ಮಂತ್ರಿಗಳನ್ನು ಇಟ್ಟುಕೊಂಡಿರುತ್ತಿದ್ದೀರಿ, ಡೈರೆಕ್ಟರ್ ಇಟ್ಟುಕೊಂಡಿದ್ದೀರಿ. ಈ ಶಾಸನ ಸಭೆಯಲ್ಲಿ ಎರಡು ತಿಂಗಳಿನಿಂದ ನಾವು ಕೇಳುತ್ತಾ ಬಂದಿದ್ದೇವೆ. ಮೊದಲನೆಯದಾಗಿ 1200 ರೂಪಾಯಿ ದುಡ್ಡನ್ನು ಕೊಡಿ ಎಂದು ಕೇಳಿದೆವು, ಅದಕ್ಕೆ ರಾಜಿಯಾಗಲಿಲ್ಲ, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಅಥವಾ ಹಳೇಯ ಮೈಸೂರಿನಲ್ಲಿ ಧಾರಣೆ ವ್ಯತ್ಯಾಸವಿದೆ. ಅದನ್ನಾದರೂ

ಸರಿಪಡಿಸಿ ಎಂದು ಕೇಳಿದೆವು ಅದಕ್ಕೂ ರಾಜಿಯಾಗಲಿಲ್ಲ. ಈಗ ಕಬ್ಬನ್ನೇ ತೆಗೆದುಕೊಳ್ಳುತ್ತಿಲ್ಲ ಏನಾದರೂ ಮಾಡಿರೆಂದು ದುಂಬಾಲು ಬೀಳುತ್ತಿದ್ದರು ಕೂಡ ಸರ್ಕಾರದವರು ಯಾವ ಕಡೆಯೂ ನೋಡುತ್ತಿಲ್ಲ, ನಿಜವಾಗಿ ದುರ್ದೈವ. ಮಂತ್ರಿಗಳು, ಸರ್ಕಾರ ಏತಕ್ಕೆ ಇರಬೇಕೆಂದರೆ, ಯಾರಾದರು ಇಂತಹ ಕಷ್ಟಕ್ಕೆ ಸಿಕ್ಕಿಹಾಕಿಕೊಂಡವರ ನೆರವಿಗೆ ಬರಬೇಕು. ನೀವು ಅವರಿಗೇನು ಮಾಡುವ ಸ್ಥಿತಿಯಲ್ಲಿಲ್ಲ. ಅವರ ನೆರವಿಗೆ ಬನ್ನಿ, ಬಂಡವಾಳ ಹಾಕಿ ಕಷ್ಟಪಟ್ಟು ಬೆಳೆದಿದ್ದಾರೆ, ರೈತರು ನಾಶವಾಗಿ ಹೋಗುತ್ತಿದ್ದಾರೆ, ಏನಾದರೂ ಮಾಡಿ ಎಂದರೆ ಆ ಕಡೆ ನೋಡುತ್ತಿಲ್ಲ. 200–300 ಕೋಟಿ ರೂಪಾಯಿಗಳ ರಿವಾಲ್ವಿಂಗ್ ಫಂಡ್‌ಅನ್ನು ಎಪಿಎಂಸಿ ನಲ್ಲಿ ನೀವು ತೆಗೆದು ಇಟ್ಟುಬಿಟ್ಟು ನಾವು ರೈತರ ಪರವಾಗಿದ್ದೇವೆಂದು ಹೇಳಿದರೆ ಆಗುವುದಿಲ್ಲ. ಇಂತಹ ಸಮಯದಲ್ಲಿ ತಾವು ಧಾವಿಸಿ ಬಂದು ಅವರ ರಕ್ಷಣೆಗೆ ಬರಬೇಕು. ಈ ರಾಜ್ಯದ ಕಾನೂನಿನ ಕೆಳಗೆ ಶುಗರ್ ಫ್ಯಾಕ್ಟರಿಗಳು ಸ್ಥಾಪನೆಯಾಗಿರುವುದು, ಇದರಿಂದ ಆಚೆಯಾಗಿರುವುದಿಲ್ಲ. ಇಲ್ಲಿ ಅವರಿಗೆ ಲೈಸೆನ್ಸ್ ಕೊಡುವುದಕ್ಕೆ ಯುನೈಟೆಡ್ ನೇಷನ್ ಬರಲಿಲ್ಲ. ಅವರನ್ನು ಕರೆಯಿಸಿ ಕುಳಿತುಕೊಂಡು ಚರ್ಚೆ ಮಾಡಿ, ಕಬ್ಬನ್ನು ಅರೆಯುವುದಕ್ಕೆ ವ್ಯವಸ್ಥೆ ಮಾಡಿ ಎಂದರೆ, ನಮ್ಮನ್ನೆಲ್ಲಾ ಜಗಳವಾಡುವುದಕ್ಕೆ ಬಿಟ್ಟು ಸಂಬಂಧಪಟ್ಟ ಮಂತ್ರಿಗಳು ಇಲ್ಲದೆ, ದೀರ್ಘನಿದ್ರೆಯಲ್ಲಿ ಸರ್ಕಾರವಿದ್ದು ಬಿಟ್ಟರೆ ರೈತರ ಗತಿ ಏನು? ಒಂದೊಂದು ದಿವಸ ಹೋದರು ಅವರಿಗೆ ನಷ್ಟವಾಗುತ್ತದೆ. ವಿಧಾನಸೌಧದ ಮುಂದೆ ಪ್ರೊಟೆಸ್ಟ್ ಮಾಡೋಣವೆಂದರೆ ಅವರನ್ನು 2 ಕಿ.ಮೀ ದೂರ ನಿಲ್ಲಿಸುತ್ತೀರಿ. ಹೊರಗಡೆ ಮಾಡುವವರು ನಿಮ್ಮ ಕಣ್ಣಿಗೆ ಕಾಣುವುದಿಲ್ಲ, ಪೇಪರ್‌ನಲ್ಲಿ ಬರುವುದನ್ನು ಓದುವುದಿಲ್ಲ, ಮಾಧ್ಯಮಗಳು ಹೇಳುವುದನ್ನು ನೋಡುವುದಿಲ್ಲವೆಂದರೆ ನಿಮಗೆ ವಿರಾಮವಿರುವುದಿಲ್ಲ. ಏನಾದರೂ ಮಾಡುತ್ತೀರಾ, ಹೀಗೆ ಬಿಡುತ್ತೀರಾ, ಬರೇ ಭಾಷಣ ಮಾಡಿಕೊಂಡು ಹೋಗುತ್ತೀರಾ ಎಂಬುದನ್ನು ತಾವು ಇವತ್ತು ಹೇಳಬೇಕು. ತಾವು ಮಾಡಬೇಕಾದ ಮೊದಲನೆ ಕೆಲಸ, ನಮ್ಮದೇನು ಕಬ್ಬಿದೆ, ಇಡೀ ಕಬ್ಬನ್ನು ಅರೆಯುವವರೆಗೆ ಕಬ್ಬಿನ ಕಾರ್ಖಾನೆಗಳು ಮುಚ್ಚಬಾರದು, ಅರೆಯುವ ಕೆಲಸವನ್ನು ಕ್ಲೋಸ್ ಮಾಡಬಾರದು. ಮೊದಲನೆ ಸೂಚನೆ ತಮ್ಮಿಂದ ಹೋಗಬೇಕು. ಎರಡನೆಯದು, ತಾವೇನು ಧಾರಣೆಯನ್ನು ನಿಗದಿ ಮಾಡುತ್ತೀರಿ, ಅದನ್ನು ಅವರು ಕೊಡುತ್ತಾರೋ ಇಲ್ಲವೋ ಎಂಬುದನ್ನು ಸಭೆ ಕರೆದು ಚರ್ಚೆ ಮಾಡಬೇಕು. ಎಲ್ಲೆಲ್ಲಿ ರಿಕವರಿ ಲಾಸ್ ಆಗಿದೆ, ಕೇಂದ್ರ ಸರ್ಕಾರದ ಪ್ಯಾಕೇಜ್ ಒಳಗಡೆ ಬರುವ ಕಡೆ ಆ ಪ್ಯಾಕೇಜ್‌ನಿಂದ ಹಣ ತರಿಸಿ ರೈತರಿಗೆ ಕೊಡಬೇಕು, ಅಷ್ಟನ್ನು ಮಾಡುತ್ತೀರಾ ಎಂದು ನಿಮ್ಮನ್ನು ಕೇಳಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಕಬ್ಬು ಬೆಳೆಗಾರರು ಅನೇಕ ಸಾರಿ ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದಾರೆ. ಸ್ವಲ್ಪ ಹೆಚ್ಚು ಕಡಿಮೆ ಹೋದ ವಾರ ನಮ್ಮ ರೈತ ಸಂಘದ ಮುಖಂಡರಾದ ಪುಟ್ಟಣ್ಣಯ್ಯನವರ ನಾಯಕತ್ವದಲ್ಲಿ ಇಡೀ ರಾಜ್ಯದ ಎಲ್ಲಾ

ಕಬ್ಬು ಬೆಳೆಗಾರರು ಬಂದು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದಾರೆ. ಈ ಬಗ್ಗೆ ಸರ್ಕಾರಕ್ಕೆ ಪ್ರಾಮಾಣಿಕವಾದ ಚಿಂತನೆ ಇಲ್ಲ. ಉತ್ತರ ಕರ್ನಾಟಕದಲ್ಲಿ ಎಷ್ಟು ಕಾರ್ಖಾನೆಗಳಿವೆ, ಎಷ್ಟು ಕಾರ್ಖಾನೆಗಳು ಮುಚ್ಚಿವೆ, ಅವುಗಳ ಪರಿಸ್ಥಿತಿ ಏನು, ಎಷ್ಟು ಕಬ್ಬನ್ನು ಅರೆಯಬೇಕಾಗಿತ್ತು, ಏತಕ್ಕೆ ಅವರು ನಿಲ್ಲಿಸಿದ್ದಾರೆ, ಅವರ ಪರಿಸ್ಥಿತಿ ಏನು ಎಂಬುದರ ಬಗ್ಗೆ ಸರ್ಕಾರಕ್ಕೆ ಅರಿವಿಲ್ಲ. ಎಷ್ಟು ಪ್ರದೇಶಗಳಲ್ಲಿ ರೈತರು ಕಬ್ಬನ್ನು ಬೆಳೆದಿದ್ದಾರೆ, ವೈಜ್ಞಾನಿಕವಾಗಿ ರೈತರು ಕಬ್ಬಿನ ಬೆಳೆ ಬೆಳೆಯುವುದಕ್ಕೆ ನಾವು ಇದುವೆವಿಗೂ ಈ ಕ್ಷಣದವರೆವಿಗೂ ಚಿಂತನೆ ಮಾಡಿಲ್ಲ. ವೈಜ್ಞಾನಿಕವಾಗಿ ಈ ಕ್ಷಣದವರೆಗೂ ಕಬ್ಬನ್ನು ಹೇಗೆ ಬೆಳೆಯಬೇಕು, 11 ತಿಂಗಳ ಕಟಾವ್ ಆದ ನಂತರ ಮತ್ತೇ ಏನು ಮಾಡಬೇಕು, ಎರಡನೇ ಬೆಳೆ, ಮೂರನೇ ಬೆಳೆ ಏನು ಮಾಡಬೇಕು, ಯಾವ ರೀತಿ ಬೆಳೆಯಬೇಕು, ನೀರಿನ ವ್ಯವಸ್ಥೆ ಏನು ಇವ್ಯಾವುದರ ಬಗ್ಗೆ ನಮ್ಮ ಕೃಷಿ ಇಲಾಖೆಯವರಾಗಲಿ ಯಾರೇ ಆಗಲಿ ಅವರಿಗೆ ಸರಿಯಾದ ರೀತಿಯ ಮಾರ್ಗದರ್ಶನವನ್ನು ಕೊಡುತ್ತಿಲ್ಲ. ಜೊತೆಗೆ ಇವತ್ತು ಎಂದೂ ಕಾಣದ ರೋಗ ಕಬ್ಬಿಗೆ ಬರುತ್ತಿದೆ. ಕಬ್ಬಿನ ರೆಕ್ಕೆಗೆ ಬಿಳಿ ಉಣ್ಣೆ ರೋಗ ಬರುತ್ತದೆ, ಸರ್ಕಾರಕ್ಕೆ ಈ ಬಗ್ಗೆ ಚಿಂತನೆ ಇಲ್ಲ. ಮೊದಲು ತೂಕ ಜಾಸ್ತಿ ಬರುತ್ತಿತ್ತು. ಯಾವಾಗ ಈ ಬಿಳಿ ಉಣ್ಣೆ ರೋಗ ಬಂತು ತೂಕದಲ್ಲಿ 50 ಭಾಗ ಕಡಿಮೆಯಾಗಿದೆ. ಮತ್ತೆ ರೇಟಿನ ಬಗ್ಗೆ ಕಾಡಿ ಬೇಡಿ ನಿಮ್ಮ ಕಾಲನ್ನೆಲ್ಲಾ ಹಿಡಿದಿದ್ದಾರೆ. ಯಾರಾದರೂ ಮಂತ್ರಿಗಳು ಈ ಬಗ್ಗೆ ಚಿಂತನೆ ಮಾಡಿ, ಕರ್ನಾಟಕ ಪ್ರದೇಶದಲ್ಲಿ ಕಬ್ಬು ಬೆಳೆಯುವಂತಹ ರೈತರು ಎಷ್ಟಿದ್ದಾರೆ, ಧಾರಣೆ ಎಷ್ಟು ನಿಗದಿಪಡಿಸಬೇಕು, ಕಾರ್ಖಾನೆಯವರ ಜೊತೆ ಮಾತನಾಡುವುದಕ್ಕೂ ನಿಮ್ಮಲ್ಲಿ ಯಾರಾದರೂ ಕೋ-ಆರ್ಡಿನೇಷನ್ ತೆಗೆದುಕೊಳ್ಳುವ ಸಹಕಾರ ನಿಮ್ಮಲ್ಲಿ ಬೇಕಲ್ಲ? ಅವರನ್ನು ಕರೆಯಬೇಕು, ಇವರನ್ನು ಕೂರಿಸಿಕೊಳ್ಳಬೇಕು. ಸುಮ್ಮ ಸುಮ್ಮನೆ ಇದಕ್ಕೊಬ್ಬರು ಸಚಿವರು, ಒಂದು ಇಲಾಖೆ, ಈ ವ್ಯವಸ್ಥೆ ಏತಕ್ಕೆ ಸ್ವಾಮಿ? ಈ ರಾಜ್ಯದಲ್ಲಿ ಅದೊಂದೇ ಒಂದು ಇದ್ದದ್ದು. ಒಂದು ಕಡೆ ತೆಂಗು ನಾಶವಾಗುತ್ತಿದೆ, ಮತ್ತೊಂದು ಕಡೆ ಕೊಬ್ಬರಿ ಬಿದ್ದುಹೋಗಿದೆ, ಇನ್ನೊಂದು ಕಡೆ ರೇಷ್ಮೆ ಬಿದ್ದುಹೋಯಿತು. ಎಲ್ಲವೂ ಹೋಗುತ್ತಿದೆ, ರೈತರಿಗೆ ಉಳಿದಿದ್ದು ಯಾವುದು, ಈ ಕಬ್ಬು ಒಂದೇ ನಮಗೆ ಉಳಿದ ಈ ಕಬ್ಬಿನ ಬೆಳೆಗಾರ ಇವತ್ತು ಬೀದಿಗೆ ಬಂದು ಅವನ ಪರಿಸ್ಥಿತಿ ಹೀನಾಯವಾಗಿದೆ. ಕೆಲವು ಕಡೆ 11 ತಿಂಗಳು ಕಳೆಯಿತೆಂದರೆ ಬೆಳೆದ ಕಬ್ಬನ್ನು ಒಲೆಗೆ ಹಾಕಬೇಕಷ್ಟೆ. ಒಲೆಗೆ ಹಾಕಿದರೆ ಅದು ಸೌದೆಯಾಗುತ್ತದೆ. ಅದು ಕಬ್ಬಾಗುವುದಿಲ್ಲ. ಈ ಪರಿಸ್ಥಿತಿ ಇರುವಾಗ ಸರ್ಕಾರಿ ಒಡೆತನದ ಕಾರ್ಖಾನೆಗಳ ಪರಿಸ್ಥಿತಿ ಏನು? ಖಾಸಗಿ ಕಾರ್ಖಾನೆಗಳ ಪರಿಸ್ಥಿತಿ ಏನು? ಅವರಿಗೆ ನಾವು ಯಾವ ರೀತಿ ಅನುಕೂಲ ಮಾಡಿಕೊಡಬೇಕು? ರೈತರಿಗೆ ಯಾವ ರೀತಿ ಅನುಕೂಲ ಮಾಡಿಕೊಡಬೇಕೆಂಬುದಕ್ಕೆಲ್ಲಾ ಒಂದು ತಜ್ಞರ ಸಮಿತಿಯನ್ನು ಮಾಡಿ, ವರದಿಯನ್ನು

ತರಿಸಿಕೊಂಡು, ಮಂತ್ರಿಯಾದವರು, ತಿಳುವಳಿಕೆ ಇರುವವರು, ರೈತರ ಹಿತವನ್ನು ಕಾಪಾಡುತ್ತೇವೆಂದು ಹೇಳುವವರು ಮಾಡಬೇಕು. ನಮ್ಮ ಉಪಮುಖ್ಯಮಂತ್ರಿಗಳು, ಓ, ನಾನು ರೈತರಿಗಾಗಿಯೇ ಹುಟ್ಟಿರುವುದು, 35 ವರ್ಷ ರೈತರಿಗಾಗಿಯೇ ದುಡಿದಿರುವುದು ಎಂದು ಹೇಳುತ್ತಾರೆ, ಇದೇನು ನನಗೆ ಅರ್ಥವಾಗಲಿಲ್ಲ. ಬರೀ ಇಲ್ಲಿ ಘೋಷಣೆ ಮಾಡಿ ಮಾತನಾಡಿದ ತಕ್ಷಣ ನಿಮ್ಮದು ಆಗಿ ಹೋಯಿತೇ, ಸಾಧ್ಯವೇ? ಈ ರಾಜ್ಯದ ಪರಿಸ್ಥಿತಿ ಏನು? ಇವತ್ತು ಕಬ್ಬು ಬೆಳೆಗಾರರ ಗತಿ ಏನಾಗಿದೆ? ನಿಜವಾಗಿಯೂ ನಾನು ಹೇಳುತ್ತೇನೆ, ಮೊನ್ನೆ ಪುಟ್ಟಣ್ಣಯ್ಯನವರು ನಮ್ಮಲ್ಲಿಗೆ ಬಂದಿದ್ದರು. ಈ ಸದನದಲ್ಲಿರಬಾಕಾಗಿತ್ತು, ಅವರು ಹೊರಗಡೆ ಇದ್ದರು, ನಮ್ಮನ್ನು ಹಾಗೂ ಶ್ರೀರಾಮರೆಡ್ಡಿಯವರನ್ನು ಭೇಟಿ ಮಾಡಿದರು. ಎಷ್ಟು ದುರಂತದಲ್ಲಿದ್ದಾರೆಂದರೆ, ಇವತ್ತು ನಿಜಕ್ಕೂ ಕಬ್ಬು ಬೆಳೆಗಾರರು, ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾರೆ. ನೀವು ಅವರ ನೆರವಿಗೆ ಬಾರದಿದ್ದರೆ, ಸರ್ಕಾರವಿದ್ದು ಪ್ರಯೋಜನವಿಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಈಗಲೂ ಕಾಲ ಮಿಂಚಿಲ್ಲ, ನೀವು ಇದಕ್ಕೆ ತಕ್ಷಣ ಸಹಕಾರದ ಆಧಾರದ ಮೇಲೆ ಒಂದು ಕೊ-ಅರ್ಡಿನೇಷನ್‌ನಲ್ಲಿ ಕಬ್ಬು ಬೆಳೆಗಾರರು, ಕಾರ್ಖಾನೆಯವರು, ನಿಮ್ಮ ಇಲಾಖೆ ಮತ್ತು ಸರಕಾರ ಒಟ್ಟಾರೆ ಸೇರಿ ಒಂದು ವ್ಯವಸ್ಥೆ ಮಾಡಬೇಕು. ಇನ್ನು ರೇಟ್ ಬಗ್ಗೆ ಹೇಳುವುದಾದರೆ, ಮೈಸೂರಿಗೆ ಒಂದು ರೇಟ್, ಹುಬ್ಬಳ್ಳಿ-ಧಾರವಾಡ, ಬೆಳಗಾಂ ಗೆ ಒಂದು ರೇಟ್ ಮತ್ತೆ ಪಕ್ಕದಲ್ಲಿರುವ ಮಹಾರಾಷ್ಟ್ರದ ಗಡಿ ಪ್ರದೇಶದಲ್ಲಿ ಒಂದು ರೇಟ್. ಏಕೆ ನಿಮ್ಮಲ್ಲಿ ಈ ರೀತಿಯ ತಾರತಮ್ಯಕ್ಕೆ ಕಾರಣವೇನು? ಉದ್ದೇಶವೇನು? ಇದರ ಜೊತೆಗೆ, ಕಾರ್ಖಾನೆಗಳಿಗೆ ಬೇರೆ ಸಂಪಾದನೆ ಏನು ಮಾಡಬಹುದೆಂಬುದನ್ನು ನೀವು ಹೇಳಿಕೊಟ್ಟು, ಕಬ್ಬು ಬೆಳೆಗಾರರಿಗೆ ಹೆಚ್ಚಿನ ಹಣ ದೊರಕಿಸುವುದಕ್ಕೆ ಖರೀದಿ ಜಾಸ್ತಿ ಬರತಕ್ಕಂಥ ವ್ಯವಸ್ಥೆಯಾಗಬೇಕು. ಧಾರಣೆ ಜಾಸ್ತಿಯಾಗಬೇಕು. ಮೈಸೂರಿನಲ್ಲಿ ಬಂಡಾರಿಯಮ್ಮ ಶುಗರ್ ಕಾರ್ಖಾನೆ, ಹೊಸದಾಗಿ ಈಗ ಮಹದೇಶ್ವರ ಶುಗರ್ ಕಾರ್ಖಾನೆಯನ್ನು ತೆಗೆದುಕೊಂಡರು, ಮಹದೇಶ್ವರ ಶುಗರ್ ಕಾರ್ಖಾನೆ ಇನ್ನು ಬಳಕೆಗೆ ಬಂದಿಲ್ಲ, ಬಂಡಾರಿಯಮ್ಮ ಶುಗರ್ ಕಾರ್ಖಾನೆ ಒಂದೇ ಒಂದು, ಇನ್ನು ಮಿಕ್ಕ ಕಾರ್ಖಾನೆಗಳು ಮುಳುಗುತ್ತಿವೆ. ಇನ್ನು ಉತ್ತರ ಕರ್ನಾಟಕ ಕಾರ್ಖಾನೆಗಳು ಸ್ವಲ್ಪ ಹೆಚ್ಚು ಕಡಿಮೆ ಮುಳುಗುತ್ತಿವೆ. ಪಾಂಡವಪುರ ಶುಗರ್ ಕಾರ್ಖಾನೆ ಸೇರಿದಂತೆ, ಸಹಕಾರಿ ಕಾರ್ಖಾನೆಗಳಂತೂ ಸಂಪೂರ್ಣ ಮುಳುಗಿ ಹೋಯಿತು. ನೀವು ಈ ಬಗ್ಗೆ ಚಿಂತನೆ ಮಾಡಬೇಕು. ಈಗ ಕಬ್ಬು ಬೆಳೆಗಾರರಿಗೆ ಅಷ್ಟೇ ಸ್ವಲ್ಪ ಉಸಿರಿರುವುದು, ಆ ಉಸಿರು ಹೋಯಿತೆಂದರೆ ರೈತರಿಗೇನು ಗತಿಯಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಎಲ್ಲಾ ವಿಚಾರಗಳನ್ನು ಹೇಳಿದ್ದಾರೆ, ಸರ್ಕಾರ ಒಂದು High Power Committee ಯನ್ನು

ನೇಮಕ ಮಾಡಿದೆ, ಅದು ಸ್ವತಃ ಮಾನ್ಯ ಮುಖ್ಯಮಂತ್ರಿಗಳೇ ಅಧ್ಯಕ್ಷರಾಗಿರುವ ಸಮಿತಿ. ಅದರಲ್ಲಿ Sugar Directorate ಸಹಕಾರ ಇಲಾಖೆ ಇದೆ. ಈ High Power Committee ಇದುವರೆವಿಗೂ ಸಭೆ ಸೇರಿದ್ದೇ ನನಗೆ ಮಾಹಿತಿ ಇಲ್ಲ. ಏಕೆಂದರೆ, ಆ High Power Committee ಯೇ ಈ ಎಲ್ಲಾ ಸಮಸ್ಯೆಗಳನ್ನು ಚರ್ಚೆ ಮಾಡಿ ಪರಿಹಾರ ಮಾಡಬೇಕಾಗಿತ್ತು. ಅದಕ್ಕೆ ಸ್ವತಃ ಮುಖ್ಯಮಂತ್ರಿಗಳೇ ಅಧ್ಯಕ್ಷರಾಗಿದ್ದರು ಕೂಡ ಏಕೆ ಸಭೆ ಸೇರಲಿಲ್ಲವೆಂಬುದು ಬಹಳ ಮುಖ್ಯವಾದ ಪ್ರಶ್ನೆ. ಅವರು ಸಭೆ ಸೇರಲಿಲ್ಲವೆಂದರೆ, ಕಾಟಾಚಾರಕ್ಕೆ ಆ High Power Committee ಯನ್ನು ಇಟ್ಟುಕೊಂಡಿದ್ದಾರೆ. ವಾಸ್ತವವಾಗಿ ರೈತರಿಗಾಗಿ, ಕಬ್ಬು ಬೆಳೆಗಾರರಿಗೋಸ್ಕರಾ ಸಮಿತಿ ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇನ್ನು Sugar Directorate ಇದೆ ಅವರು ಯಾವ ಪುರುಷಾರ್ಥಕ್ಕಿದ್ದಾರೆಂಬುದು ನನಗೆ ಅರ್ಥವಾಗಲಿಲ್ಲ. ಏನು ಸಾಧನೆ ಮಾಡುವುದಕ್ಕೆ ಸರ್ಕಾರ ಅವರನ್ನು ಇಟ್ಟುಕೊಂಡಿದ್ದೀರಿ ಕೋಟ್ಯಾಂತರ ರೂಪಾಯಿಗಳ ಹಣ ಖರ್ಚು ಮಾಡಿ ಏತಕ್ಕೆ ಸರ್ಕಾರ ಆ Sugar Directorate ಇಟ್ಟುಕೊಂಡಿದೆ? ಅವರದೇನು ಕೆಲಸ? ಕಬ್ಬು ಬೆಳೆಗಾರರು ಸಂಕಷ್ಟಕ್ಕೆ ಸಿಕ್ಕಿದಂತಹ ಪರಿಸ್ಥಿತಿಯಲ್ಲಿ, ಬಾಯಿ ಬಿಚ್ಚದೇ ಮೌನವಾಗಿ ಕುಳಿತರೆ ಇವತ್ತು ಆ ಕಬ್ಬು ಬೆಳೆಗಾರರ ರಕ್ಷಣೆಗೆ ಯಾರು ಬರಬೇಕು? ಖಾಸಗಿ ಕಾರ್ಖಾನೆಯವರು ರೂ. 600–700 ಗಳಿಗೆ ಟನ್ ಕಬ್ಬನ್ನು ಕೊಡಿ ಎಂದು ಕೇಳುತ್ತಿದ್ದಾರೆ. ಶಿವಾನಂದ ಪಾಟೀಲ್‌ರು ಹೇಳುವುದಕ್ಕೆ ಹೊರಟರು ಅವರು ಪೂರ್ತಿ ಮಾಡಲಿಲ್ಲ. ಒಂದು ಎಕರೆ ಕಬ್ಬನ್ನು ಬೆಳೆಯಲು ರೈತ ಕನಿಷ್ಟ ರೂ. 1000–1200 ಬಂಡವಾಳ ಇನ್ವೆಸ್ಟ್ ಮಾಡಬೇಕಾಗುತ್ತದೆ, ಟನ್ ಕಬ್ಬನ್ನು ರೂ.600–700 ಗೆ ಕೇಳುತ್ತಿದ್ದಾರೆ. ಅವರು ರೂ. 600–700 ಗಳಿಗೆ ಟನ್ ಕಬ್ಬನ್ನು ಮಾರಾಟ ಮಾಡಿದರೆ ಅವರು ಹೇಗೆ ಬದುಕುವುದು? Sugar Directorate ನವರು ಏನು ಮಾಡುತ್ತಿದ್ದಾರೆ? ಏನೂ ಮಾಡಲಿಲ್ಲ. ಇನ್ನು ಈ ಸರ್ಕಾರಿ ಕಾರ್ಖಾನೆಗಳಿವೆ, ಅವುಗಳ ಮೇಲೆ ನಿಯಂತ್ರಣ ತಪ್ಪಿಹೋಗಿದೆ. ಅವರು ಈಗ ಪಾಳೆಗಾರರು, ಸಹಕಾರಿ ಇಲಾಖೆ ಇದೆ, ಅದಕ್ಕೊಬ್ಬರು ಮಂತ್ರಿಗಳು ಇದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಇವರಿಗೇನು ಅಧಿಕಾರ ಇಲ್ಲವೆ? ಸರ್ಕಾರ ಕಣ್ಣು ಮುಚ್ಚಿ ಕುಳಿತಿದೆ. High Power Committee ಸೇರಲಿಲ್ಲ. ಹಾಗಾದರೆ ಈ ಇಲಾಖೆಗಳು ಏಕೆ ಇರಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ಸಹಕಾರಿ ಇಲಾಖೆಗೆ ಮಂತ್ರಿ ಏಕೆ, ಸಹಕಾರಿ ಇಲಾಖೆ ಏಕೆ, Sugar Directorate ಏಕೆ, High Power Committee ಏಕೆ, ಇವರೆಲ್ಲರೂ ಇದ್ದು ಏನೂ ಮಾಡುವುದಕ್ಕೆ ಆಗದೇ ಇರುವಾಗ, ಯಾವ ಪುರುಷಾರ್ಥಕ್ಕೆ ಇವರು ಇರಬೇಕೆಂದು ಸರ್ಕಾರ ಉತ್ತರ ಕೊಡಬೇಕು. ಒಂದು ತಿಂಗಳಿಂದ ಇಡೀ ರಾಜ್ಯದಲ್ಲಿ ಕಬ್ಬು ಬೆಳೆಗಾರರು ಬೊಬ್ಬೆ ಹಾಕುತ್ತಿದ್ದಾರೆ. ಬೇಡಿಕೊಳ್ಳುತ್ತಿದ್ದಾರೆ. ಹೋರಾಟ ಮಾಡುತ್ತಿದ್ದಾರೆ. ಇದು ನಿಮ್ಮ

ಕಿವಿಗೆ ಬೀಳಲಿಲ್ಲವಾ? ನಿಮಗೆ ಕೇಳಿಸಲಿಲ್ಲವಾ? ಏನು ಮಾಡುತ್ತಿದ್ದೀರಿ ನೀವು? ಈ ಸರ್ಕಾರ ಇದೆಯಾ ಎಂದು. ಇದ್ದರೆ ಯಾರಿಗೋಸ್ಕರ ಇದೆ? ಮಾತು ಎತ್ತಿದರೆ ನಾನು ಮಣ್ಣಿನ ಮಗ ಅಂತ ಒಬ್ಬ, ನಾವು ಹೋರಾಟಗಾರರು ಅಂತ ಒಬ್ಬರು, ನಾನು ಹುಟ್ಟಿದ್ದೇ ಅಲ್ಲಿ ಅಂತ ಒಬ್ಬರು. ಹೋರಾಟ ಮಾಡಿಕೊಂಡೇ ಬೆಳೆದೆ ಎಂದು ಒಬ್ಬರು, ಇದರಲ್ಲಿ ಏನಾದರೂ ಅರ್ಥ ಇದೆಯಾ? ಮಾನ್ಯ ಛೇರ್ಮನ್‌ರೇ ಸರ್ಕಾರ ಇವತ್ತು ಖಡಾಖಂಡಿತವಾಗಿ ಹೇಳಬೇಕು. ರೈತರ ಕಬ್ಬನ್ನು ನಾವು ಕೊಂಡುಕೊಳ್ಳುತ್ತೇವೆ, ರೇಟನ್ನು ಕನಿಷ್ಠ 1,100 ರೂಪಾಯಿ ಒಂದು ಟನ್‌ಗೆ ಕೊಡುತ್ತೇವೆ, ರೈತರ ರಕ್ಷಣೆಗೆ ಬರುತ್ತೇವೆಂದು ಇವತ್ತು ನೀವು declare ಮಾಡಬೇಕು. ಸುಮ್ಮನೆ ಭಾಷಣ ಮಾಡಿ ಉತ್ತರ ಹೇಳಿ ಹೋದರೆ ಇದು ಆಗುವುದಿಲ್ಲ. ಆದ್ದರಿಂದ ನಾನು ಸರ್ಕಾರವನ್ನು ಕೇಳುತ್ತಿದ್ದೇನೆ, ಇವತ್ತು ಸರ್ಕಾರ ಸ್ಪಷ್ಟವಾಗಿ ಹೇಳಬೇಕು, ಒಂದು ಟನ್‌ಗೆ ಕನಿಷ್ಠ 1,100 ರೂಪಾಯಿ ಆದರೂ ಕೊಟ್ಟು ಕೊಂಡು ಕೊಳ್ಳತಕ್ಕಂತಹ ಜವಾಬ್ದಾರಿಯನ್ನು ಸರ್ಕಾರ ಹೊರಬೇಕು. ಅವರಲ್ಲಿ ರಿವಾಲ್ವಿಂಗ್ ಫಂಡ್ ಇದೆ, 200 ಕೋಟಿ ರೂಪಾಯಿ ತೆಗೆದಿದ್ದೇವೆ ಎಂದು ಹೇಳುತ್ತಿದ್ದೀರಿ, ಆ ಹಣವನ್ನು ಅವರು ತೆಗೆಯಲಿ.

ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) :- ಮಾನ್ಯ ಛೇರ್ಮನ್‌ರೇ, ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ನಮ್ಮ ಎಲ್ಲಾ ಹಿರಿಯ ಸದಸ್ಯರು ಮಾತನಾಡಿದರು. ವಿಶೇಷವಾಗಿ ಮಾನ್ಯ ಪ್ರಕಾಶ್ ಹುಕ್ಕೇರಿಯವರು ಮಾತನಾಡಿದ್ದಾರೆ. ಮಹಾರಾಷ್ಟ್ರ ಬಾರ್ಡರ್‌ನಲ್ಲಿ ನಮಗೆ ಬಹಳ ಸಮಸ್ಯೆ ಇದೆ. ಮಹಾರಾಷ್ಟ್ರದಲ್ಲಿ ಹೆಚ್ಚಿಗೆ ರೇಟ್ ಕೊಡುತ್ತಿದ್ದಾರೆ. ಈ ಸದನಕ್ಕೆ ವಿಶೇಷವಾಗಿ ಹೇಳಬೇಕೆಂದರೆ, ಮಹಾರಾಷ್ಟ್ರದ Co-operative Sugar Factories ಮತ್ತು Private Sugar Factory ಗಳು ಹೋದ ವರ್ಷ ಯಾವ ತಿಂಗಳಲ್ಲಿ ಮತ್ತು ಯಾವ ವಾರದಲ್ಲಿ ಕಬ್ಬು ಹೋಗಿದೆ ಅದೇ ತಿಂಗಳು ಮತ್ತು ಅದೇ ವಾರದಲ್ಲಿ ಈ ವರ್ಷವೂ ಕಟಿಂಗ್ ಆರ್ಡರ್ ಕೊಟ್ಟು ಕಬ್ಬು ತೆಗೆದುಕೊಂಡು ಹೋಗುತ್ತಾರೆ. ಹಾಗಾಗಿ ಅಲ್ಲಿ ಏನಾಗುತ್ತಿದೆ, ರೆಕವರಿ ಹೆಚ್ಚು ಬರುತ್ತದೆ, ರೈತರ ಕಬ್ಬಿಗೆ ಹೆಚ್ಚು ವೇಟ್ ಬರುತ್ತದೆ. ಅಲ್ಲಿ ರೇಟ್ ಕೂಡ ಹೆಚ್ಚಿಗೆ ಕೊಡುತ್ತಾರೆ. ರೈತರಿಗೆ ಸಮಸ್ಯೆಯೂ ಇಲ್ಲ. ನಮ್ಮಲ್ಲಿ ಬೀದರ್‌ನ ಎಲ್ಲಾ ಸಕ್ಕರೆ ಕಾರ್ಖಾನೆಗಳಲ್ಲಿ ನವೆಂಬರ್‌ನಲ್ಲಿ ಹೋದಂತಹ ಕಬ್ಬು ಇವತ್ತು ನಾವು ಏಪ್ರಿಲ್ ಮೊದಲನೇ ವಾರದಲ್ಲಿದ್ದೇವೆ. ಇದುವರೆಗೆ ಕಬ್ಬು ಹೋಗಿಲ್ಲ. Written complaints ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, Sugar Directorate. sugar Minister, Co-Operative Minister ಎಲ್ಲರಿಗೂ ಕಂಪ್ಲೇಂಟ್ ಕೊಟ್ಟರೂ ಇವತ್ತಿನವರೆಗೂ ಕಬ್ಬು ಹೋಗಿಲ್ಲ. ನಮ್ಮಲ್ಲಿ ಏನಾಗುತ್ತಿದೆ ಎಂದರೆ, 12 ತಿಂಗಳ ನಂತರ ಕಬ್ಬಿನಲ್ಲಿ ಸಕ್ಕರೆ ಅಂಶ ಕಡಿಮೆ ಆಗುತ್ತದೆ. ಅದರ ಜೊತೆ ಜೊತೆಗೆ

ಕಬ್ಬಿನ ವೇಟ್ ಕೂಡ ಕಡಿಮೆ ಆಗುತ್ತದೆ. ಕಬ್ಬಿನ ವೇಟ್ ಕಡಿಮೆ ಆಗಿ ರೈತರಿಗೆ ನಷ್ಟವಾಗುತ್ತಿದೆ. ಅದರ ನಂತರ ಫ್ಯಾಕ್ಟರಿಗೆ ತೆಗೆದುಕೊಂಡ ಹೋದ ನಂತರ ಅಲ್ಲಿ sugar recovery ಬರುವುದಿಲ್ಲ. ಇದರಿಂದ ಫ್ಯಾಕ್ಟರಿಗಳಿಗೂ ಲಾಸ್ ಆಗುತ್ತಿದೆ. ಕಬ್ಬು ಬೆಳೆಗಾರರ ಸಮಸ್ಯೆ ಆಗದ ಹಾಗೆ ನಾವು ಹೋದವರ್ಷ ಯಾವ ತಿಂಗಳಿನಲ್ಲಿ ಮತ್ತು ಯಾವ ವಾರದಲ್ಲಿ ಕಬ್ಬು ಹೋಗಿತ್ತು ಅದೇ ತರಹ ಒಂದು ವಾರ ಹೆಚ್ಚು ಕಡಿಮೆ ಆದರೂ ಕಬ್ಬಿನ ಕಟಾವು ಮಾಡಿಸಬೇಕು. ಮಹಾರಾಷ್ಟ್ರದಲ್ಲಿ ಎಲ್ಲಾ Co-operative ಸಕ್ಕರೆ ಕಾರ್ಖಾನೆಗಳು ಮತ್ತು ಪ್ರೈವೇಟ್ ಸಕ್ಕರೆ ಕಾರ್ಖಾನೆಗಳು ಬಹಳ Systematic ಆಗಿ ನಡೆಸುತ್ತಿದ್ದಾರೆ. ನಮ್ಮ ಬೀದರ್ ಜಿಲ್ಲೆಯಲ್ಲಿ ಮೂರು ಸಹಕಾರಿ ಸಕ್ಕರೆ ಕಾರ್ಖಾನೆಗಳು ಇವೆ. ಇವತ್ತು ಹೊಡೆದಾಟ ನೋಡಿದರೆ, ಆ ರೈತರ ಸಮಸ್ಯೆ ನೋಡಿದರೆ, ನಮಗಂತೂ ಕ್ಷೇತ್ರಕ್ಕೆ ಹೋಗುವುದಕ್ಕಾಗುತ್ತಿಲ್ಲ. ನಾವು ಎಷ್ಟು ಸಾರಿ ಈ ಸದನದ ಗಮನ ಸೆಳೆದಿದ್ದೇವೆ ಏನೂ implement ಆಗಿಲ್ಲ. ಜಿಲ್ಲಾಧಿಕಾರಿಗಳಿಗೆ ಇಲ್ಲಿಂದ ಆದೇಶ ಮಾಡಿದ್ದೇವೆಂದು ಹೇಳುತ್ತಾರೆ. ಮೊನ್ನೆ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಬಂಡೆಪ್ಪ ಕಾಶಂಪೂರ್ ಅವರ ನೇತೃತ್ವದಲ್ಲಿ press meet ಆಗಿದೆ. ಆ press meet ನಲ್ಲಿ ಜಿಲ್ಲಾಧಿಕಾರಿಗಳು ಇದ್ದರು, ನಾನು ಇದ್ದೆ. ಸಂಯುಕ್ತ ಕರ್ನಾಟಕ ಒಂದನೇ ತಾರೀಖಿನ ಪತ್ರಿಕೆಯ ಮುಖಪುಟದಲ್ಲಿ ಬಂದಿದೆ. ಏನೆಂದು ಬಂದಿದೆ ಎಂದರೆ, ಎರಡು ಎಕರೆ ಕಬ್ಬಿಗೆ ಕಟಾವು ಮಾಡಲಿಕ್ಕೆ ಲೇಬರ್ 14,000 ರೂಪಾಯಿ ತೆಗೆದುಕೊಂಡಿದ್ದಾರೆಂದು ಜಿಲ್ಲಾಧಿಕಾರಿಗಳು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ನಾವು ಸದನದ ಗಮನ ಎಷ್ಟು ಸೆಳೆದಿದ್ದೇವೆ ಯಾವುದೂ ಪ್ರಯೋಜನವಾಗಲಿಲ್ಲ. ಜಿಲ್ಲಾಧಿಕಾರಿಗಳು ವಿಶೇಷವಾಗಿ ಭಾಲ್ಕಿ ತಾಲ್ಲೂಕಿನ ಹೆಸರು ಕೊಟ್ಟಿದ್ದಾರೆ. ಮಳುಕನಾಥ್ ಎಂದು ವಿಲೇಜ್ ಕೊಟ್ಟಿದ್ದಾರೆ. ಅಂತಹ ಬಹಳಷ್ಟು ಜನ ಇದ್ದಾರೆ. ನಾನು ನೋಡಿದ್ದೇನೆ ಮತ್ತು ಸರ್ಕಾರಕ್ಕೆ ವರದಿ ಮಾಡಿದ್ದೇನೆಂದು ಹೇಳಿದ್ದಾರೆ. ಈ ಸಮಸ್ಯೆಯನ್ನು ನಾವು ಬಗೆಹರಿಸಿಲ್ಲ. ಬೀದರ್ ಜಿಲ್ಲೆಯಾಗಲಿ, ಉತ್ತರ ಕರ್ನಾಟಕದಲ್ಲಾಗಲಿ, ಕಬ್ಬು ಬೆಳೆಗಾರರಿಗೆ ಬಹಳಷ್ಟು ಹಾನಿಯಾಗುತ್ತಿದೆ. ಅವರು ಸಮಸ್ಯೆಗೆ ಸಿಕ್ಕಿ ಬಿದ್ದರೆ ಕಬ್ಬು ಬೆಳೆಯುವುದು ಕಡಿಮೆಯಾಗುತ್ತದೆ. ಯಾವತ್ತೂ ನಮಗೆ ಕೈ ಕೊಡಲಾರದ ಬೆಳೆ ಎಂದರೆ ಕಬ್ಬು. ನಮ್ಮಲ್ಲಿ ನೀರೂ ಇದೆ, ಒಳ್ಳೆಯ ಭೂಮಿ ಇದೆ, ಈ ಕಬ್ಬು ಬೆಳೆಗೆ ನಾವು ಸರ್ಕಾರದ ಕಡೆಯಿಂದ ಬಹಳಷ್ಟು ಸಹಾಯ ಸಹಕಾರ ಮಾಡಬೇಕಾಗಿದೆ. ಕಬ್ಬು ಬೆಳೆಗಾರರಿಗೆ ಪ್ರೋತ್ಸಾಹ ಮಾಡಬೇಕಾಗಿದೆ. ಆದರೆ ನಮ್ಮ ಜಿಲ್ಲಾ ವರದಿ ಪ್ರಕಾರ ಈಗ ಸರಿಯಾಗಿ ಕ್ರಶಿಂಗ್ ಮಾಡಿದರೂ ಎರಡು ಲಕ್ಷ ಟನ್ ಕಬ್ಬು ಉಳಿಯುತ್ತದೆ. ಆದರೆ ಕ್ರಶಿಂಗ್ ಸರಿಯಾಗಿ ಆಗುತ್ತಿಲ್ಲ, ಕಬ್ಬು ಸರಿಯಾಗಿ ತೆಗೆದುಕೊಂಡು ಹೋಗುತ್ತಿಲ್ಲ. ಇವತ್ತು ರೈತರಿಗೆ ಶೋಷಣೆಯಾಗುತ್ತಿದೆ. ಈ ಶೋಷಣೆ ತಡೆಹಿಡಿಯದೇ ಹೋದರೆ ಆತ್ಮಹತ್ಯೆ

ಮಾಡಿಕೊಳ್ಳಬೇಕಾದ ಪರಿಸ್ಥಿತಿಯನ್ನು ನಾವು ನೋಡಬೇಕಾಗುತ್ತದೆ. ಬೀದರ್ ಜಿಲ್ಲೆಯಲ್ಲಿ ಅತ್ಮಹತ್ಯೆ ಕೂಡ ಆಗಿದೆ. ಇನ್ನೂ ಆತ್ಮಹತ್ಯೆಗಳು ಆಗುವಂತಹ ಸಂದರ್ಭ ಇದೆ. ಇವತ್ತು ನಾವು ಬರಗಾಲದಲ್ಲಿ ಸಿಕ್ಕಿ ಬಿದ್ದಿದ್ದೇವೆ. ಬರಗಾಲದಲ್ಲಿ ನಮಗೆ ಬೇರೆ ಯಾವುದೇ ಬೆಳೆ ಬಂದಿಲ್ಲ. ಕಬ್ಬು ಒಂದೇ ನಮ್ಮ ಬೆಳೆ. ಆ ಬೆಳೆ ಮೇಲೆ ಮದುವೆಯಾಗಬೇಕು. ಮುಂದಿನ ಎಲ್ಲ ಕಾರ್ಯಕ್ರಮಗಳು ಆಗಬೇಕು. ಒಟ್ಟಿಗೆ ರೈತರಿಗೆ ಹಣ ಬರುವಂತಹ ಬೆಳೆ ಎಂದರೆ ಕಬ್ಬು. ಆ ಕಬ್ಬಿಗೆ ಕಟಾವು ಇಲ್ಲ, ತೆಗೆದುಕೊಂಡು ಹೋಗುತ್ತಿಲ್ಲ, ಇವತ್ತಿನವರೆಗೂ ಕಬ್ಬಿಗೆ ಪೇಮೆಂಟ್ ಆಗಿಲ್ಲ. ನಾನು ಈ ಸದನದ ಗಮನಸೆಳೆಯಬೇಕಾದ ಮುಖ್ಯ ಉದ್ದೇಶವೆಂದರೆ, ರೈತರಿಗೆ ಇಷ್ಟು ಅನ್ಯಾಯವಾಗಬಾರದು. ಮಹಾರಾಷ್ಟ್ರದ ರೈತರಿಗೆ ನೋಡುತ್ತಿದ್ದೇವೆ, ಮಹಾರಾಷ್ಟ್ರದ ರೈತರು ಆರಾಮಾಗಿ ಮನೆಯಲ್ಲಿ ಮಲಗಿಕೊಳ್ಳುತ್ತಾರೆ. ಆ ರೈತನ ಮನೆಗೆ ಕಟಿಂಗ್ ಆರ್ಡರ್ ಬರುತ್ತದೆ. ಸರಿಯಾಗಿ Systematic ಆಗಿ ಅವರು ದಿನಾಂಕ ಹೇಳುತ್ತಾರೆ. ಆ ದಿನಾಂಕಕ್ಕೆ ಲಾರಿ ಕಳುಹಿಸುತ್ತಾರೆ, ಕಬ್ಬು ಕಟಿಂಗ್ ಆಗಿ ಹೋಗುತ್ತದೆ. ಇವತ್ತು ಯಾರ ಬಳಿ ಕಬ್ಬು ಇದೆ ಅವನಿಗೆ ಹಣ ಇಲ್ಲ. ಫ್ಯಾಕ್ಟರಿ ಮಾಲೀಕರು ಮತ್ತು ಫ್ಯಾಕ್ಟರಿ ಛೇರ್ಮನ್ ಓಡಾಡಿ ಇಬ್ಬರೂ ಹಣ ಕಳೆದುಕೊಂಡಿದ್ದಾರೆ. ಈ ಮಧ್ಯೆ ಬಹಳಷ್ಟು ಜನರ ಕಬ್ಬು ಹಾಗೆಯೇ ಇದೆ, ಕಬ್ಬು ಹೋಗುವುದಿಲ್ಲವೆಂದು ನೋಡಿಕೊಂಡು ಎರಡು ಎಕರೆಗೆ 14,000 ರೂಪಾಯಿ ಏನು ಕೊಡುತ್ತಿದ್ದಾರೆ, ಇದು ಬಹಳ ಕಡಿಮೆ. ನಾವು ಬಹಳಷ್ಟು ಜನ ರೆಕಾರ್ಡ್ ಕೊಟ್ಟಿದ್ದೇವೆ. ರಾಜ್ಯ ಸರ್ಕಾರದ ಕಡೆಯಿಂದ ಒಂದು ವಿಜಿಲೆನ್ಸ್ ಟೀಮ್ ಕಳುಹಿಸಿ, Sugar Director ಒಬ್ಬರಿಗೆ ನಾವು ಹೇಳುವುದಿಲ್ಲ. Sugar Director ಬಿಟ್ಟು ನೀವು IAS ಅಧಿಕಾರಿಗಳ ಒಂದು ಟೀಮ್ ಮಾಡಿ ಕಳುಹಿಸಿ, ಎಲ್ಲೆಲ್ಲಿ ಈ ತರಹ complaints ಬಂದಿವೆ, ರೈತರಿಗೆ ಎಲ್ಲಿ ಸಮಸ್ಯೆಯಾಗಿದೆ, ಅಲ್ಲಿ ವಿಜಿಲೆನ್ಸ್‌ನವರು ಹೋಗಿ ಕಾರ್ಖಾನೆಯ ತನಿಖೆ ಮಾಡಬೇಕು. ಫ್ಯಾಕ್ಟರಿ ಮೇಲೆ ನಮಗೆ ಹಿಡಿತ ಸಿಗಬೇಕು. ಇಲ್ಲದಿದ್ದರೆ, Co-operative sugar factory chairman ಎಂದರೆ, ಅವರು ಯಾರ ಮಾತೂ ಕೇಳುವುದಿಲ್ಲ. Co-operative sugar factory ಎನ್ನುವ ಪ್ರಶ್ನೆ ಇರುವುದಿಲ್ಲ. ಏಕೆಂದರೆ ಅದು ರೈತರ suagr factory ಆಗುವುದಿಲ್ಲ ಅದು. ಆ chairman ಒಬ್ಬರದೇ ಸಕ್ಕರೆ ಕಾರ್ಖಾನೆ ಆಗಿ ಕೆಲಸ ಮಾಡುತ್ತಿದ್ದಾರೆ. ಬೀದರ್ ಜಿಲ್ಲೆಯಲ್ಲಿರುವ ಸಮಸ್ಯೆ ಬಗ್ಗೆ ಆದಷ್ಟು ಬೇಗ ವಿಶೇಷವಾದ ಒಂದು enquiry ಮಾಡಿಸಿ, ಎಲ್ಲರ ಕಬ್ಬು ಹೋಗುವ ಹಾಗೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಯಪ್ರಕಾಶ್ ಕೆ. ಹೆಗ್ಡೆ (ಬ್ರಹ್ಮಾವರ) :- ಮಾನ್ಯ ಛೇರ್ಮನ್‌ರೇ, ಉದಾಸಿಯವರೇ ಸ್ವತಃ ಸಕ್ಕರೆ ಕಾರ್ಖಾನೆ ಅಧ್ಯಕ್ಷರಾಗಿರುವುದರಿಂದ ಬೇರೆ ಸಚಿವರು ಉತ್ತರ ಕೊಡುವುದಕ್ಕಿಂತ ಇವರು ಸರಿಯಾದ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ

ಎಂದು ನಾನು ಅಂದುಕೊಂಡಿದ್ದೇನೆ. ನೀವು ಸಕ್ಕರೆ ಕಾರ್ಖಾನೆ ಅಧ್ಯಕ್ಷರಾಗಿ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡಿದ್ದೀರಿ. ಪ್ರಥಮವಾಗಿ ನಾವು ಲೆಕ್ಕ ಹಾಕಬೇಕಾಗಿರುವುದು, ಸಕ್ಕರೆ ಕಾರ್ಖಾನೆಗೆ ಎಷ್ಟು ಕಬ್ಬು ಬಂದಿದೆ ಎಂದು. ಒಂದೊಂದು ಕಡೆ ತೂಕ ಮಾಡಿದಾಗ ಯಾವ ರೀತಿ ಬರುತ್ತದೆ ಎಂದು ಕಬ್ಬಿನ ವ್ಯತ್ಯಾಸದ ಬಗ್ಗೆ ಮಾನ್ಯ ಎ.ಬಿ. ಪಾಟೀಲ್‌ರು ಹೇಳಿದರು. ಇಳುವರಿ ಎಷ್ಟು ಬರುತ್ತದೆ, ಅದರಿಂದ ಮೊಲಾಸಿಸ್ ಎಷ್ಟು ಬರುತ್ತದೆ, ಇವೆಲ್ಲಾ ಲೆಕ್ಕ ಹಾಕಬೇಕಾಗಿದೆ. ನಿಮಗೆ ಗೊತ್ತಿದೆ, 50% ಬಿಲ್ ಹಾಕುತ್ತಾರೆ, 50% ಬಿಲ್ ಹಾಕುವುದಿಲ್ಲ. ಅದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಸಕ್ಕರೆ ಸಚಿವರು ಬೇರೆ, ಸಹಕಾರಿ ಸಚಿವರು ಬೇರೆ ಈ ಎರಡು ಸಚಿವರು ಏಕೆ? ಸಹಕಾರಿ ಸಚಿವರ ಬಳಿ ಸಕ್ಕರೆ ಖಾತೆ ಇದ್ದರೆ ಅವರು ಕೆಲಸ ಮಾಡುವುದಕ್ಕೆ ಸುಲಭವಾಗುತ್ತದೆ. ಇದನ್ನು ಎರಡೆರಡು ಮಾಡಿ ಇಬ್ಬರಿಗೂ ಕೆಲಸ ಮಾಡದ ಹಾಗೆ ಮಾಡಿದ್ದೀರಿ. ದಯವಿಟ್ಟು ಇದನ್ನು ಒಂದು ಮಾಡಿ. ಸಕ್ಕರೆ ಸಚಿವಾಲಯ ಸಹಕಾರಿ ಸಚಿವರ ಜೊತೆಯಲ್ಲಿ ಇದ್ದರೆ, ಅವರು ಸರಿಯಾಗಿ ಕೆಲಸ ಮಾಡುವುದಕ್ಕಾಗುತ್ತದೆ. ಸಹಕಾರಿ ಸಚಿವರ ಕೆಳಗೆ ಎಲ್ಲ ಇಲಾಖೆಗಳು ಬರುವಂಥದ್ದು. ಸಕ್ಕರೆ ಸಚಿವರನ್ನು ಬೇರೆ ಮಾಡಿದ್ದಾರೆ. ದಯವಿಟ್ಟು ಅದನ್ನು ಪುನಃ ಸಹಕಾರಿ ಸಚಿವರ ಇಲಾಖೆ ಕೆಳಗೆ ತಂದರೆ, ಇನ್ನು ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹಾಳುತ್ತಾ, ಮೊಲಾಸಿಸ್, ಇಳುವರಿ, ಬಗಾಸ್, ಏನಾಗುತ್ತದೆ, ಎಷ್ಟು ಬಿಲ್ ಮಾಡುತ್ತಿದ್ದಾರೆ, ರಾಮಲಕ್ಷ್ಮಣ ಬಿಲ್ ಎಷ್ಟು ಆಗುತ್ತಿದೆ, ಮಾರಾಟ ಯಾವ ರೀತಿ ಮಾಡುತ್ತಿದ್ದಾರೆ, ಇವೆಲ್ಲಾ ಸಾಧಾರಣ ನೀವು ಮಾಡದೇ ಇದ್ದರೂ, ಬೇರೆ ಕಡೆ ಏನಾಗುತ್ತಿದೆ ಎಂಬುದು ನಮಗೆ ಗೊತ್ತಿದೆ, ಅದಕ್ಕೆ ಒಂದು ಸಮಿತಿ ಮಾಡಿ ಸಕ್ಕರೆ ಕಾರ್ಖಾನೆಗಳಲ್ಲಿ ಏನೇನು ಮಾಡುತ್ತಿದ್ದಾರೆ ಎಂದು ತನಿಖೆಗೆ ಆದೇಶ ಮಾಡಿ. ನೇರವಾಗಿ ಸಚಿವರಾದ ಮಾನ್ಯ ಶಶಿಕಾಂತ ಅಕ್ಕಪ್ಪ ನಾಯಕರು ನಾನೇ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇನೆ ಎಂದು ಹೇಳಿದರು. ಅವರೇ ಜಿಲ್ಲಾಧಿಕಾರಿಗಳಿಗೆ ನಿಖರವಾದ ಮಾಹಿತಿ ಕೊಟ್ಟಾಗ ಆ ಕಾರ್ಖಾನೆಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದು ಬಹಳ ಅಗತ್ಯವಾಗುತ್ತದೆ. ಯಾವುದು ಎಂದು ನೀವು ಹೆಸರನ್ನು ಹೇಳಬೇಕಾಗುತ್ತದೆ. ಅದರ ಜೊತೆಗೆ ರಿಕವರಿ ಬಗ್ಗೆ ಸ್ವಲ್ಪ ಬೇಗ ಕ್ರಶಿಂಗ್ ಆಗುವ ಹಾಗೆ ಮಾಡಬೇಕು. ಎಲ್ಲಾ ರೈತರ ಸಮಸ್ಯೆ ಬಂದಾಗ ಮಾರುಕಟ್ಟೆಗಿಂತ ಹೆಚ್ಚಾಗಿ ಸರ್ಕಾರ ಮಾಡಿದೆ. ಕೊಬ್ಬರಿ ಬಂದಾಗ, ತೊಗರಿ ಬೇಳೆ ಬಂದಾಗಲೆಲ್ಲ ದರವನ್ನು ಕೊಟ್ಟಿದ್ದಾರೆ. ಇದಕ್ಕೆ ದರವನ್ನು ಕೊಡಿ ಎಂದು ಹೇಳಿದರೆ ಏಕೆ ಕೊಡುತ್ತಿಲ್ಲ? ಇದಕ್ಕೆ ಸಹ ತಾವು ಮಧ್ಯೆ ಪ್ರವೇಶ ಮಾಡಿ ರೇಟ್ ಕೊಡಿಸುವ ವ್ಯವಸ್ಥೆ ಮಾಡಬೇಕು. ಒಂದು ವೇಳೆ ಸಕ್ಕರೆ ಕಾರ್ಖಾನೆ ಲಾಭದಾಯಕವಲ್ಲದಿದ್ದರೆ ಹೊಸ ಹೊಸ ಪರ್ಮಿಶನ್‌ಗಳನ್ನು ಏಕೆ ತೆಗೆದುಕೊಳ್ಳುತ್ತಾರೆ? ಹೊಸ ಕಾರ್ಖಾನೆಯನ್ನು ಮಾಡುವುದಕ್ಕೆ ಇನ್ನೂ ಪರ್ಮಿಶನ್‌ಗಳನ್ನು

ಸರ್ಕಾರ ಕೊಡುತ್ತಲೇ ಇದೆ. ಹೊಸ ಕಾರ್ಖಾನೆ ಪ್ರಾರಂಭವಾಗುತ್ತಲೇ ಇದೆ. ರೈತರಿಗೆ ಮಾತ್ರ ನೀವು ದರವನ್ನು ಕೊಡುವುದಿಲ್ಲ. ಇದಕ್ಕಾಗಿ ನೀವು ಇದರ ಬಗ್ಗೆ ತನಿಖೆಯನ್ನು ಮಾಡಿಸಿ ಸಮಸ್ಯೆದ ಪರಿಹಾರವನ್ನು ಕಂಡುಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಸಕ್ಕರೆ ಸಚಿವರು) :– ಮಾನ್ಯ ಅಧ್ಯಕ್ಷರೆ, ಇವೊತ್ತಿನ ದಿವಸ ಹಲವಾರು ಸದಸ್ಯರು ಮಾತನಾಡಿ ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ವಿಶೇಷವಾದ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಕಬ್ಬು ಬೆಳೆಗಾರರ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯತಕ್ಕಂಥದ್ದು ಅತ್ಯಂತ ಅವಶ್ಯವಿದೆಯೆಂದು ನಾನು ಭಾವಿಸಿಕೊಂಡಿದ್ದೇನೆ. ತಮಗೆಲ್ಲ ಗೊತ್ತಿರುವ ಹಾಗೆ ರಾಜ್ಯದಲ್ಲಿ 55 ಸಕ್ಕರೆ ಕಾರ್ಖಾನೆಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಒಟ್ಟು 47 ಸಕ್ಕರೆ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿವೆ. ರಾಜ್ಯದಲ್ಲಿ ಒಟ್ಟು ಪ್ರಸಕ್ತ ಸಾಲಿನಲ್ಲಿ 01.10.2000 ದಿಂದ 30.09.2007 ರ ಅವಧಿಯಲ್ಲಿ 230 ಲಕ್ಷ ಟನ್ ಕಬ್ಬು ನುರಿಸುವ ಗುರಿಯನ್ನು ಹೊಂದಿದೆ. ಈಗಾಗಲೇ ಮಾರ್ಚ್ ಅಂತ್ಯದೊಳಗೆ 170 ಲಕ್ಷ ಟನ್ ಕಬ್ಬನ್ನು ನುರಿಯಲಾಗಿದೆ. ಪ್ರಸಕ್ತ ಸಾಲಿನಲ್ಲಿ ರಾಯಬಾಗ್ ಸಕ್ಕರೆ ಕಾರ್ಖಾನೆ, ವಾಣಿ ವಿಲಾಸ ಮತ್ತು ಭದ್ರಾ ಮತ್ತು ಇನ್ನೊಂದು ಸಕ್ಕರೆ ಕಾರ್ಖಾನೆಯು ಕಾರ್ಯಾರಂಭ ಮಾಡಿರುವುದಿಲ್ಲ. ಜಂಟಿ ವಲಯದಲ್ಲಿ ಗಂಗಾವತಿ ಸಕ್ಕರೆ ಕಾರ್ಖಾನೆಯು ನಿರ್ವಹಣೆ ಮಾಡಿರುವುದಿಲ್ಲ. ಖಾಸಗಿ ವಲಯದಲ್ಲಿ ದೇವಿ ಶುಗರ್ಸ್, ಸುಂದರೇಶ್ ಶುಗರ್ಸ್, ಸಿರಿಗುಪ್ಪ ಶುಗರ್ಸ್, ಈ ಕಾರ್ಖಾನೆಗಳು ಸಹಿತ ಕಾರ್ಯ ನಿರ್ವಹಣೆ ಮಾಡಿರುವುದಿಲ್ಲ ಕಾರ್ಯ ನಿರ್ವಹಣೆ ಮಾಡದಿರುವಂಥ ಸಕ್ಕರೆ ಕಾರ್ಖಾನೆಯ ಕಬ್ಬನ್ನು ನೆರೆಯ ಕಾರ್ಖಾನೆಗಳಲ್ಲಿ ನುರಿಸಲು ವ್ಯವಸ್ಥೆ ಮಾಡಲಾಗಿದೆ. ನಮ್ಮ ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳು ಪ್ರತಿ ದಿನ ಒಂದೂವರೆ ಲಕ್ಷ ಮೆಟ್ರಿಕ್ ಟನ್ ಅರಿಯುವಂಥ ಸಾಮರ್ಥ್ಯವನ್ನು ಹೊಂದಿದೆ. ಅದರಲ್ಲಿ ತಿಂಗಳಿಗೆ 25 ರಿಂದ 35 ಲಕ್ಷ ಟನ್ ಕಬ್ಬನ್ನು ಅರಿಯಲಾಗುತ್ತಿದೆ. ಬೇರೆ ಸಹಕಾರಿ ರಂಗದ ಸಕ್ಕರೆ ಕಾರ್ಖಾನೆಗಳು ಶೇಕಡ 40 ರಷ್ಟನ್ನು ಅರೆಯುವಂಥ ಸಾಮರ್ಥ್ಯವನ್ನು ಹೊಂದಿದೆ. ಸಕ್ಕರೆ ಕಾರ್ಖಾನೆಗಳು ಇನ್ನೂ 60 ಲಕ್ಷ ಟನ್ ಕಬ್ಬನ್ನು ನುರಿಸಬೇಕಾಗಿದೆ. ಇದನ್ನು ನಾವು ಏಪ್ರಿಲ್ ಮಾಹೆಯಲ್ಲಿ 25 ಲಕ್ಷ ಟನ್, ಮೇ ಮಾಹೆಯಲ್ಲಿ 15 ಲಕ್ಷ ಮೆಟ್ರಿಕ್ ಟನ್, ಹೀಗೆ 40 ಲಕ್ಷ ಟನ್ ಅರಿಯುವುದಕ್ಕೆ ಸಾಧ್ಯವಾಗುತ್ತದೆ, ಜೂನ್ ಮತ್ತು ಅಗಸ್ಟ್‌ನಲ್ಲಿ 6 ಮತ್ತು 7 ಲಕ್ಷ ಟನ್, ಸೆಪ್ಟೆಂಬರ್‌ನಲ್ಲಿ 6 ಲಕ್ಷ ಟನ್ ಈ ಕಡೆ ಪಾಂಡವಪುರದ ಭಾಗದ ಕಾರ್ಖಾನೆಯಲ್ಲೂ ಅರೆಯಬಹುದು ಎನ್ನುವ ಗುರಿಯನ್ನು ಇಟ್ಟುಕೊಂಡು ನಾವು ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ಕಬ್ಬು ಸಂಪೂರ್ಣ ಅರೆಯುವವರೆಗೂ ಕಾರ್ಖಾನೆಯವರಿಗೆ ಸೂಚನೆಯನ್ನು ಕೊಡುವಂಥ ಕೆಲಸವನ್ನು ನಾವು ಮಾಡಿದ್ದೇವೆ. ಸಾಮಾನ್ಯವಾಗಿ ಮಾರ್ಚ್ ಅಂತ್ಯಕ್ಕೆ ಕಬ್ಬನ್ನು ಅರಿಯುವುದು

ಮುಕ್ತಾಯವಾಗುತ್ತದೆ. ಆಗ ಕಬ್ಬನ್ನು ಅರೆಯುವುದನ್ನು ಮುಕ್ತಾಯ ಮಾಡಬೇಕಾದ್ದು ಅವಶ್ಯವೆಂದು ನಾವು ಭಾವಿಸಿಕೊಳ್ಳಬೇಕೆನ್ನುವುದನ್ನು ತಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ. ಮಾರ್ಚ್ ನಂತರ ಅರೆಯುವುದಕ್ಕೆ ಪ್ರಾರಂಭ ಮಾಡಿದರೆ ಇಳುವರಿಯಲ್ಲಿ ಪ್ರಮಾಣ ಕಡಿಮೆಯಾಗುತ್ತಾ ಹೋಗುವುದರಿಂದ ರೈತರಿಗೂ ಹಾನಿ ಮತ್ತು ಸಹಕಾರಿ ಸಕ್ಕರೆ ಕಾರ್ಖಾನೆ ಸೇರಿದಂತೆ ಎಲ್ಲಾ ಸಕ್ಕರೆ ಉತ್ಪಾದಕರಿಗೂ ಹಾನಿ ಆಗುತ್ತದೆ ಎನ್ನುವುದು ತಮ್ಮ ಗಮನದಲ್ಲಿರಲಿ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೂ 32 ಲಕ್ಷ ಟನ್ ಕಬ್ಬು ಹೆಚ್ಚುವರಿಯಾಗಿ ಬರುತ್ತದೆ. ಮೊದಲು ಬೆಲ್ಲಕ್ಕೇನೂ ಹೋಗುತ್ತಿತ್ತಲ್ಲ ಆ ಬೆಲ್ಲಕ್ಕೆ ಹೋಗುತ್ತಿದ್ದ ಕಬ್ಬು ಸಹಿತ ಇವತ್ತು ಸಕ್ಕರೆ ಕಾರ್ಖಾನೆಗೆ ಬರುತ್ತಿದೆ. ಕಾರಣವೇನೆಂದರೆ ಬೆಲ್ಲಕ್ಕೆ ಬೆಲೆ ಕುಸಿದುಹೋಗಿದ್ದರಿಂದ ಇವತ್ತು ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಬರುವುದು ಹೆಚ್ಚಿಗೆ ಆಗಿರುವುದರಿಂದ ಕೂಡ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ಬೆಲ್ಲ ಮಾಡುವುದಕ್ಕೆ ಬಹಳಷ್ಟು ಜನ ಇಷ್ಟಪಡದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಮಾರುಕಟ್ಟೆಯಲ್ಲಿ ಬೆಲ್ಲಕ್ಕೆ ಬೆಲೆ ಇಲ್ಲದೇ ಇರುವುದರಿಂದ. ಎಲ್ಲಾ ಸಕ್ಕರೆ ಕಾರ್ಖಾನೆಗಳಲ್ಲಿ ಮೇ ಅಂತ್ಯದವರೆಗೆ ಕಬ್ಬನ್ನು ನುರಿಸುವ ಸಲುವಾಗಿ ಸೂಚನೆಯನ್ನು ನೀಡಲಾಗಿದೆ ಎನ್ನುವುದನ್ನು ನಾನು ಇಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಬಹಳ ಮಂದಿಗೆ ಇನ್ನೂ ಹಣ ಪಾವತಿಯಾಗಿಲ್ಲವೆನ್ನುವುದು ಬಿಜಾಪುರದಂಥ ಕೆಲವು ಕಾರ್ಖಾನೆಗಳಲ್ಲಿ ಆಗಿರಬಹುದೋ ಏನೋ. ಆದರೆ ಇಡೀ ರಾಜ್ಯದಲ್ಲಿ 1377 ಕೋಟಿ ರೂಪಾಯಿ ಕಬ್ಬಿನ ಬಾಕಿ ಪ್ರಕರಣದಲ್ಲಿ ಈಗಾಗಲೇ 994 ಕೋಟಿ ರೂಪಾಯಿಗಳನ್ನು ಪಾವತಿ ಮಾಡಲಾಗಿದೆ. ಇದರಲ್ಲಿ 383 ಕೋಟಿ ರೂಪಾಯಿ ಇನ್ನೂ ಬಾಕಿ ಇದೆ. ಇದರ ಜೊತೆಗೆ 26 ಕೋಟಿ ರೂಪಾಯಿ ಹಳೆ ಬಾಕಿ ಇದೆ. ಹಿಂದಿನ ವರ್ಷದ್ದು ಕಬ್ಬಿನ ಬಾಕಿ ಇದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ಈ ರೀತಿ ಇರಬೇಕಾದರೆ ಒಂದನ್ನು ನಾವು ಆಲೋಚನೆ ಮಾಡಬೇಕಾಗಿದೆ, ಸಹಕಾರಿ ಸಕ್ಕರೆ ಕಾರ್ಖಾನೆಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲವೇನೋ ಎನ್ನುವಂಥ ಅನುಮಾನಗಳು ಕೆಲವು ಸಂದರ್ಭಗಳಲ್ಲಿ ಬರುತ್ತಿದೆ. ಇದು ಒಂದು ಚೈನ್ ಸಿಸ್ಟಂ ಎಂದು ನನಗನ್ನಿಸುತ್ತದೆ. ಎ.ಬಿ. ಪಾಟೀಲರಿಗೆ, ಪ್ರಭಾಕರ್ ಹುಕ್ಕೇರಿಯವರಿಗೆ, ಶಿವಾನಂದ ಪಾಟೀಲರಿಗೆ ಇದು ಗೊತ್ತಿದೆ. ಪ್ರತಿ 5,6 ವರ್ಷಕ್ಕೆ ಒಮ್ಮೆ ಕಬ್ಬು ಉತ್ಪಾದನೆ ಹೆಚ್ಚಾದಾಗಲೆಲ್ಲಾ ಈ ಪರಸ್ಥಿತಿಯನ್ನು ನಾವೆಲ್ಲ ಸಂದರ್ಭದಲ್ಲಿಯೂ ಎದುರಿಸಿಕೊಂಡು ಬಂದಿದ್ದೇವೆ. ನನ್ನ 25 ವರ್ಷದ ಅನುಭವದಲ್ಲಿ ನಾನು ಹೇಳುವ ಮಾತಿದು. ದಯವಿಟ್ಟು ಅಪಾರ್ಥವನ್ನು ಕಲ್ಪಿಸಬಾರದು. ಸರ್ಕಾರವನ್ನು ರಕ್ಷಣೆ ಮಾಡುವುದರ ಸಲುವಾಗಿ ಉದಾಸಿಯವರು ಮಂತ್ರಿಯಾಗಿ ಈ ಮಾತನ್ನು ಹೇಳುತ್ತಿದ್ದಾರೆ ಎಂದು ದಯವಿಟ್ಟು ಅಪಾರ್ಥ ಕಲ್ಪಿಸಬೇಕಾಗಿಲ್ಲ. ಪ್ರತಿ ಐದಾರು ವರ್ಷಕ್ಕೊಮ್ಮೆ

ಈ ಸೈಕಲ್ ಬಂದಾಗ ಕಬ್ಬು ಹೆಚ್ಚಿಗೆ ಉತ್ಪಾದನೆಯಾದಾಗ ಸಕ್ಕರೆ ಬೆಲೆ ಕುಸಿದಂಥ ಪರಿಸ್ಥಿತಿಯಲ್ಲಿ ಏನಾಗುತ್ತದೆಂದರೆ, ಈ ರೀತಿ ಇಡೀ ದೇಶಾದ್ಯಂತ ಏನಾಗಿದೆಯೆಂದರೆ ಇವತ್ತು 60 ಲಕ್ಷ ಟನ್ ಈ ವರ್ಷ ಸಕ್ಕರೆ ಹೆಚ್ಚಿಗೆ ಉತ್ಪಾದನೆಯಾಗುತ್ತದೆ. ಹಾಗೂ ಹಿಂದಿನ ವರ್ಷದ 30 ಲಕ್ಷ ಟನ್ ಉಳಿದಿದ್ದು ಇದೆ. ಒಟ್ಟು 90 ಲಕ್ಷ ಟನ್ ನಮ್ಮ ದೇಶಕ್ಕೆ ಬೇಕಾಗಿರುವುದಕ್ಕಿಂತ ಹೆಚ್ಚಿಗೆ ಉತ್ಪಾದನೆಯಾಗಿದೆ. ಇದನ್ನು ಎಕ್ಸ್‌ಪೋರ್ಟ್ ಮಾಡಬೇಕೆಂದರೆ ಮಾರುಕಟ್ಟೆಯಲ್ಲಿ ಸಕ್ಕರೆಗೆ ಬೆಲೆಯಿಲ್ಲ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಕ್ಕರೆಗೆ ಬೆಲೆಯಿಲ್ಲ. ಅದಕ್ಕಾಗಿಯೇ ಟನ್‌ಗೆ 1300 ರೂಪಾಯಿ ಟ್ರಾನ್ಸ್‌ಪೋರ್ಟೇಶನ್ ಸಬ್ಸಿಡಿ ಕೊಟ್ಟು ಸಕ್ಕರೆಯನ್ನು ವಿದೇಶಕ್ಕೆ ರಫ್ತು ಮಾಡುವುದಕ್ಕೆ ಅನುಕೂಲವಾಗುವಂತೆ ಸಬ್ಸಿಡಿಯನ್ನು ಕೊಡುತ್ತೇವೆಂದು ಇಡೀ ರಾಷ್ಟ್ರದ ಎಲ್ಲಾ ರಾಜ್ಯಗಳಿಗೆ ಕೇಂದ್ರ ಸರ್ಕಾರದವರು ಹೇಳಿದ್ದಾರೆ. ಆ ರೀತಿ 1300 ರೂಪಾಯಿ ಕೊಟ್ಟರೂ ಸಹಿತ ಈ ಸಕ್ಕರೆಯನ್ನು ಹೊರಗಡೆ ಕಳುಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಸಕ್ಕರೆ ಬೆಲೆ ಮತ್ತು ಮೊಲ್ಯಾಸಿಸ್ ಬೆಲೆಗಳ ಮೇಲೆ ಕಬ್ಬಿನ ದರವನ್ನು ಗೊತ್ತುಪಡಿಸಬೇಕಾಗುತ್ತದೆ ಎಂಬುದು ಎಲ್ಲರ ಗಮನಕ್ಕೆ ಬಂದಿರಬೇಕಾದ ಅಂಶವೆನ್ನುವುದನ್ನು ತಾವು ಗಮನಿಸಬೇಕಾಗಿದೆ. ಕಾರ್ಖಾನೆಗಳನ್ನು ಆಧುನೀಕರಣ ಮಾಡಿದರೆ ಏನಾಗಬಹುದು? ಆಧುನೀಕರಣ ಮಾಡುವುದರಿಂದ ಮೊಲ್ಯಾಸಿಸ್ ಅನ್ನು ಡಿಸ್ಟಿಲರಿಯಲ್ಲಿ ಪರಿವರ್ತನೆ ಮಾಡಿ ಇವತ್ತು ಸ್ಪಿರಿಟ್ ತಯಾರು ಮಾಡಿ ಮಾರಾಟ ಮಾಡುವುದರಿಂದಾಗಲಿ ಅಥವಾ ಎಥನಾಲ್ ಮಾಡುವುದರಿಂದಾಗಲಿ, ಬಗಾಸ್‌ನಿಂದ ವಿದ್ಯುತ್‌ನ್ನು ಉತ್ಪಾದನೆ ಮಾಡುವುದನ್ನಾಗಲಿ, ಒಟ್ಟಾರೆ ಇದನ್ನು ಮಾಡಿದರೆ ಮಾತ್ರ ಲಾಭದಾಯಕ. ಕೇವಲ ಸಕ್ಕರೆಯನ್ನು ಮಾತ್ರ ಉತ್ಪಾದನೆ ಮಾಡುವಂಥ ಕಾರ್ಖಾನೆ, ಅದರ ಪಕ್ಕದಲ್ಲಿಯೇ ಮತ್ತೊಂದು ವಿದ್ಯುತ್ ಉತ್ಪಾದನೆ ಮಾಡುವಂಥ ಕಾರ್ಖಾನೆ, ಡಿಸ್ಟಿಲರಿ ಹೊಂದಿದಂಥ ಕಾರ್ಖಾನೆ, ಎಥನಾಲ್ ಮಾಡತಕ್ಕಂಥ ಕಾರ್ಖಾನೆ ಇದ್ದರೆ ಆ ಪೈಪೋಟಿಯಲ್ಲಿ ಕೇವಲ ಸಕ್ಕರೆ ಕಾರ್ಖಾನೆ ಉತ್ಪಾದನೆ ಮಾಡುವಂಥ ಕಾರ್ಖಾನೆ ಮುಚ್ಚಿಹೋಗುತ್ತದೆ. ನಮ್ಮ ಸಹಕಾರಿ ಸಕ್ಕರೆ ಕಾರ್ಖಾನೆಗಳೇನಿವೆ ಅವಶ್ಯಕತೆಗಿಂತ ಹೆಚ್ಚಿನ ಜನರನ್ನು ಇಟ್ಟುಕೊಂಡಿದ್ದಾರೆ. ಇದರ ಜೊತೆಗೆ ಆಧುನೀಕರಣದ ಕಡೆಗೆ ಇವರು ಹೋಗಲಿಲ್ಲ. ಈಗೇನಾಗಿದೆ ತಮಗೆಲ್ಲಾ ಗೊತ್ತಿರುವ ಹಾಗೆ ದಾವಣಗೆರೆ ಹತ್ತಿರ ಇವತ್ತು ಮೂರುವರೆ ಸಾವಿರ ಟನ್ ಕಬ್ಬು ಅರಿಯುವಂಥ ಒಂದು ಕಾರ್ಖಾನೆ ಇದ್ದರೆ ಅಲ್ಲಿ ಕೇವಲ 250 ಜನ ಮಾತ್ರ ಇದ್ದಾರೆ. ಅದೇ 1250 ಟನ್ ಕಬ್ಬನ್ನು ಅರಿಯುವಂಥ ಕಾರ್ಖಾನೆಯಲ್ಲಿ 800 ಜನರಿದ್ದಾರೆ. ಇವತ್ತೇನಾಗಿದೆ ಎಲ್ಲಾ ಕಂಪ್ಯೂಟರೈಸೇಶನ್ ಬಂದಮೇಲೆ ಆ ಕಂಪ್ಯೂಟರೈಸೇಶನ್‌ನಿಂದ..

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ಮೈ ಶುಗರ್‌ನಲ್ಲಿ 15 ವರ್ಷದ ಕೆಳಗಡೆ ಒಬ್ಬರು ಎಕ್ಸ್‌ಪ್ಯಾನ್‌ಶನ್ ಮಾಡಬೇಕು ಪರ್ಮಿಶನ್ ಕೊಡಿ, ಅದಕ್ಕೆ ಹಣ ಬೇಕು ಎಂದು ಕೇಳಿದರು. ಏಕೆಂದರೆ ಕಬ್ಬು ಬೆಳೆಯುವ ಏರಿಯಾ ಜಾಸ್ತಿ ಇದೆಯೆಂದು. ಆಮೇಲೆ

under utilisation of the machinery, ಏಕೆಂದರೆ ಪ್ರೈವೇಟ್‌ನವರೆಲ್ಲಾ ಬೆಲ್ಲ ಮಾಡುವುದಕ್ಕೆ ಹೊರಟುಹೋಗಿದ್ದೇವೆ, ಹೀಗಾಗಿ ಶುಗರ್ ಕೇನ್ ಸಾಕಷ್ಟು ಬರಲಿಲ್ಲ. ಶುಗರ್ ಕೇನ್‌ನ್ನು ಪ್ರೈವೇಟ್‌ನಲ್ಲಿ ಬೆಲ್ಲ ಅರಿಯುವುದಕ್ಕೆ ಕೊಡುವವರು ಯಾರು? ನಿಮ್ಮ ಡೆಪ್ಯುಟಿ ಕಮಿಶನರ್‌ರವರು. ಅಡ್ಮಿನಿಸ್ಟ್ರೇಟರ್ ಆಗಿ ಎಕ್ಸ್‌ಪ್ಯಾನ್‌ಶನ್ ಬೇಕು ಎಂದು ಬರೆಯುವವರ್‍ಯಾರು? ಅದನ್ನೂ ನಿಮ್ಮ ಡೆಪ್ಯೂಟಿ ಕಮಿಶನರ್‌ರವರೇ ಮಾಡುತ್ತಾರೆ. ನೋಡಿ, ಅದಕ್ಕೇ ನಾನು ಅನೇಕ ಸಲ ಹೇಳಿದ್ದೇನೆ, ನಾನೇನು ವಿಚಾರದ ಬಗ್ಗೆ ಮಾತನಾಡಲು ಸಹಿ ಹಾಕಿರಲಿಲ್ಲ, ಸ್ನೇಹಿತರೆಲ್ಲರೂ ಮಾತನಾಡಲಿ ಎಂದು ಸುಮ್ಮನೇ ಕುಳಿತುಕೊಂಡಿದ್ದೆ. ನಾವು ಪರಿಪಾಲಕರಾಗಬೇಕು. ಅಧಿಕಾರಿಗಳಿದ್ದಾರಲ್ಲಾ ಅವರು ಆಡಳಿತಗಾರರಾಗಬೇಕು. ನಾವೇನು ಮಾಡುತ್ತೇವೆ ಸದಾಕಾಲ ಆಡಳಿತಕ್ಕೆ ನಾವು ಕೈ ಹಾಕುತ್ತೇವೆ. ಪೊಲಿಟಿಶಿಯನ್ಸ್ ಆಡಳಿತ ಮಾಡುವುದಕ್ಕೆ ಹೋದಾಗ ಈ ದುರ್ಗತಿ ಬರುವುದು. ಅಧಿಕಾರಿಗಳಿಗೆ ಬಿಡಿ. ಪೂರ್ತಿ ಜವಾಬ್ದಾರಿ ಫಿಕ್ಸ್ ಮಾಡಿ ಅವರ ಮೇಲೆ ಬಿಡಿ. ಅವರ ಮೇಲೆ ಕ್ರಮ ಜರುಗಿಸಿ. ಅವರು ಯಾವ ಪ್ರೈವೇಟ್ ಮಾಲಿಕ ಬಂದು ಅವರನ್ನು ಕಂಡು ಮಾತನಾಡಿ ಒಳಪಡಿಸಿಕೊಳ್ಳುತ್ತಾನೆ, ಅವನ ಪರವಾಗಿ ಫೀಲ್ಡ್ ರಿಪೋರ್ಟ್ ಸರ್ಕಾರಕ್ಕೆ ಕಳುಹಿಸುತ್ತಾರೆ. ಅವನಿಗೆ ಲೈಸೆನ್ಸ್ ಕೊಡುವುದಕ್ಕೆ ಏನು ಬೇಕೋ ಆ ರೀತಿ ರಿಪೋರ್ಟ್‌ನ್ನು ಸರ್ಕಾರಕ್ಕೆ ಕಳುಹಿಸಿಕೊಡುತ್ತಾರೆ. ನಂತರ ಇಲ್ಲಿ ಕಾರ್ಖಾನೆ ಕ್ಲೋಸ್ ಆಗುವುದಕ್ಕೆ ಏನೋ ಬೇಕೋ ಅದಕ್ಕೂ ಒಂದು ರಿಪೋರ್ಟ್‌ನ್ನು ಕಳುಹಿಸುತ್ತಾರೆ. ರೈತ ಬೊಂಬಡಿ ಹೊಡೆದರೆ ಅವರಿಗೆ ಏನಾಗಬೇಕು? ಆದುದರಿಂದ ನಾವು ಆಡಳಿತಗಾರರಾಗಿರತಕ್ಕಂಥವರ ಮೇಲೆ ನೀತಿ ನಿರೂಪಕರಾಗಿತಕ್ಕಂಥವರು ನಿಗಾ ಇಟ್ಟಿರಬೇಕು. ನಮ್ಮದೇನು ನೀತಿ, ಈ ಸದನದಲ್ಲಿರತಕ್ಕಂಥ ಅಷ್ಟೂ ಜನ ನಾವು ಸದಸ್ಯರೇನಿದ್ದೇವೆ ನಾವು ಕಬ್ಬು ಬೆಳೆಗಾರರ ಪರ ಇದ್ದೇವೋ, ವಿರೋಧ ಇದ್ದೇವೋ? ಪರ ಇದ್ದೇವೆ. ನಾವಿಷ್ಟೂ ಜನ ಪರ ಇದ್ದರೂ ಕೂಡ ರೈತನಿಗೆ ಸಹಾಯ ಮಾಡುವುದಕ್ಕಾಗುತ್ತಿಲ್ಲ? ಕಾರಣವೇನು? ಅಂದರೆ ಈ ಸರ್ಕಾರದ ಯಂತ್ರವೇನಿದೆ ಅದು ನಮ್ಮ ಕೈಯಲ್ಲಿ ಇಲ್ಲ. ಇದನ್ನು ಮತ್ತಿನ್ಯಾರೋ ಹಿಡಿದಿದ್ದಾರೆ. ಸುಮ್ಮನೆ ನಿಮಗೊಂದು ಕುಲಾವಿ, ಒಂದು ಖಡ್ಗ, ಒಂದು ಕಿರೀಟ ಇಟ್ಟು ನಿಮ್ಮನ್ನು ರಾಜ ಎಂದು ಹೇಳಿದ್ದಾರೆ. ಆದರೆ ನಿಮ್ಮ ಹತ್ತಿರ ಏನೂ ಇಲ್ಲವೇ ಇಲ್ಲ. ಛಾವಿ ಅವರ ಕೈಯಲ್ಲಿ ಇದೆ. You have failed to execute your will. ಕಬ್ಬು ಬೆಳೆಗಾರರಿಗೆ ಸಹಾಯ ಮಾಡಬೇಕೆಂಬುದೇ ದೃಢ ನಿಶ್ಚಯ ನಿಮ್ಮದಾಗಿದ್ದರೆ ಎಲ್ಲಿದೆ ಹುಳುಕು ಹುಡುಕಿನೋಡಿ. Come on hang the fellows. ತನ್ನಷ್ಟಕ್ಕೆ ತಾನೇ ದಾರಿಗೆ ಬರುತ್ತದೆ. ಯಾವ ಅಧಿಕಾರಿ ಕೊಟ್ಟ? ಅದು ಹೇಗಾಯಿತು? ಇದರ ಬಗ್ಗೆ ವಿಚಾರಣೆ ಮಾಡಿ ನೋಡಿ. ಇವರ ಮನೆಯಲ್ಲಿ ಒಂದು ದಿವಸ ಊಟ ಇಲ್ಲದಿದ್ದರೆ ಹಾಗೆಯೇ ಇವರು ಇದ್ದುಬಿಡುತ್ತಾರೆಯೇ? ರೈತನ ಗತಿ

ಏನಾಗಬೇಕು? ನಾವು ಫೇಲ್ ಆಗಿದ್ದೇವೆ. ನಮ್ಮ ಫೇಲ್ಯೂರ್‌ನ್ನು ಅಡ್ಮಿಟ್ ಮಾಡಿಕೊಳ್ಳಿ. ಏಕೆ ಫೇಲ್ ಆಗಿದ್ದೇವೆ, ಅಟ್ಲೀಸ್ಟ್ ಹಿಂದಿನದ್ದನ್ನು ಮರೆತುಬಿಡಿ. ನೋಡಿ ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿ ಒಂದು ರಿಪೋರ್ಟ್‌ನ್ನು ಕೊಟ್ಟಿದೆ. I think almost 9 IAS officers were indicated by that committee. ಒಬ್ಬರೂ ಅದರ ಮೇಲೆ ಕ್ರಮ ಜರುಗಿಸಲಿಲ್ಲ. ಒಂದೊಂದು increment cut ಮಾಡಿದ್ದಾರೆಯೇ? ಇವರೇನು IAS ತೆಗೆದುಕೊಂಡು ಬಂದರೆ ಆಕಾಶದಿಂದ ಉದುರಿರುತ್ತಾರಾ? ಅವರು ಮನಸ್ಸೋಯಿಚ್ಛೆ ಆಡಳಿತ ನಡೆಸಬಹುದಾ? ಅವರ ಮೇಲೆ ಕ್ರಮ ಜರುಗಿಸುವುದಕ್ಕೆ ಆಗುವುದಿಲ್ಲವೇ? Increment cut ಮಾಡುವುದಕ್ಕೆ ಆಗುವುದಿಲ್ಲವೇ? Suspend ಮಾಡುವುದಕ್ಕೆ ಆಗುವುದಿಲ್ಲವೇ? Prosecute ಮಾಡುವುದಕ್ಕೆ ಆಗುವುದಿಲ್ಲವೇ? ನಮಗೆ ಮಾಡುವುದಕ್ಕೆ ಯಾವಾಗ ಧೈರ್ಯ ಮತ್ತು ಯೋಗ್ಯತೆ ಬರುತ್ತದೆ? ನಮಗೆ ಸ್ಪಷ್ಟತೆ ಇದ್ದಾಗ ಮಾತ್ರ ಮಾಡುವುದಕ್ಕೆ ಬರುತ್ತದೆ. ನಮಗೆ limbs ನಲ್ಲಿ ಶಕ್ತಿ ಇಲ್ಲ. ನಾವು ಹೆಳವರಾಗಿಬಿಟ್ಟಿದ್ದೇವೆ, we crawl, we do not even walk. ಹೇಗೆ ಆಗುತ್ತದೆ? Spine ಇರಬೇಕು. The Government should have the spine, otherwise these things will not improve.

ಶ್ರೀ ಕೆ. ಶ್ರೀನಿವಾಸಗೌಡ :– ತಾವು ಆಗಲೇ ಹೇಳಿದಿರಿ, EID Parry ಯವರು ಚೆನ್ನೈನಲ್ಲಿ ಒಂದು factory ಹಾಕಿದ್ದಾರೆ. Computer ಗಳನ್ನು ಉಪಯೋಗಿಸಿಕೊಂಡು ಕೇವಲ 16 ಜನ 10 ಸಾವಿರ ಟನ್ capacity ಯ sugar mill ನಡೆಸುತ್ತಿದ್ದಾರೆ. ಇಲ್ಲಿ ನಮ್ಮ co-operative sector ನಲ್ಲಿ ಎಷ್ಟು ಜನರನ್ನು employment ಗೆ ತೆಗೆದುಕೊಳ್ಳುತ್ತೀವಿ, ಅಷ್ಟು ದೊಡ್ಡ ಮನುಷ್ಯ ಎಂದು ತಪ್ಪುಗ್ರಹಿಕೆ ಇರುವುದರಿಂದ ರೈತರಿಗೆ ಅನ್ಯಾಯವಾಗುತ್ತದೆ. ಇದನ್ನು ನಾವು ಯಾವ ದಿಕ್ಕಿನಲ್ಲಿ control ಮಾಡಬೇಕು ಆ ದಿಕ್ಕಿನಲ್ಲೇ control ಮಾಡಬೇಕು.

ಶ್ರೀ ಸಿ.ಎಂ. ಉದಾಸಿ :– ಮಾನ್ಯ ಶ್ರೀನಿವಾಸಗೌಡರು ಹೇಳಿದಂತೆ, ನನಗೆ ಗೊತ್ತಿರುವ ಹಾಗೆ ಒಂದು ದಿವಸಕ್ಕೆ 9,000 ಟನ್ ಕಬ್ಬು ಅರೆಯುವಂತಹ ಕಾರ್ಖಾನೆಯಲ್ಲಿ computerization ಬಂದ ಮೇಲೆ ಕೇವಲ 50 ಜನರು ಇದ್ದದ್ದನ್ನು ನಾನು ಕೇಳಿದ್ದೇನೆ. ಪ್ರಮುಖವಾಗಿ ಏನಾಗಿದೆಯೆಂದರೆ sugar cane ಬೆಳೆಯಬೇಕಾದಂತಾದ್ದರ ಜೊತೆಗೆ ಆ ವ್ಯಾಪ್ತಿಯಲ್ಲಿ ಇರಬೇಕಾದಂತಹ ಸಕ್ಕರೆ ಕಾರ್ಖಾನೆಯ ಮಾಲೀಕರು ರೈತರ ಜೊತೆಗೆ agreement ಮಾಡಿಸಿಕೊಳ್ಳಬೇಕು ಎನ್ನುವಂತಹ ಒಂದು ಕಾರ್ಯಕ್ರಮವನ್ನು ನಾವು ನಿರೂಪಣೆ ಮಾಡಬೇಕು. ಸಕ್ಕರೆ ಕಾರ್ಖಾನೆಯವರು ಕಬ್ಬು ತೆಗೆದುಕೊಳ್ಳದಿದ್ದರೆ ಅವರಿಗೆ ಏನು ಮಾಡಬೇಕು ಎನ್ನುವ ಬಗ್ಗೆಯಾಗಲಿ, ಸಕ್ಕರೆ ಕಾರ್ಖಾನೆಗೆ ರೈತರು ಕಬ್ಬು ಕೊಡದಿದ್ದರೆ

ಅದಕ್ಕೆ ಏನು ಮಾಡಬೇಕು ಎನ್ನುವುದರ ಬಗ್ಗೆ mutual agreement ಆಗಬೇಕು. ಆ agreement ಮೊದಲಿಗೆ ಆಗುತ್ತಿಲ್ಲ. ಮೊದಲಿಗೆ ನಾವು ಅದನ್ನೆ control ಗೆ ತರದಿದ್ದರೆ, ಯಾವ್ಯಾವ ಕಾರ್ಖಾನೆಗೆ ಎಷ್ಟೆಷ್ಟು ಕಬ್ಬು ಅವಶ್ಯಕತೆ ಇದೆ, ಉದಾಹರಣೆಗೆ ಅವರ capacity 3 ಲಕ್ಷ ಟನ್ ಇತ್ತು ಎಂದರೆ 3.25 ಲಕ್ಷ ಟನ್‌ಗೆ agreement ಮಾಡಿಕೊಳ್ಳಬೇಕು. ಆ ಪ್ರಕಾರ agreement ಮಾಡಿಕೊಂಡು ಅಷ್ಟು ಕೊಬ್ಬು ಅರೆಯದಿದ್ದರೆ ಅವನು penalty ಕೊಡುವಂತಹ, ಹಾಕುವಂತಹ provision ಇರಬೇಕು. ಆಕಸ್ಮಾತ್ ಕಬ್ಬು ಕೊಡಬೇಕಾದಂತಹ ರೈತ agreement ಮಾಡಿಕೊಂಡಿರುವವನು ಬೆಲ್ಲಕ್ಕೆ ಹೆಚ್ಚು ಬೆಲೆ ಬಂತು ಎಂದು ಕಬ್ಬನ್ನು ಬೇರೆ ಕಡೆಗೆ deviate ಮಾಡಿದಾಗ ಅವನಿಗೆ ಏನು ಮಾಡಬೇಕು ಎನ್ನುವುದರ ಬಗ್ಗೆ ಕೂಡ ಇರಬೇಕಾಗುತ್ತದೆ.

ಶ್ರೀ ಎ.ಬಿ. ಪಾಟೀಲ್ :- ಕಾರ್ಖಾನೆಗಳಿಗೆ, ಮೊದಲು ಇವತ್ತು license ಕೊಡಬೇಕಾದರೆ ಎಷ್ಟು area ದಲ್ಲಿ ಕಬ್ಬು ಬೆಳೆಯುತ್ತಾರೆ ನೋಡಿ ಕೊಟ್ಟಿರುತ್ತಾರೆ. ಇನ್ನೊಂದು ಅಲ್ಲಿ ಯಾವ ಕಾರ್ಖಾನೆ ಪ್ರಾರಂಭ ಆಗುತ್ತವೆ, ಕಬ್ಬಿನ ಬೆಳೆ ಅಭಿವೃದ್ಧಿ ಪಡಿಸಬೇಕು ಎಂದು ಒಂದು condition ಇದೆ. ಹಾಗಾದರೆ ನಿಮ್ಮ ಸರ್ಕಾರ ಕಬ್ಬಿನ ಬೆಳೆ ಸಲುವಾಗಿ ಏನು ಮಾಡಿದೆ? ಯಾವ ಕಾರ್ಖಾನೆ ಮೇಲೆ ಕೂಡ action ಇಲ್ಲ.

ಶ್ರೀ ಸಿ.ಎಂ. ಉದಾಸಿ :- ಕಬ್ಬಿನ ಬೆಲೆಯನ್ನು ನಿಗದಿ ಮಾಡಬೇಕಾದಾಗ ನಮ್ಮ ಪರಿಸ್ಥಿತಿ ಏನಿದೆ ಎಂದರೆ, ಇವತ್ತು ಕಬ್ಬಿನ ಬೆಲೆ ನಿಗದಿ ಯಾವುದರ ಮೇಲೆ ಆಗಬೇಕೆಂದರೆ ಕಬ್ಬಿನಿಂದ ಬಂದಂತಹ production ಮಾರಾಟವಾಗಿ, ಅದರಿಂದ ಬಂದಿರುವಂತಹ ಹಣದ realization ಆಗಬೇಕು. ಸಕ್ಕರೆ ಆಗಲಿ, molasses ಆಗಲಿ, ವಿದ್ಯುತ್‌ನ ಉತ್ಪಾದನೆಯಾಗಲಿ ಇವುಗಳಿಂದ ಬಂದಿರುವಂತಹ ಹಣದಿಂದಲೇ ಪಾವತಿ ಮಾಡಬೇಕಾಗಿರುತ್ತದೆ. ಅದು ಸಹಕಾರಿ ಸಕ್ಕರೆ ಕಾರ್ಖಾನೆಯಿರಲಿ, ಸರ್ಕಾರದ ಕಾರ್ಖಾನೆಯಿರಲಿ ಅಥವಾ ಖಾಸಗಿ ವ್ಯಕ್ತಿಗಳದಿರಲಿ. ಇಂತಹ ಸಂದರ್ಭದಲ್ಲಿ ಮೋಸ ಮಾಡದೇ ನೋಡಿಕೊಳ್ಳುವಂತಹ, ನಿಯಂತ್ರಣದಲ್ಲಿ ಇರಬೇಕಾದಂತಹ ವ್ಯವಸ್ಥೆ ಏನಾಗಬೇಕಾಗಿತ್ತು, ಆ ವ್ಯವಸ್ಥೆ dilute ಆದ ಪರಿಣಾಮ ಇವತ್ತು ಈ ರೀತಿಯಾಗಿದೆ. ಇವತ್ತು ನಮ್ಮ ದೇಶಕ್ಕೆ 190 ಲಕ್ಷ ಟನ್ ಸಕ್ಕರೆ ಬೇಕಾಗಿದೆ ಎಂದರೆ ಅಷ್ಟಕ್ಕಿಂತ ಹೆಚ್ಚು ಸಕ್ಕರೆ ಉತ್ಪಾದನೆಯಾದರೆ ಏನು ಮಾಡಬೇಕು? ಅದಕ್ಕೆ ಯಾವ ರೀತಿ intervene ಆಗಬೇಕು ಎನ್ನುವ ನೀತಿ ಇರಬೇಕಾಗಿತ್ತು. ಆ ನೀತಿ ಮತ್ತು ವ್ಯವಸ್ಥೆ ವಿಫಲವಾದ ಪರಿಣಾಮ ಇವತ್ತು ಏನಾಗಿದೆಯೆಂದರೆ ಬೆಲ್ಲಕ್ಕೆ ಬೆಲೆ ಇಲ್ಲದಂತಹ ಪರಿಸ್ಥಿತಿ ಬಂದಿದೆ. ಖಾಸಗಿ ವ್ಯಕ್ತಿಗಳು ಕಾರ್ಖಾನೆ ಮಾಡಿದಾಗ ಆಧುನೀಕರಣ ಮಾಡಿಕೊಂಡು ಅವರು ಹೆಚ್ಚು ಬೆಲೆಯನ್ನು

ಕೊಡುವುದಕ್ಕೆ ಹಾಗೂ ಹೆಚ್ಚು ಲಾಭವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಅದರ ಪಕ್ಕದಲ್ಲೆ ಇರುವಂತಹ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಶೋಷಣೆ ಮಾಡುವಂತಹ ಸಾಧ್ಯತೆ ಇದೆ ಎನ್ನುವುದನ್ನು ಸಹ ನಾವು ಗಂಭೀರವಾಗಿ ಚಿಂತನೆ ಮಾಡಬೇಕಾದಂತಹ ಕಾಲವಿದು ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇಲ್ಲದಿದ್ದರೆ ನಮ್ಮ ರೈತರು ಬೆಳೆದಂತಹ ಕಬ್ಬನ್ನು ಮೇ ತಿಂಗಳೊಳಗಾಗಿ ಅರೆದು ಮುಗಿಸಬೇಕು ಎಂದು ಮಾಡಿದರೂ ಸಹ transportation subsidy ಕೊಡಬೇಕು ಅಥವಾ purchase tax ನಲ್ಲಿ ವಿನಾಯಿತಿ ಕೊಡಬೇಕು ಎನ್ನುವಂತಹ ವಿಚಾರದಲ್ಲಿ ಗಂಭೀರವಾಗಿ ಆಲೋಚನೆ ಮಾಡಬೇಕಾಗಿದ್ದರೂ ಸಹ ಇದರ ಬಗ್ಗೆ ನಮ್ಮ ಮಾನ್ಯ ಉಪಮುಖ್ಯ ಮಂತ್ರಿಯವರಾದ ಶ್ರೀಮಾನ್ ಯಡಿಯೂರಪ್ಪನವರ ಜೊತೆ ಚರ್ಚೆ ಮಾಡಿ ಮಾಡಬೇಕಾಗಿರುವಂತಹ ಕೆಲಸವಾಗಿದೆ. ಇನ್ನು ಮಹಾರಾಷ್ಟ್ರದಲ್ಲಿ purchase tax ಗೆ ವಿನಾಯಿತಿ ಕೊಟ್ಟಿಲ್ಲ. ಕೊಡುತ್ತೇವೆ ಎಂದು ಹೇಳಿದ್ದಾರೆ. Transportation subsidy ಬಗ್ಗೆ ಯಾವಾಗ ಹೇಳಿದ್ದಾರೆಂದರೆ April 15ರ ನಂತರ ಅರೆಯಬೇಕಾದಂತಹ ಕಬ್ಬಿಗೆ ಎಂದು ಗುರುತಿಸಿ, ಅದರಲ್ಲಿ ಶೇಕಡ 1% ಇಳುವರಿ ಕಡಿಮೆಯಾದಾಗ 100 ರೂಪಾಯಿ ಒಂದು ಟನ್‌ಗೆ ಕೊಡಬೇಕು ಎನ್ನುವುದರ ಬಗ್ಗೆ ಚರ್ಚೆ ಮಾಡಿ ಅದರ ಬಗ್ಗೆ ಒಂದು ಸುತ್ತೋಲೆ ಹೊರಡಿಸಿದ್ದಾರೆ ಎಂದು ಇದೆಯೇ ಹೊರತು purchase tax ಮನ್ನಾ ಮಾಡಿರುವುದರ ಬಗ್ಗೆ ಇನ್ನೂ ಏನೂ ಆಗಿಲ್ಲ, ಮಾಡುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟಿದ್ದಾರೆ ಎನ್ನುವ ಮಾತು ಇದೆಯೇ ಹೊರತು ಇನ್ನೂವರೆಗೆ ಇಲ್ಲ. ಇವತ್ತು ನಾವು ಒಂದು ಪ್ರಮುಖವಾಗಿ ಆಲೋಚನೆ ಮಾಡುತ್ತಿರುವುದು ಏನೆಂದರೆ ರೈತರ ಶೋಷಣೆಗೆ ಸಂಬಂಧಪಟ್ಟ ಹಾಗೆ ತೂಕದಲ್ಲಿ ಆಗುತ್ತಿರುವಂತಹ ಮೋಸದ ಬಗ್ಗೆ ಏನು ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ, ಇದರ ಬಗ್ಗೆ ವಿಚಾರಣೆ ಮಾಡುವುದಕ್ಕೆ ಗಂಭೀರವಾಗಿ ಆಲೋಚನೆ ಮಾಡಿ, ಆ ರೀತಿ ಯಾವ ಕಾರ್ಖಾನೆಯವರೆ ಮಾಡಿರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಮುಖ್ಯವಾಗಿ ಪ್ರಕಾಶ್ ಹುಕ್ಕೇರಿ ಹೇಳಿದರು ಹಾಗೂ ಶ್ರೀನಿವಾಸ ಗೌಡರು ಹೇಳಿದ್ದು ನನ್ನ ಗಮನಕ್ಕೆ ಬರಲಿಲ್ಲ. ಖಾಸಗಿ ವ್ಯಕ್ತಿಗಳ weigh bridge ಗಳು ಕಾರ್ಖಾನೆಗಳು ಇರುವಂತಹ ಕಡೆಗಳಲ್ಲಿ ಇರಬೇಕಾದುದು ಅವಶ್ಯ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಅದರ ಬಗ್ಗೆ ಕೂಡ ಗಂಭೀರವಾಗಿ ಆಲೋಚನೆ ಮಾಡಿ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- APMC ಮುಖಾಂತರ ಮಾಡುತ್ತೇವೆಂದು ಹೇಳಿದ್ದರು. APMC ಮುಖಾಂತರ Weigh bridge ಗಳನ್ನು ಎಲ್ಲೆಲ್ಲಿ ಕಬ್ಬು ಬೆಳೆಯುತ್ತಾರೆ ಅಲ್ಲಿ ಮಾಡಿದರೆ ಒಳ್ಳೆಯದು.

ಶ್ರೀ ಸಿ.ಎಂ. ಉದಾಸಿ :- ಅದು ಕಾರ್ಖಾನೆ ಹತ್ತಿರವೇ ಆಗಬೇಕು. ಅದೂ ಸಮಸ್ಯೆ ಇದೆ. ನಮ್ಮ ಸಹಕಾರಿ ಸಕ್ಕರೆ ಕಾರ್ಖಾನೆಗಳು ಹೇಗೆ ಹಾಳಾಗುತ್ತವೆ ಎಂದು ಹೇಳುವುದಾದರೆ, ನನ್ನ, ಮಾನ್ಯ ಎ.ಬಿ. ಪಾಟೀಲರ ಮತ್ತು ಜಯಪ್ರಕಾಶ್ ಹೆಗ್ಡೆಯವರ ಅನುಭವಕ್ಕೆ ಸಾಕಷ್ಟು ಬಂದಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಆದರೆ ಕಾಲಕಾಲಕ್ಕೆ ರಾಜಕೀಯ ಮಧ್ಯಪ್ರವೇಶ ಆಗುವಂತಹ ವ್ಯವಸ್ಥೆ ಹೋಗಬೇಕು. ಸಹಕಾರ ರಂಗ ರಾಜಕೀಯದಿಂದ ದೂರ ಇರಬೇಕು ಎನ್ನುವಂತಹ ವ್ಯವಸ್ಥೆ ಬರದೇ ಹೋದರೆ ಸಹಕಾರ ರಂಗವನ್ನು ಉಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ಸಂದರ್ಭದಲ್ಲಿ ಸಕ್ಕರೆ ಕಾರ್ಖಾನೆ ಕಬ್ಬು ಅರೆದಂತಹ ಸಂದರ್ಭದಲ್ಲಿ ಸಕ್ಕರೆಯನ್ನು pledge ಮಾಡಿ loan ಕೊಡುವುದಕ್ಕೆ Government bank guarantee ಕೊಡಬೇಕು ಎಂದು ನಾನು ಬಂದು ಕೇಳಿದಾಗ ಮಾನ್ಯ ಮಂತ್ರಿಗಳು ಕೊಟ್ಟಂತಹ ಉತ್ತರ ಹಾಗೂ ಜನರು ಆ ಸಂದರ್ಭದಲ್ಲಿ ನಡೆದುಕೊಂಡಂತಹ ರೀತಿ ನೋಡಿದಾಗ ಯಾವ ರೀತಿ ನಮ್ಮನ್ನು ಶೋಷಣೆ ಮಾಡಿ, ತೊಂದರೆ ಕೊಡುವುದಕ್ಕೆ ಪ್ರಯತ್ನಪಟ್ಟರು ಎನ್ನುವುದು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಆ ಕಾರಣದಿಂದ ಸಕ್ಕರೆ ಕಾರ್ಖಾನೆಗೆ ಬೇರೆ ಕಡೆಯಿಂದ ಹಣ ತೆಗೆದುಕೊಂಡು ವ್ಯವಸ್ಥೆ ಮಾಡುವುದರಿಂದ ರೈತರಿಗೆ ಆಗುವ ತೊಂದರೆ ಏನಿದೆ, ಅನೇಕ ಕಡೆ society ಯಿಂದ ಬ್ರಹ್ಮಾವರ ಕಾರ್ಖಾನೆಯವರು ಸಾಲ ಪಡೆದು ಕೊಟ್ಟಿದಂತಹ ಹಣ ಇನ್ನುವರೆಗೆ ಪಾವತಿ ಮಾಡುವುದಕ್ಕೆ ಸಾಧ್ಯತೆಯಾಗಿಲ್ಲ. ಕಾರಣವೇನೆಂದರೆ ಕಾಲಕಾಲಕ್ಕೆ ಆಗಿರುವಂತಹ ಧೋರಣೆ ಏನಿದೆ, ಇದಕ್ಕೆ ಒಂದು ನಿಶ್ಚಿತವಾದಂತಹ ಒಂದು ವಿಚಾರಧಾರೆ ಇರಬೇಕೆ ಹೊರತು, ಆ ವಿಚಾರಧಾರೆ ಇಲ್ಲದ ಪರಿಣಾಮ ಈ ಕಾರ್ಖಾನೆಗಳು ಹೀಗಾಗಿವೆ. ಸಹಕಾರ ರಂಗದಲ್ಲಿ ಕಾರ್ಖಾನೆಗಳೂ ಉಳಿಯದಿದ್ದರೆ ಏನಾಗುತ್ತದೆಂದರೆ ಮುಂದೆ ಒಂದು ದಿವಸ ಶೋಷಣೆ ಪ್ರಾರಂಭವಾಗುತ್ತದೆ. ಇವತ್ತು ಖಾಸಗೀ ವ್ಯಕ್ತಿಗಳ ಕೈಯಲ್ಲಿ ಕಾರ್ಖಾನೆಗಳು ಇದ್ದಿದ್ದೆಯಾದರೆ ಸಂಪೂರ್ಣವಾಗಿ ರೈತರನ್ನು ಶೋಷಣೆ ಮಾಡುವಂತಹ ಕೆಲಸವಾಗುತ್ತದೆ. ಅದನ್ನು ತಪ್ಪಿಸುವ ಸಲುವಾಗಿ ಸಹಕಾರಿ ರಂಗಗಳ ಕಾರ್ಖಾನೆಗಳು ಹಾಗೂ ಸರ್ಕಾರಿ ಕಾರ್ಖಾನೆಗಳನ್ನು ನಡೆಸುವಂತಹ ವಿಚಾರದಲ್ಲಿ ಯಾವ ರೀತಿ ಯೋಜನೆಗಳನ್ನು ರೂಪಿಸಬೇಕು ಎಂದು ನಿಶ್ಚಿತವಾದ ಗುರಿಯನ್ನು ಹಾಕಬೇಕಾಗುತ್ತದೆ. ದರವನ್ನು ಗೊತ್ತುಪಡಿಸಬೇಕು ಎನ್ನುವಂತಹ ವಿಚಾರದಲ್ಲಿ ಕಾರ್ಖಾನೆ ಮಾಲೀಕರ ಸಭೆಯನ್ನು ಕರೆದು ತೀರ್ಮಾನ ಮಾಡಬೇಕು. ಏಕೆಂದರೆ ಅದು ಒಂದೇ ರೀತಿಯಾಗಿರುವುದಿಲ್ಲ. ಅನೇಕರು, ಈ ಭಾಗದಲ್ಲಿ ಒಂದು ದರವಿದ್ದರೆ, ಬೆಳಗಾಂನಲ್ಲಿ ಒಂದು ದರ, ಬೀದರ್‌ನಲ್ಲಿ ಒಂದು ದರ ಇರುತ್ತದೆ. ಅದು recovery ಮೇಲೆ ಅವಲಂಬಿಸಿಕೊಂಡಿದೆ. ಇವತ್ತು ನಮಗೆ price control ಮಾಡುವಂತಹ ವಿಚಾರದಲ್ಲಿ ಸರ್ಕಾರದಲ್ಲಿ ಇಲ್ಲಿಯವರೆಗೆ ಅಷ್ಟೇ

state advisory price ಎಂದು ಇಲ್ಲ. ಹೀಗಿದ್ದಾಗ ರೈತರ ಹಿತವನ್ನು ಕಾಪಾಡಬೇಕು ಎನ್ನುವ ದೃಷ್ಟಿಯಿಂದ ಸಕ್ಕರೆ ಕಾರ್ಖಾನೆಯ ಮಾಲೀಕರ ಸಭೆಯನ್ನು ಕರೆದು ಅವರಿಗೆ ಹಣ ಪಾವತಿ ಮಾಡುವಂತಹ ವ್ಯವಸ್ಥೆ ಮಾಡುವುದು ಸೂಕ್ತವೆಂದು ನಾನು ಭಾವಿಸಿಕೊಂಡಿದ್ದೇನೆ.

ಶ್ರೀ ಎಸ್. ರಾಜೇಂದ್ರನ್ :- ಈಗ ಮಾನ್ಯ ಎ.ಬಿ. ಪಾಟೀಲರು, ಪ್ರಕಾಶ್ ಹುಕ್ಕೇರಿಯವರು, ಜೊತೆಗೆ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಕೊಟ್ಟಂತಹ suggestion ಗೆ ಉತ್ತರ ಕೊಟ್ಟರು. ಆದರೆ ಮಾನ್ಯ ರಮೇಶ್ ಕುಮಾರ್‌ರವರು ಏನು ಮಾತನಾಡಿದರು ಅದಕ್ಕೆ ತಾವು ಏನಾದರೂ ಉತ್ತರ ಕೊಡಲೇಬೇಕು. ಅವರೇನೂ ಸುಳ್ಳು ಹೇಳಿಲ್ಲ, ಸತ್ಯ ಸಂಗತಿಯನ್ನು ಹೇಳಿದ್ದಾರೆ. ಅದಕ್ಕೂ ಕೂಡ ತಾವು ಉತ್ತರ ಹೇಳಿ.

ಶ್ರೀ ಸಿ.ಎಂ. ಉದಾಸಿ :- ಅವರು ಗಂಭೀರವಾಗಿ ಆಲೋಚನೆ ಮಾಡಿದ್ದು ಒಂದು report ನ ಬಗ್ಗೆ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಈಗ ನಾವು ಕೇಳಿರುವಂತಹ ಮೂಲ ಪ್ರಶ್ನೆಗೆ ತಾವು ಉತ್ತರ ಕೊಡಲಿಲ್ಲ. ರಾಜ್ಯದಲ್ಲಿ ಈ ಸಾಲಿನಲ್ಲಿ ಇಷ್ಟು ಕಬ್ಬನ್ನು ನುರಿಸಬೇಕೆಂದು ಆದೇಶ ಮಾಡಿದ್ದೇನೆಂದು ಹೇಳಿದಿರಿ. ಆದರೆ ಈಗ ಬೀದರ್ ಜಿಲ್ಲೆಯಲ್ಲಿ ಎಷ್ಟು excess ಇದೆ? ಬಿಜಾಪುರದಲ್ಲಿ ಎಷ್ಟು excess ಇದೆ? ಅಲ್ಲಿ ನುರಿಸುವಂತಹ ಕಾರ್ಖಾನೆಗಳು ಯಾವುದು ಇಲ್ಲ. ನಿಮ್ಮ ಜಿಲ್ಲಾಧಿಕಾರಿಗಳು ನಿಮಿತ್ತವಾಗಿ meeting ಮಾಡಿ, ಒಂದು proceeding ಕಳುಹಿಸಿದರೆ ಅದು meeting ಆಗುವುದಿಲ್ಲ. ಈಗ ನೀವೂ ಕೂಡ ಅದೇ ರೀತಿ ಉತ್ತರ ಕೊಟ್ಟಿರಿ. ನಾವು ಏನು ಹೇಳಿದ್ದೆವು ಎಂದರೆ 60 ಲಕ್ಷ ಟನ್ ಇವತ್ತಿಗೂ excess ಇದೆ. ಅದಕ್ಕೆ ನೀವು district wise ಹೇಳಬೇಕಾಗುತ್ತದೆ. ಬೀದರ್‌ನಲ್ಲಿ ಇಷ್ಟು ಕಬ್ಬನ್ನು ನಾನು ಇಂತಹವರಿಗೆ ನುರಿಸುವುದಕ್ಕೆ ಆದೇಶ ಮಾಡಿದ್ದೇನೆ ಎಂದು ಹೇಳಬೇಕು. ನೀವು ಅದನ್ನು ಹೇಳಲಿಲ್ಲ. Incentives ಕೊಟ್ಟಿಲ್ಲವೆಂದು ಹೇಳುತ್ತೀರಿ, ಮಹಾರಾಷ್ಟ್ರದಲ್ಲಿ purchase tax ಗೆ exemption ಕೊಟ್ಟಿದೆ. ನಾವು ಕೇಳಿದ್ದು co-operative sugar factory ಅನ್ನು privatize ಮಾಡುವುದಕ್ಕೆ ನಿಮಗೆ ಯಾರು ಆದೇಶ ಕೊಟ್ಟರು? ಇವತ್ತು ನೀವೇ conclusion ನಲ್ಲಿ ಹೇಳಿದ್ದೀರಿ. Co-operative sugar mills ಅನ್ನು ನಾವು ಉಳಿಸದೇ ಹೋದರೆ, ರೈತರು ಶೋಷಣೆಗೆ ಒಳಗಾಗುತ್ತಾರೆಂದು ಹೇಳಿದ್ದೀರಿ. ಇವತ್ತು blanket ಆಗಿ ಒಂದೊಂದು co-operative sugar mill auction ಮಾಡದೇ ಮಾರುವುದಕ್ಕೆ ಹೊರಟಿದ್ದೀರಿ. ನೀವು public auction ಕೂಡ ಮಾಡುತ್ತಿಲ್ಲ.

ಶ್ರೀ ಸಿ.ಎಂ. ಉದಾಸಿ :– Co-operative sugar factory ಯಲ್ಲಿ ಎಲ್ಲಿ auction ಮಾಡುವಂಥ ತೀರ್ಮಾನವನ್ನು ಮಾಡಿದ್ದಾರೆ? ಆಡಳಿತ ಮಂಡಳಿಯವರೆ, ಸ್ವಯಂ ಆಗಿ ತೀರ್ಮಾನ ಮಾಡಿಕೊಂಡಿದ್ದಾರೆ. ಅಲ್ಲಿ ಮಾತ್ರ ಅದನ್ನು ಮಾಡಿದ್ದಾರೆಯೇ, ಹೊರತು ಅದನ್ನು ಮಾಡಬೇಕೆಂದು ಸರ್ಕಾರ suo motu ತೀರ್ಮಾನವನ್ನು ತೆಗೆದುಕೊಂಡಿಲ್ಲ.

ಶ್ರೀ ವಾಟಾಳ್ ನಾಗರಾಜು :– ಮಾನ್ಯ ಮಂತ್ರಿಯವರೆ, ತಮ್ಮ ಉತ್ತರವನ್ನು ಬಹಳ ಗಂಭೀರವಾಗಿ ಕೇಳುತ್ತಿದ್ದೇವೆ. ಇಡೀ ರೈತರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿದ್ದಾರೆ. ನೀವು ರೈತರ ಬಗ್ಗೆ ಏನೆಂಬುದನ್ನು ಸ್ಪಷ್ಟವಾಗಿ ಹೇಳಬೇಕು. ರೈತರ ಪರಿಸ್ಥಿತಿ ಏನು? ರೈತರ ಬಗ್ಗೆ ಏನು? ಅವರಿಗೆ ಎಷ್ಟು ಟನ್‌ಗೆ ಕೊಡುತ್ತೀರಿ, ಸರ್ಕಾರ ಯಾವ ರೀತಿ ರೈತರ ನೆರವಿಗೆ ಬರುತ್ತದೆಂಬ ಬಗ್ಗೆ ನೀವು ಇಲ್ಲಿ ಹೇಳಬೇಕು.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :– ಮಾನ್ಯ ಉದಾಸಿಯವರೆ, ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ತಾವು ಉತ್ತರದಲ್ಲಿ ಏನು ಹೇಳಿದ್ದೀರಿ, ಯಾವ್ಯಾವ ಕಾರ್ಖಾನೆಗಳು ಲೈಸನ್ಸ್ ತೆಗೆದುಕೊಳ್ಳುತ್ತದೋ, ಆ ವೇಳೆಯಲ್ಲಿ ಕಬ್ಬಿನ ಕ್ಷೇತ್ರವನ್ನು ಗುರುತಿಸಬೇಕೆಂದು ಹೇಳಿರುತ್ತಾರೆ. ಈಗ ಸಹಕಾರಿ ಸಂಘದಲ್ಲಿ ಯಾವ ಕಾರ್ಖಾನೆಗಳು ನೋಂದಣಿಯಾಗಿವೆ. ಅಲ್ಲಿ field man ಇದ್ದಾನೆ, ಮತ್ತೆ Cane Development Officer ಇರುತ್ತಾರೆ, ಅವರು ಆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವಂಥ ಹಳ್ಳಿಗಳಿಗೆಲ್ಲಾ ಹೋಗಿ, ಅಲ್ಲಿ ಲವಣೆ ಎಷ್ಟು? ಆ ಎಲ್ಲಾ ಕಬ್ಬನ್ನು ಎಕರೆವಾರು ಮತ್ತು ಅದನ್ನು ಯಾವ ಕಡೆಯಿಂದ ನೋಂದಣಿ ಮಾಡಿಕೊಂಡಿರುತ್ತಾರೋ, ಅದನ್ನು ನೀವು ಹೇಳಿದರೆ ಆಗಬೇಕು. ಈಗಾಗಲೇ ಅದು ಕಾರ್ಯರೂಪದಲ್ಲಿ ಇದೆ. ಈಗ ಮಾನ್ಯ ಪ್ರಕಾಶ್ ಖಂಡ್ರೆಯವರಿಗೂ ಗೊತ್ತಿದೆ, ಅವರು ಹೇಳಿದರು. ಯಾವ ದಿನಾಂಕದಲ್ಲಿ ಕಬ್ಬನ್ನು ಕತ್ತರಿಸುತ್ತಾರೋ, ಅದೇ ವರ್ಷ ಮುಂದಿನ ತಾರೀಖಿಗೆ ಕಬ್ಬನ್ನು ಕತ್ತರಿಸಲು ಬಿಡುತ್ತಾರೆ. ಅದು ಅಲ್ಲದೇ ರೈತರ bank account ಕೂಡ ಆ ಕಾರ್ಖಾನೆಯಲ್ಲಿ ಇರುತ್ತದೆ. ಕಬ್ಬು ಹೋದ 15 ದಿವಸಗಳಲ್ಲಿ ಅವರು ಎಷ್ಟು ಕಬ್ಬನ್ನು ಕಾರ್ಖಾನೆಗೆ ಪೂರೈಸಿರುತ್ತಾರೆ, ಆ ದುಡ್ಡನ್ನು ಬ್ಯಾಂಕ್‌ಗೆ ಜಮಾ ಮಾಡುವ ವ್ಯವಸ್ಥೆ ಇದೆ. ತಾವು ಅದನ್ನು ಇನ್ನು ಮಾಡಿಲ್ಲವೆಂದರೆ ಹೇಗೆ? ಈಗ ಎಲ್ಲಾ ಕಾರ್ಖಾನೆಗಳಲ್ಲಿ ಎಷ್ಟು ಎಕರೆ ಲವಣೆ ಇದೆಯೆಂಬ ಬಗ್ಗೆ ನೊಂದಣಿಯಾಗಿರುತ್ತದೆ. ಅದರ ಬಗ್ಗೆ ತಾವು ಇನ್ನು ಆಗಿಲ್ಲವೆಂದರೆ, ನಾವು ಹೇಗೆ ಒಪ್ಪಿಕೊಳ್ಳುವುದು.

ಶ್ರೀ ಬಸವರಾಜ ರಾಯರೆಡ್ಡಿ :– ಮಾನ್ಯ ಉದಾಸಿಯವರೆ, ತಮ್ಮ ಜಾಣ್ಮೆಯ ಉತ್ತರ ಗೊತ್ತಾಯಿತು. ಈಗ ದಯಮಾಡಿ ಹೇಳಿಬಿಡಿ, ನನ್ನದು ಒಂದು clarification, ನಾನು 500 ಟನ್ ಕಬ್ಬನ್ನು ಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ :– ಮಾನ್ಯ ಬಸವರಾಜ ರಾಯರೆಡ್ಡಿಯವರೆ ಒಂದು ನಿಮಿಷ ನಾನು ಮಾತನಾಡುತ್ತೇನೆ. ಈಗ ನಿಮ್ಮಿಂದ ಏನು ನಿರೀಕ್ಷಣೆ ಮಾಡಿದ್ದೆವು. ತಾವು ರೈತರ ರಕ್ಷಣೆಗೆ ಬರುತ್ತೀರೆಂದು, ತಾವು ರೈತರ ರಕ್ಷಣೆಗೆ ಬರಬೇಕೆಂದು ಹೇಳಿದೆವು. ತಾವು ಅಂಕಿ ಅಂಶಗಳನ್ನು ಹೇಳಿದಿರಿ, ಆಕಾಶ ತೋರಿಸಿದ್ದೀರಿ, ಭೂಮಿಗೆ ಇಳಿದಿರಿ, ಚಂದ್ರಲೋಕಕ್ಕೆ ಹೋದಿರಿ, ನೀವು ರೈತರ ಪರ ಬರಲಿಲ್ಲ. ನಾವು ಈಗ ಕಾಯುತ್ತಿದ್ದೇವೆ, ನೀವು ರೈತರ ಪರ ಬರುತ್ತೀರೇನೋ, ಎಂದು ಈಗ ನಿಮ್ಮ ಉತ್ತರದಿಂದ ರೈತರಿಗೆ ಏನು ಆಗಲಿಲ್ಲ. ನಿಮ್ಮ ಉತ್ತರದಿಂದ ಪ್ರಾಮಾಣಿಕವಾಗಿ ರೈತರಿಗೆ ಏನು ಆಗಲಿಲ್ಲ, ನಿಮ್ಮ ಉತ್ತರದಿಂದ ಖಂಡಿತ ರೈತರಿಗೆ ಯಾವುದೇ ಒಂದು ಅನುಕೂಲವಾಗಿಲ್ಲ, ಅದು ಸ್ಪಷ್ಟ. ನಾವು ತಮಗೆ ಮತ್ತೆ ಒತ್ತಾಯ ಮಾಡುತ್ತಿದ್ದೇವೆ. ತಾವು ರೈತರ ಬಗ್ಗೆ ಏನು ಹೇಳುತ್ತೀರಾ? ಹೇಳಿ.

ಶ್ರೀ ಎ.ಬಿ. ಪಾಟೀಲ್ :– ಮಾನ್ಯ ಚೇರ್ಮನ್, ಈಗ ಸರ್ಕಾರ ಹೇಳುತ್ತಿದೆ, ಈಗ ಎಕ್ಸಸ್ ಕಬ್ಬು ಏಕೆ ಉಳಿಯಿತು? ಕಾರ್ಖಾನೆಗಳನ್ನು ಪ್ರಾರಂಭ ಮಾಡಲಿಲ್ಲ. ಏಕೆ ಪ್ರಾರಂಭ ಮಾಡಲಿಲ್ಲ. ಇದಕ್ಕೆ ಯಾರು ಜವಾಬ್ದಾರರು? ಇದು ನಿಜವಲ್ಲವೇ? ಈ ಡಿಲೇಯಿಂದ ಮತ್ತೆ ಏಪ್ರಿಲ್, ಮೇ, ಜೂನ್ ತಿಂಗಳಿಗೆ ಹೋಗಬೇಕು. ಈಗ ಮೇ ತಿಂಗಳಿಗೆ ಹೋದರೂ ಸಾಧ್ಯವಿಲ್ಲ. ನಮ್ಮಲ್ಲಿ ಪುಕ್ಕಟೆಯಾಗಿ ಕಬ್ಬನ್ನು ಕೊಡುತ್ತಾರೆ, ಪುಕ್ಕಟೆಯಾಗಿ ತೆಗೆದುಕೊಂಡು ಹೋಗುತ್ತೀರಾ? ನಮ್ಮಲ್ಲಿ ಬೇಕಾದಷ್ಟು ಟನ್ ಕಬ್ಬು ಇದೆ. ಅದನ್ನು ಸುಡುವುದಕ್ಕೂ ಬರುವುದಿಲ್ಲ. ಆ ಪರಿಸ್ಥಿತಿ ಇದೆ. ಇದಕ್ಕೆ ಮಾನ್ಯ ಮಂತ್ರಿಯವರು ಉತ್ತರವನ್ನು ಹೇಳಬೇಕು.

ಶ್ರೀ ಕೆ. ಶ್ರೀನಿವಾಸ ಗೌಡ :– ಮಾನ್ಯ ಚೇರ್ಮನ್‌ರವರೆ, ಎಲ್ಲರೂ ಕೇಳುತ್ತಿರುವಂಥಾದ್ದು ಎರಡು ವಿಷಯಗಳು, ಎಕ್ಸಸ್ ಕಬ್ಬನ್ನು ಏನು ಮಾಡುತ್ತೀರಿ? ರೈತರಿಗೆ ರೇಟ್ ಕೊಡುವುದರಲ್ಲಿ ಏನು ಮಾಡುತ್ತೀರಿ? ಈ ಎರಡು ಪ್ರಶ್ನೆಗೆ ತಾವು ಉತ್ತರವನ್ನು ಮಾನ್ಯ ಮಂತ್ರಿಯವರು ಕೊಟ್ಟರೆ ನಾವು ಇನ್ನೇನು ಮಾತನಾಡುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ :– ಮಾನ್ಯ ಚೇರ್ಮನ್‌ರವರೆ, ನಾನು ಒಂದು ಸ್ಪಷ್ಟೀಕರಣ ಕೇಳುತ್ತೇನೆ. ತಾವು ರೈತರಿಗೆ ಏನಾದರೂ ಪರಿಹಾರವನ್ನು ಕೊಡುತ್ತಿರೊ ಹೇಗೆ? ಕನಿಷ್ಟ ದರದಲ್ಲಿ ಟನ್‌ಗೆ ಇಷ್ಟು ಎಂದು ಪರಿಹಾರವನ್ನು ಕೊಡುತ್ತಿರೊ ಹೇಗೆ? ಎಂದು ಒಂದು. ಎರಡನೆಯದಾಗಿ ಮುಂದಿನ ವರ್ಷದಿಂದ ಇದಕ್ಕೆ ಅವರ್ತನಿಧಿಯನ್ನು ಮಾಡಿ, ಈ ರೀತಿ ಕಬ್ಬಿನ ಬೆಲೆ ಇಳಿದಾಗ ಮತ್ತೆ ಕಬ್ಬನ್ನು ಖರೀದಿ ಮಾಡದೇ ಇರುವ ಪ್ರಸಂಗ ಇದ್ದಾಗ ಸರ್ಕಾರವೇ ಈ ಆವರ್ತನಿಧಿಯ ಮೂಲಕ ತೆಗೆದುಕೊಳ್ಳುವುದಕ್ಕೆ ಏನಾದರೂ ಆವರ್ತನಿಧಿಯನ್ನು ಮಾಡುತ್ತಿರಾ ಎಂಬುದನ್ನು ಹೇಳಬೇಕಾಗುತ್ತದೆ.

ಶ್ರೀ ಬಿ.ಆರ್. ಪಾಟೀಲ್ :- ಮಾನ್ಯ ಚೇರ್ಮನ್‌ರವರೆ, ಈಗ ಬಜೆಟ್ ಮೇಲೆ ಪೂರಕ ಅಂದಾಜನ್ನು ಮಂಡನೆ ಮಾಡಿ ಚರ್ಚೆ ಮಾಡುವಾಗ ಅನೇಕ ಜನ ಸದಸ್ಯರು ಈ ಸದನದಲ್ಲಿ ಕಬ್ಬಿನ ಬೆಳೆಗೆ ಬಂದಂಥ ಕಷ್ಟದ ಬಗ್ಗೆ ಮತ್ತೆ ಅದನ್ನು ನಿವಾರಣೆ ಮಾಡಬೇಕೆಂದು ಹೇಳಿ, ಬೇಡಿಕೆಯನ್ನು ಇಟ್ಟು ಮಾತನಾಡಿದ್ದು, ದಾಖಲೆಯಲ್ಲಿ ಇದೆ. ಮಾನ್ಯ ಉಪಮುಖ್ಯಮಂತ್ರಿಯವರು ಉತ್ತರವನ್ನು ಕೊಡುವಾಗ ಇದರ ಬಗ್ಗೆ ಒಂದು ಮಾತನ್ನು ಕೂಡ ಪ್ರಸ್ತಾಪ ಮಾಡಿಲ್ಲ. ನಾವು ಕೊನೆಗೆ ಸದನದ ಬಾವಿಗೆ ಬಂದು ಪ್ರತಿಭಟನೆಯನ್ನು ಮಾಡಿದೆವು. ಇವತ್ತು ಮಾನ್ಯ ಉಪ ಮುಖ್ಯಮಂತ್ರಿಯವರು ಸದನದಲ್ಲಿ ಇದ್ದಾರೆ. ಇವತ್ತು ಮಾನ್ಯ ವಾಟಾಳ್ ನಾಗರಾಜುರವರು ಕೇಳುತ್ತಿದ್ದಾರೆ. ನಮಗೆ ಹೈ ಪವರ್ ಕಮಿಟಿ ಆಗಬೇಕು, ಆಗಿಲ್ಲ. ಅದು ತಪ್ಪಿ ಹೋಗಿದೆ. ಅನೇಕ ವಿಷಯಗಳು ಆಗಿವೆ. ಇವತ್ತು ಪರಿಹಾರವನ್ನು ಕೊಡುವುದಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ? ಮತ್ತು ಒಂದು ಮಾತನ್ನು ಕೇಳಬಯಸುತ್ತೇನೆ. ಲಾಭ ಜಾಸ್ತಿಯಾದಾಗ, ನೀವು ರೈತರಿಗೆ ಏನಾದರು ಜಾಸ್ತಿ ಬೆಲೆಯನ್ನು ಕೊಟ್ಟಿದ್ದೀರಾ? ಇವತ್ತು ಹಾನಿಯಾಗುತ್ತಿದೆಯೆಂದು ಅವರಿಗೆಲ್ಲಾ ನೀವು ಟೋಪಿಯನ್ನು ಹಾಕುತ್ತೀರಾ? ನೀವು ವಿಪರೀತ ಲಾಭ ಮಾಡಿಕೊಂಡಿದ್ದೀರಿ. ನೀವು ಲಾಭ ಮಾಡಿಕೊಂಡಾಗ ರೈತರಿಗೆ ಹೆಚ್ಚು ಬೆಲೆಯನ್ನು ಕೊಡಲಿಲ್ಲ. ಇವತ್ತು ಅವರಿಗೆ ಹಾನಿಯಾಗುತ್ತದೆಂದು ತಿಳಿದುಕೊಂಡು ರೈತರಿಗೆಲ್ಲಾ ಹಾಳು ಮಾಡುತ್ತಿದ್ದಿರಲ್ಲಾ, ಇದು ಯಾವ ನೀತಿ? ಈ ಬಗ್ಗೆ ಮಾನ್ಯ ಮಂತ್ರಿಯವರು ಉತ್ತರ ಕೊಡಬೇಕು. ನೀವು ಎಷ್ಟು incentive ಕಬ್ಬಿಗೆ ಕೊಡುತ್ತೀರಿ, ಬೆಲ್ಲಕ್ಕೆ ಎಷ್ಟು incentive ಕೊಡುತ್ತೀರೆಂಬ ಬಗ್ಗೆ ನೇರವಾಗಿ ಹೇಳಬೇಕು.

ಶ್ರೀ ಡಿ.ಆರ್. ಪಾಟೀಲ್ :- ಮಾನ್ಯ ಚೇರ್ಮನ್‌ರವರೆ, ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಸದನಕ್ಕೆ ಬಂದಿದ್ದಾರೆ, ದಯವಿಟ್ಟು ತಾವು ಕೇಳಬೇಕು. ಕಬ್ಬು ಬೆಳೆಗಾರರ ಪರಿಸ್ಥಿತಿ ಬಹಳ ಗಂಭೀರವಾಗಿದೆಯೆಂಬುದು ತಮಗೂ ಗೊತ್ತಿದೆ. ದಯವಿಟ್ಟು ಮಹಾರಾಷ್ಟ್ರ, ಸರ್ಕಾರ ಕೊಟ್ಟಂಥ concession ಅನ್ನು ತಾವು purchase tax exemption ಮಾಡಿ, ಮತ್ತೆ recovery ಎಲ್ಲಿ ಕಡಿಮೆಯಾಗುತ್ತದೆ, ಅಲ್ಲಿ 1% recovery ಕಡಿಮೆ ಆಗುತ್ತದೆ, ಅದಕ್ಕೆ ಅಲ್ಲಿ 100 ರೂಪಾಯಿಗಳನ್ನು ಕೊಡುತ್ತಿದ್ದಾರೆ. ನೀವು ಕೊಡುವುದಕ್ಕೆ ಒಪ್ಪಬೇಕೆಂದು ಕೇಳುತ್ತೇನೆ, ಮತ್ತೆ ಈ industry ಯಿಂದ, ರೈತರಿಂದ ಸರ್ಕಾರದ ಖಜಾನೆಗೆ ಸಾಕಷ್ಟು ಹಣ ಇಲ್ಲಿಯವರೆಗೂ ಬಂದಿದೆ. ಈಗ ಅವರು ಬಹಳ ತೊಂದರೆಯಲ್ಲಿ ಇದ್ದಾರೆ. ನೀವು ಅವರಿಗೆ ಈಗ ಸಹಾಯಕ್ಕೆ ನಿಂತರೆ, ಅವರ ಆಶೀರ್ವಾದ ನಿಮ್ಮ ಮೇಲೆ ಇರುತ್ತದೆ. ಆದುದರಿಂದ ದಯವಿಟ್ಟು ನೀವು ಇದರಲ್ಲಿ ಸ್ವಲ್ಪ ದೊಡ್ಡ ಮನಸ್ಸು ಮಾಡಿ, ಅವರ ಈ ಕಠಿಣ ಪರಿಸ್ಥಿತಿಯಲ್ಲಿ ಅವರ ಸಹಾಯಕ್ಕೆ ನೀವು ಬರಬೇಕೆಂದು ನಾನು ಮಾನ್ಯ ಯಡಿಯೂರಪ್ಪನವರನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ :– ಮಾನ್ಯ ಚೇರ್ಮನ್‌ರವರೆ, ನಾನು ಎರಡು, ಮೂರು ವಿಚಾರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಹೇಳುವುದೇನೆಂದರೆ, ಈಗ ಇರುವಂಥ 60 ಲಕ್ಷ ಟನ್ ಎಕ್ಸಸ್ ಕಬ್ಬನ್ನು within stipulated time ನೀವು ನುರಿಸುತ್ತೀರಾ, ಇಲ್ಲವಾ? ಎಂಬುದು ಮೊದಲನೆಯ ಪ್ರಶ್ನೆ. ಎರಡನೆಯದಾಗಿ purchase tax exemption ಕೊಡಬೇಕಾಗಿರುವಂಥಾದ್ದು ನಿಮ್ಮ ಧರ್ಮ, ಅದನ್ನು ಬೆಳಗಾಂ ಅಧಿವೇಶನದಲ್ಲಿ ನಿಮ್ಮ Sugar Minister ರವರೆ, ಒಪ್ಪಿಕೊಂಡಿದ್ದಾರೆ. ನಾವು ಏನಾದರೂ ಮಾಡಿ ಬಜೆಟ್‌ನಲ್ಲಿ ಕೊಡಿಸುತ್ತೇವೆಂದು ಹೇಳಿದ್ದರು. ಅದರ ಬಗ್ಗೆ ಇವತ್ತು ಒಂದು ಮಾತನ್ನು ತಾವು ಆಡುತ್ತಿಲ್ಲ. ಮೂರನೆಯದು co operative sugar mills ಅನ್ನು ನೀವು privatize ಮಾಡಿ ಕೊಟ್ಟಿದ್ದೀರಿ. ಆ ಲೀಜ್ ಅಮೌಂಟ್ ನಿಮಗೆ ಬಂತಲ್ಲಾ, ಆ concerned banks ಗೆ ಕೊಡಬೇಕಲ್ಲಾ, DCC Banks ಇರಲಿ, Apex Bank ಇರಲಿ, ಅಲ್ಲಿಂದ ದುಡ್ಡನ್ನು ತಂದಿದ್ದೀರಿ, ಆ ದುಡ್ಡನ್ನು ಅವರಿಗೆ ಕೊಡಲಿಲ್ಲ. ದುರ್ದೈವಕ್ಕೆ ಆ ದುಡ್ಡು ಎಲ್ಲಿ ಇದೆಯೋ ನಿಮಗೆ ಗೊತ್ತು. ನಾಲ್ಕನೆಯದಾಗಿ ನನ್ನ ಜಿಲ್ಲೆಯಲ್ಲಿ ನವೆಂಬರ್ ತಿಂಗಳಿನಿಂದ ಕಬ್ಬನ್ನು ತೆಗೆದುಕೊಂಡಿದ್ದಾರೆ. ನಿಮ್ಮಲ್ಲಿರುವ statement ನಿಮ್ಮ Sugar Director ರವರದ್ದು ನನ್ನಲ್ಲಿ ಇದೆ. ಇದುವರೆಗೂ ಶಿವಕುಮಾರ್ ಶುಗರ್ ಫ್ಯಾಕ್ಟರಿಯವರು ಹನ್ನೆರಡು ಕೋಟಿ ರೂಪಾಯಿಗಳ payment ಕೊಡಬೇಕಾಗಿತ್ತು. ಇದುವರೆಗೂ 10 ಪೈಸೆಯನ್ನು ಕೊಟ್ಟಿಲ್ಲ. ಇದು ನಿಮ್ಮ ಕಾರ್ಯವ್ಯಾಪ್ತಿಯಲ್ಲಿ ಇಲ್ಲವೇ? ಸರ್ಕಾರದಲ್ಲಿ ಇಲ್ಲವಾ? ಅವನ ಮೇಲೆ ನಿಮ್ಮ ನಿಯಂತ್ರಣ ಏನು ಇಲ್ಲವಾ? ಆ ಜಿಲ್ಲೆಯ ರೈತರು ಏನು ಶೋಷಣೆಗೆ ಒಳಗಾಗಿದ್ದಾರೆಂಬುದು ನಿಮಗೆ ಗೊತ್ತಿಲ್ಲವಾ? ನಿಮ್ಮ ಜಿಲ್ಲಾಧಿಕಾರಿಯ ಮುಂದೆ ಹೋಗಿ ಪ್ರತಿಭಟನೆ ಮಾಡಿದ್ದೇವೆ, ಪೊಲೀಸರ ಮುಂದೆ ಧರಣಾ ಮಾಡಿದ್ದೇವೆ, ಹೊಡೆಸಿಕೊಂಡಿದ್ದೇವೆ. Section -144 ವಿಧಿಸಿದ್ದೀರಿ, ಲಾಠಿ ಚಾರ್ಜ್ ಆಯಿತು. ಅಂಥಾದ್ದರಲ್ಲಿ ನಿಮ್ಮ ಇಲಾಖೆಯ ಶುಗರ್ ಡೈರಕ್ಟರ್‌ರವರಿಗೆ ಒಂದು complaint ಕೊಟ್ಟೆವು. ಇವರು ಪತ್ರ ಬರೆದು ಮಾರ್ಚ್ ಒಳಗೆ ಒಂದು action ತೆಗೆದುಕೊಳ್ಳಲಿಲ್ಲ. ಈ ಎರಡು ಪತ್ರಗಳು ನನ್ನ ಬಳಿ ಇದೆ. Sugar Director ರವರಿಗೆ ಬರೆದ ಪತ್ರ ನನ್ನ ಬಳಿ ಇದೆ. ಇವರು ಮಾರ್ಚ್‌ವರೆಗೆ ಈ Sugar Director ಏನು ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಮಾರ್ಚ್‌ಗೆ ಅದೇ Factory ಯವನಿಗೆ ನನಗೆ ಪಾರ್ಟಿ ಮಾಡಲಾಗದೇ ನೀವು High Court ಗೆ ಹೋಗಿ ಎಂದು ಆದೇಶ ಕೊಟ್ಟಿದ್ದು, ಅವರು ಇರುವಂಥ ಸಕ್ಕರೆಯನ್ನು ಮಾಡಿಕೊಂಡು ಹೋದರು. ರೈತರಿಗೆ ಸರ್ಕಾರವೇ ಮೋಸ ಮಾಡಿದರೆ, ನಾಚಿಕೆ ಪಡಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಮಾನ್ಯ ಉದಾಸಿಯವರೆ, ಖಾಸಗಿ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ವಹಿಸಿಕೊಟ್ಟು ಒಳ್ಳೆಯ ತೀರ್ಮಾನವನ್ನು ತೆಗೆದುಕೊಂಡಿದ್ದೀರಿ. ಆದರೆ ಅದರಿಂದ ರೈತರಿಗೆ ಏನು ಲಾಭ ಆಯಿತು? ಕಾರ್ಮಿಕರಿಗೆ ಏನು ಆಯಿತು? ನಮ್ಮಲ್ಲಿ ಸಹಕಾರಿ ಸಂಸ್ಥೆಗಳು ಸಾಲವನ್ನು ಕೊಟ್ಟಂಥವರಿಗೆ ಏನು ಲಾಭವಾಯಿತು? ನಮ್ಮಲ್ಲಿ ಬ್ರಹ್ಮಾವರ ಸಕ್ಕರೆ ಕಾರ್ಖಾನೆಯ ಬಗ್ಗೆ particular ಆಗಿ ಹೇಳುತ್ತೇನೆ. ಸರ್ಕಾರದಿಂದ ನೀವು ರೈತರಿಗೆ, ಕಾರ್ಮಿಕರಿಗೆ, ಮತ್ತೆ ಸಹಕಾರಿ ಸಂಸ್ಥೆಗೆ ಹಣ ಕೊಡಿ, ಖಾಸಗಿಯವರು instalment ನಲ್ಲಿ ಏನು ಹಣವನ್ನು ಕೊಡುತ್ತಾರೆ. ಅದನ್ನು ನೀವು adjust ಮಾಡಿಕೊಳ್ಳಿಯೆಂದು ನಾನು ತಮಗೆ ಹೇಳುತ್ತಿದ್ದೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ :- ನಂದಿ ಕೋ-ಆಪರೇಟಿವ್ ಶುಗರ್ ಫ್ಯಾಕ್ಟರಿಯವರು ಹದಿಮೂರು ನೂರು ರೂಪಾಯಿಗಳ ರೇಟ್ ಕೊಟ್ಟರು. ನಿಮಗೆ ಗೊತ್ತಿದೆ. ಒಂದು ಕೋ-ಆಪರೇಟಿವ್ ಶುಗರ್ ಫ್ಯಾಕ್ಟರಿಯವರು ಹದಿಮೂರು ನೂರು ರೂಪಾಯಿಗಳ ಧಾರಣೆಯನ್ನು ಕೊಡಬಹುದು ಎನ್ನುವುದನ್ನು ಸಿದ್ಧ ಮಾಡಿ ತೋರಿಸಿದ್ದಾರೆ. ಅಂಥವರನ್ನೂ ಉಳಿಸುವುದಕ್ಕೆ ನೀವು ತಯಾರಿಲ್ಲ. Last year, ನಂದಿ ಶುಗರ್ ಫ್ಯಾಕ್ಟರಿಯವರು ಹದಿಮೂರು ನೂರು ರೂಪಾಯಿಗಳ final payment ಮಾಡಿರತಕ್ಕಂಥಾದ್ದು ಇದೆ. ಇವತ್ತು ನೀವು ಎಲ್ಲಾ ಕೋ-ಆಪರೇಟಿವ್ ಶುಗರ್ ಫ್ಯಾಕ್ಟರಿಗಳನ್ನು ಮುಚ್ಚಿ, ಅವುಗಳನ್ನು ಪ್ರೈವೇಟ್‌ನವರ ಕೈಗೆ ಕೊಟ್ಟು, ಕನಿಷ್ಟ ಒಂದು ಸಾವಿರ ರೂಪಾಯಿಗಳು ಕೊಡುತ್ತಿದ್ದುದನ್ನು bargain ಮಾಡಿ ಆರುನೂರು ರೂಪಾಯಿಗಳಿಗೆ ತಂದು, ಅಷ್ಟನ್ನು ಕೊಡಿ ಎಂದು ಹೇಳತಕ್ಕಂಥಾದ್ದು ಆಗಿದೆ. ಅಷ್ಟು ಕಡಿಮೆಗೆ ತೆಗೆದುಕೊಂಡರೂ ಮತ್ತೆ 2-3 ಟನ್‌ಗಳನ್ನು Weigh Bridge ನಲ್ಲಿ ಹೊಡೆಯುತ್ತಾರೆ. ನಿಮಗೆ ಈಗಲಾದರೂ ಕಣ್ಣು ತೆರೆಯತಕ್ಕಂಥ ಅವಶ್ಯಕತೆ ಬೀಳಲಿಲ್ಲ ಎಂದರೆ ಇದು ದುರ್ದೈವ.

ಶ್ರೀ ವಾಟಾಳ್ ನಾಗರಾಜ್ :- ಹೆಚ್ಚುವರಿಯಾಗಿರುವ 60 ಲಕ್ಷ ಟನ್ ಕಬ್ಬಿನ ಪರಿಸ್ಥಿತಿ ಏನು ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು. ದರ ಕುಸಿತದಿಂದ ರೈತರು ಕಂಗಾಲಾಗಿದ್ದಾರೆ. ಅವರಿಗೆ ನಿಮ್ಮ ನೆರವೇನು ಎನ್ನುವುದನ್ನು ನೇರವಾಗಿ ಹೇಳಬೇಕು. ಕಬ್ಬು ಸಾಗಾಣಿಕೆ, ಸಬ್ಸಿಡಿ, ಖರೀದಿ ತೆರಿಗೆ ಇವುಗಳ ಬಗ್ಗೆ ನಿಮ್ಮ ವಿನಾಯಿತಿ ಏನು ಎನ್ನುವುದನ್ನು ಸ್ಪಷ್ಟಪಡಿಸಬೇಕು. ಕಬ್ಬು ಬೆಳೆವ ರೈತರಿಗೆ ಒಂದು ಟನ್ನಿಗೆ ನೀವು ಏನು ಸಬ್ಸಿಡಿಯನ್ನು ಕೊಡುತ್ತೀರಿ ಎನ್ನುವುದನ್ನೂ ಸ್ಪಷ್ಟಪಡಿಸಬೇಕು. ಅಲ್ಲದೇ, ಬೆಂಬಲ ಬೆಲೆ, ಹಳೆಯ ಬಾಕಿ ಇರತಕ್ಕಂಥಾದ್ದು ಇವುಗಳೆಲ್ಲವನ್ನೂ ನೀವು ಹೇಳಬೇಕು. ಅದನ್ನು ಬಿಟ್ಟು ನೀವು ಸುಮ್ಮನೇ ಸುತ್ತಿ ಬಳಸಿ ಮಾತನಾಡಿದರೆ ಆಗುವುದಿಲ್ಲ.

ಶ್ರೀ ಎ.ಬಿ. ಪಾಟೀಲ್ :– ಪ್ರಾರಂಭದಲ್ಲಿ ಕಾರ್ಖಾನೆಗಳು ಪ್ರಾರಂಭವಾದಾಗ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟರು. ಒಂದು ಸಾವಿರ ರೂಪಾಯಿಗಳನ್ನು ನಾವು ತೆಗೆದುಕೊಂಡಿದ್ದೇವೆ. ಈಗ ಅದು 600–700 ರೂಪಾಯಿಗಳಿಗೆ ಬಂದಿದೆ. ಇದಕ್ಕೆ ಯಾರು ಜವಾಬ್ದಾರರು? ಒಂದು ಸಹಕಾರಿ ಸಕ್ಕರೆ ಕಾರ್ಖಾನೆಯವರು ಹದಿಮೂರು ನೂರು ರೂಪಾಯಿಗಳನ್ನು ಕೊಟ್ಟರು ಎಂದು ಶಿವಾನಂದ ಪಾಟೀಲ್‌ರವರು ಹೇಳಿದರು. ಪಕ್ಕದ ರಾಜ್ಯವಾದ ಮಹಾರಾಷ್ಟ್ರದಲ್ಲಿ ಎಷ್ಟು ಕೊಟ್ಟಿದ್ದಾರೆ ಎಂದು ನೋಡಿ. ಅಲ್ಲಿ ಸಹಕಾರಿ ಕಾರ್ಖಾನೆಯವರು ಹದಿಮೂರು ನೂರು ರೂಪಾಯಿಗಳನ್ನು ಕೊಟ್ಟರು. ಅವರು ಹೇಗೆ ಕೊಟ್ಟರು?

ಚೇರ್ಮನ್ :– ಆಯಿತು. ಇನ್ನು clarification ಇಲ್ಲ. ಮಾನ್ಯ ಸಚಿವರು ಉತ್ತರಿಸಬೇಕು. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ.ವೈ. ಪಾಟೀಲ್ (ಅಫ್ಜಲ್‌ಪುರ್) :– ಮಾನ್ಯ ಅಧ್ಯಕ್ಷರೇ, ನನ್ನ ಅಫ್ಜಲ್‌ಪುರ್ ಕ್ಷೇತ್ರದಲ್ಲಿ ಐದೂವರೆ ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆದಿದೆ. ಎರಡು ಸಕ್ಕರೆ ಕಾರ್ಖಾನೆಗಳಿದ್ದರೂ ಕೂಡ ಅರ್ಧದಷ್ಟು ಕಬ್ಬನ್ನೂ ಅರೆದಿಲ್ಲ. ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಅದಕ್ಕಾಗಿ, ಸರ್ಕಾರ ಮಧ್ಯೆ ಪ್ರವೇಶಿಸಿ ಬೆಲ್ಲ ಮಾಡುವುದಕ್ಕೆ ಸಬ್ಸಿಡಿ ಕೊಟ್ಟು ಅವರಿಗೆ ಅನುಕೂಲ ಮಾಡಿಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ, ಬೆಳೆದಿರುವಂಥ ಆ ಕಬ್ಬನ್ನು ಸುಡಬೇಕಾಗುತ್ತದೆ. ಡಿ.ಸಿ.ಯವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಎಷ್ಟು ಮೀಟಿಂಗ್‌ಗಳನ್ನು ಮಾಡಿದರೂ ಕೂಡ ಕಾರ್ಖಾನೆಯವರು ಯಾವುದಕ್ಕೂ ಬಗ್ಗಲಿಲ್ಲ. ರೇಟೂ ಕೂಡ ಕಡಿಮೆ ಮಾಡಿದ್ದಾರೆ ಮತ್ತು ಕಬ್ಬು ಅರೆಯುವುದನ್ನೂ ಕೂಡ ಪೂರ್ತಿ ಮಾಡಿಲ್ಲ. ಬೆಳೆದುದರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಕಬ್ಬು ನಮ್ಮ ಕ್ಷೇತ್ರದಲ್ಲಿ ಹಾಗೇ ಉಳಿದಿದೆ. ಅದನ್ನು ಏನು ಮಾಡಬೇಕು ಎನ್ನುವುದು ಅರ್ಥವಾಗುತ್ತಿಲ್ಲ. ರೈತರು ಬಹಳ ತೊಂದರೆಯಲ್ಲಿದ್ದಾರೆ. ಅದಕ್ಕಾಗಿ, ಸರ್ಕಾರ ಮಧ್ಯೆ ಪ್ರವೇಶಿಸಿ ಏನಾದರೂ ಸಹಾಯ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಚೇರ್ಮನ್ :– ಸಾಕಷ್ಟು ಅವಕಾಶ ಕೊಟ್ಟಿದ್ದೇವೆ, ಇನ್ನು ಉತ್ತರ ಕೊಡಿ.

ಶ್ರೀ ಸಿ.ಎಂ. ಉದಾಸಿ :– ಶಿವಾನಂದ ಪಾಟೀಲ್‌ರವರು ಸಕ್ಕರೆ ಕಾರ್ಖಾನೆಯನ್ನು ಉಚ್ಚ ನ್ಯಾಯಾಲಯದಲ್ಲಿ ರಿಟ್ ಮಾಡಿ, ಮುಕ್ತ ಮಾರುಕಟ್ಟೆಯಲ್ಲಿ ಸಕ್ಕರೆ ಮಾರಾಟ ಮಾಡುವುದರ ಸಲುವಾಗಿ....

(ಗೊಂದಲ)

ಶ್ರೀ ಎ. ಕೃಷ್ಣಪ್ಪ :- ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ ದಯಮಾಡಿ ಈ ಕಡೆ ನೋಡಿ.

(ಗೊಂದಲ)

ಚೇರ್ಮನ್ :- ತಾವು ನಂತರ ಕೇಳಿ. ಈಗಾಗಲೇ ಸಾಕಷ್ಟು ಜನ ಕೇಳಿದ್ದಾರೆ. ಅವರು ಉತ್ತರ ಹೇಳಲಿ. ಎಲ್ಲರೂ ಮಾತನಾಡಬೇಕು ಎಂದರೆ ಹೇಗೆ?

(ಗೊಂದಲ)

ಶ್ರೀ ಸಿ.ಎಂ. ಉದಾಸಿ :- ರೈತರಿಗೆ ಅವರು payment ಮಾಡಬೇಕಾದರೆ condition ಹಾಕಿ ಕೊಡುತ್ತಾರೆ.

(ಗೊಂದಲ)

ಶ್ರೀ ಶಿವಾನಂದ ಎಸ್. ಪಾಟೀಲ್ :- ಹೈ ಕೋರ್ಟ್ ಆರ್ಡರ್ ನನ್ನ ಹತ್ತಿರ ಇದೆ.

ಶ್ರೀ ಎ. ಕೃಷ್ಣಪ್ಪ :- ಒಂದೇ ಒಂದು clarification ಅಷ್ಟೇ. ನಾವೇನು ಡಿಬೇಟ್ ಮಾಡುವುದಿಲ್ಲ.

ಚೇರ್ಮನ್ :- ಈಗ ಅವರು ಉತ್ತರ ಕೊಡಲಿ. ನಂತರ ತಾವು clarification ಕೇಳಿ.

ಶ್ರೀ ಎ. ಕೃಷ್ಣಪ್ಪ :- ಈಗ ಅವರು reply ಮಾಡುತ್ತಿದ್ದಾರೆ. ಅದಕ್ಕೂ ಮೊದಲು ಒಂದೇ ಒಂದು clarification ಕೇಳುತ್ತೇನೆ. ನಾನು ಏನು ಹೇಳುತ್ತೇನೆ ಎಂದರೆ, ಶಿವಾನಂದ ಪಾಟೀಲರು ಹೇಳಿದ ಹಾಗೆ.....

(ಗೊಂದಲ)

ಚೇರ್ಮನ್ :- ತಮಗೆ ನಂತರ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಸಿ.ಎಂ. ಉದಾಸಿ :- Specific ಆಗಿ order ಕೊಡುತ್ತಾರೆ. Cane crushing ಸಲುವಾಗಿಯೇ ಆ ಹಣವನ್ನು ಉಪಯೋಗ ಮಾಡಬೇಕು ಎಂದು ಹೇಳುತ್ತಾರೆ. ಒಂದು ವೇಳೆ ಅವರು ಅದನ್ನು ಮಾಡದಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಸಲುವಾಗಿ ಸೂಕ್ತ ಕ್ರಮಕ್ಕಾಗಿ ಎಂದು ಇರುವುದರಿಂದ, ಕ್ರಮ ತೆಗೆದುಕೊಳ್ಳುವ ಕೆಲಸ ಮಾಡಲೂ ಅವಕಾಶವಿದೆ. ಅದರ ಜೊತೆಗೆ, ದರ ಗೊತ್ತುಪಡಿಸಬೇಕಾದಂಥ ವಿಚಾರದಲ್ಲಿ,

ನ್ಯಾಯ ಸಮ್ಮತವಾದ ಬೆಲೆ ಕೊಡುವ ಸಲುವಾಗಿ ಎಲ್ಲಾ ಕಡೆ ಒಂದೇ ರೀತಿಯ ದರವನ್ನು ಕೊಡಲಿಕ್ಕಾಗಲಿಕ್ಕಿಲ್ಲ. ವಿಭಿನ್ನ ಕಾರ್ಖಾನೆಗಳಲ್ಲಿ ಇಳುವರಿ ಮೇಲೆ ದರ ಗೊತ್ತುಪಡಿಸಬೇಕಾಗುತ್ತದೆ. ಆ ಭಾಗದವರನ್ನು ಬೇರೆ, ಈ ಭಾಗದವರನ್ನು ಬೇರೆ ಕರೆದು...

(ಗೊಂದಲ)

ಚೇರ್ಮನ್ :- ಕೃಷ್ಣಪ್ಪನವರೇ, ನಂತರ ತಮಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ಅವರು ಈಗ ಉತ್ತರ ಕೊಡುತ್ತಿದ್ದಾರೆ.

ಒಬ್ಬ ಮಾನ್ಯ ಸದಸ್ಯರು :- ಹೆಚ್ಚುವರಿ ಕಬ್ಬನ್ನು ಅರೆಸತಕ್ಕಂಥ ಕೆಲಸ ಮಾಡಿಸುತ್ತೇವೆ ಎಂದು ಅವರು ಹೇಳಲಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಈ ಸರ್ಕಾರ ಕಬ್ಬಿನ ರೈತರ ರಕ್ಷಣೆಗೆ ಬರಲಿಲ್ಲ. ಕಬ್ಬು ಬೆಳೆದಂಥ ರೈತರ ಕತ್ತಿಗೆ ನೀವು ಹಗ್ಗ ಹಾಕಿದ್ದೀರಿ. ಇದು ಸರಿಯಲ್ಲ. ನಿಮ್ಮ ಸರ್ಕಾರದ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಚೇರ್ಮನ್ :- ಈಗ ಕೃಷ್ಣಪ್ಪನವರು.

ಶ್ರೀ ಎ. ಕೃಷ್ಣಪ್ಪ :- ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ 2-3 ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. 2-3 ವಿಚಾರಗಳಲ್ಲಿ ಮಾತ್ರ ನಾನು ಅವರಿಗೆ clarification ಕೇಳುತ್ತೇನೆ. ಹಿಂದಿನ ಸರ್ಕಾರ ಯಾವ ಕಾರ್ಖಾನೆಗಳಿಗೂ guarantee ಯನ್ನು ಕೊಡಲಿಲ್ಲ ಎನ್ನುವ ಮಾತನ್ನು ಮಂತ್ರಿಗಳು ಹೇಳಿದ್ದಾರೆ. ಅದು records ಗೆ ಹೋಗಿದೆ. ನನಗೆ ಜ್ಞಾಪಕವಿರುವ ಪ್ರಕಾರ, ನಾವು 6 ರಿಂದ 8 ಫ್ಯಾಕ್ಟರಿಗಳಿಗೆ loan raise ಮಾಡಲು guarantee ಕೊಟ್ಟಿದ್ದೇವೆ. Tax exemption ಅನ್ನೂ ಕೊಟ್ಟಿದ್ದೇವೆ. Excess ಬೆಳೆ ಬಂದಾಗ ಮಹಾರಾಷ್ಟ್ರ ಸರ್ಕಾರದ Chief Minister ರವರ ಜೊತೆ ಮಾತನಾಡಿ, ನಾವು ನಮ್ಮ production ಅನ್ನು ಅಲ್ಲಿಗೆ ಕಳುಹಿಸಿ crush ಮಾಡಿಸಿದ್ದೇವೆ. ಇದು ಇರತಕ್ಕಂಥ ಸತ್ಯವಾದ ವಿಚಾರ. ಯಾವ ಸರ್ಕಾರವೂ guarantee ಕೊಡಲು ಮುಂದೆ ಬರಲಿಲ್ಲ ಎಂದು ಅವರು ಹೇಳಿದರು. Tax exemption ಕೊಡಿ ಎಂದೇನು ಎಲ್ಲಾ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ, ಅದನ್ನು ನಾವು ಹಿಂದಿನ ಸರ್ಕಾರದಲ್ಲಿ ಮಾಡಿದ್ದೇವೆ. ಅದನ್ನು ಇವತ್ತು ಈ ಸರ್ಕಾರವೂ ಮಾಡಿ ರೈತರನ್ನು ಉಳಿಸಬೇಕು ಎಂದು ನಾನು ಧ್ವನಿ ಗೂಡಿಸುತ್ತೇನೆ.

ಶ್ರೀ ಸಿ.ಎಂ. ಉದಾಸಿ :– ಹಿಂದಿನ ಸರ್ಕಾರದವರು transportation subsidy ಕೊಡುತ್ತೇವೆ ಎಂದು ಹೇಳಿದ್ದರು, ಆದರೆ ಕೊಡಲಿಲ್ಲ. ಅದು ನನಗೆ ಗೊತ್ತಿದೆ. Bank Guarantee ಕೊಡಬೇಕಾದಂಥ ಸಂದರ್ಭದಲ್ಲಿ ಅವರಿಗೆ ಬೇಕಾದವರಿಗೆ ಕೊಟ್ಟಿರಬಹುದು. ಎಷ್ಟು ಜನರಿಗೆ ಕೊಟ್ಟಿಲ್ಲ ಎನ್ನುವುದಕ್ಕೆ ದಾಖಲೆಯನ್ನು ಪಡೆದು, ಮತ್ತೊಂದು ದಿವಸ ಅದನ್ನು ಇಲ್ಲಿ ಪ್ರಸ್ತಾಪ ಮಾಡಬೇಕು ಎಂದರೆ, ನಾನು ಪ್ರಸ್ತಾಪ ಮಾಡಲು ಬಯಸುತ್ತೇನೆ. ಇವತ್ತು ನಾನು ಒಂದು ಮಾತನ್ನು ಇಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮಹಾರಾಷ್ಟ್ರದಲ್ಲಾಗಲೀ, ಆಂಧ್ರ ಪ್ರದೇಶದಲ್ಲಾಗಲೀ ದರ ನಿಗದಿಪಡಿಸಿಲ್ಲ. ದರ ಗೊತ್ತು ಪಡಿಸಬೇಕಾದಾಗ ಕಾರ್ಖಾನೆಗಳ ಜೊತೆಗೆ meeting ಮಾಡಿ, High Power Committee ಯಲ್ಲಿ ಒಂದು meeting ಮಾಡಿ ದರ ಗೊತ್ತುಪಡಿಸುವಂಥ ಕೆಲಸವನ್ನು ಮಾಡುತ್ತೇವೆ.

(ಗೊಂದಲ)

ಶ್ರೀ ಕಾಕಾ ಸಾಹೇಬ ಪಾಂಡುರಂಗ :– High Power Committee meeting ಮಾಡುವುದು ಬೇಡ ಎಂದು ನಿಮಗೆ ಯಾರಾದರೂ ಹೇಳಿದ್ದರೇ?

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ :– ಬೇಡ ಎಂದು ಯಾರಾದರೂ ಸರ್ಕಾರಕ್ಕೆ ನಿರ್ಬಂಧ ಹಾಕಿದ್ದರೇ?

(ಗೊಂದಲ)

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ :– ನಿಮ್ಮ ಮಾತಿಗೆ ಕವಡೆ ಕಿಮ್ಮತ್ತಿಲ್ಲ.

(ಗೊಂದಲ)

(ಅನೇಕ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡುತ್ತಿದ್ದರು)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :– ಇಷ್ಟೆಲ್ಲಾ ಇದ್ದರೂ ಸಹ ಬೆಲೆ ನಿಗದಿ ಮಾಡುವುದಕ್ಕೆ State Act ಇಲ್ಲ. ಆದ್ದರಿಂದ ನಾವು ಕಾರ್ಖಾನೆಯವರನ್ನು ಕರೆಸಿ ಮಾಡಬೇಕಾಗಿದೆ.

(ಗೊಂದಲ)

ಶ್ರೀ ಕಾಕಾ ಸಾಹೇಬ ಪಾಂಡುರಂಗ :– ಮಹಾರಾಷ್ಟ್ರದಲ್ಲಿ 1,140 ರೂಪಾಯಿಗಳು ಎಂದು rate fix ಮಾಡಿದ್ದಾರೆ. Fix ಮಾಡಿಲ್ಲ ಎಂದು ಸಚಿವರು ಹೇಳುತ್ತಿದ್ದಾರೆ.

ಶ್ರೀ ಎ. ಕೃಷ್ಣಪ್ಪ :– ನಾವು charge ತೆಗೆದುಕೊಂಡಾಗ ಇದ್ದ ಬಾಕಿಯ ಬಗ್ಗೆ ನಾವು negotiation ಮಾಡಿಯೇ ಅಲ್ಲವೇ 746 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು. High Power Committee, Minister, Management ನವರನ್ನು ಕರೆಸಿ ಮಾತನಾಡಿ payment ಮಾಡಿಸಿದ್ದೆವು. Payment 6-7 ವರ್ಷದಿಂದ ಬಾಕಿ ಇದ್ದರೆ ರೈತರು ಹೇಗೆ ಉಳಿಯುತ್ತಿದ್ದರು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಇನ್ನೂ Bill ಗಳು ಇವೆ. ತಾವು Bill ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಶಿವಾನಂದ ಎಸ್. ಪಾಟೀಲ್ :- ನೀವು ಇಲ್ಲಿದ್ದಾಗ ಮಾಡಿದಂಥಾದ್ದು ನಿಮಗೆ ನೆನಪಿಲ್ಲವೇ?

(ಗೊಂದಲ)

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ :- ಹಿಂದೆ ಅದು ಮಾಡಿಲ್ಲ, ಇದು ಮಾಡಿಲ್ಲ ಎಂದು ಹೇಳಿ ನಿಮ್ಮನ್ನು ನೀವು ಸಮರ್ಥನೆ ಮಾಡಿಕೊಳ್ಳುತ್ತಿರುವಿರೇ ವಿನಃ ನೀವು ರೈತರ ನೆರವಿಗೆ ಬರುತ್ತಿಲ್ಲ. ಈ ಸರ್ಕಾರಕ್ಕೆ commitment ಇಲ್ಲ, ದಕ್ಷತೆಯೂ ಇಲ್ಲ, ನಿಮ್ಮ ಹತ್ತಿರ ಏನು Power ಸಹ ಇಲ್ಲ. ನಿಮ್ಮ ಮಾತಿಗೆ ಕವಡೆ ಕಿಮ್ಮತ್ತಿಲ್ಲ. ನಿಮ್ಮ ಮಾತನ್ನು ಯಾರೂ ಕೇಳುವುದಿಲ್ಲ. ನೀವೇನು ಇಷ್ಟು ದುರ್ಬಲರಾಗಿಬಿಟ್ಟಿದ್ದೀರಿ.

(ಗೊಂದಲ)

ಚೇರ್ಮನ್ :- ಈಗ ಮಾನ್ಯ ರಮೇಶ್ ಕುಮಾರ್‌ರವರು.

ಶ್ರೀ ಕೆ.ಆರ್. ರಮೇಶ್ ಕುಮಾರ್ :- ಸನ್ಮಾನ್ಯ ಸಭಾಧ್ಯಕ್ಷರೇ, ಈ ಕಡೆಯ ಸದಸ್ಯರು ಎಷ್ಟೊಂದು ಸಮರ್ಥವಾಗಿ, ಪರಿಣಾಮಕಾರಿಯಾಗಿ ಮಂತ್ರಿಗಳ ಗಮನವನ್ನು ಸೆಳೆಯಲು ಪ್ರಯತ್ನವನ್ನು ಪಟ್ಟರೂ ಸಹ, ಸ್ವತಃ ಕೃಷಿಕರಾಗಿದ್ದು, ಒಂದು ಸಕ್ಕರೆ ಕಾರ್ಖಾನೆಯ ಚೇರ್ಮನ್ನರೂ ಆಗಿದ್ದುಕೊಂಡು ಸಮಸ್ಯೆ ಏನೆಂದು ಅರ್ಥವಾಗಿ, ಉತ್ತರ ಕೊಡುವುದಕ್ಕೆ ಚೈತನ್ಯ ಇಲ್ಲದೇ, ಹಾರಿಕೆಯ ಉತ್ತರ, ಜಾರಿಕೆಯ ಉತ್ತರವನ್ನು ಕೊಟ್ಟು, ಸಂಕಷ್ಟದಲ್ಲಿರುವಂಥ ಕಬ್ಬು ಬೆಳೆಗಾರರಿಗೆ ಯಾವುದೇ ವಿಧವಾದಂಥ ಖಚಿತ ಪರಿಹಾರವನ್ನು ಕೊಡುವುದರಲ್ಲಿ ಸಂಪೂರ್ಣ ವಿಫಲರಾಗಿರತಕ್ಕಂಥ ಈ ನಿಷ್ಕ್ರಿಯ ಸರ್ಕಾರದ ಈ ವಿಫಲವಾದ ಹೇಳಿಕೆಯನ್ನು ವಿರೋಧಿಸಿ, ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸದಸ್ಯರು, ಶ್ರೀ ಕೆ.ಆರ್.ರಮೇಶ್ ಕುಮಾರ್‌ರವರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)

ಶ್ರೀ ಬಿ.ಆರ್. ಪಾಟೀಲ್ :- ಮಾನ್ಯ ಅಧ್ಯಕ್ಷರೇ, ಈ ಸರ್ಕಾರದ ನಿಲುವನ್ನು ಖಂಡಿಸಿ ನಾವೂ ಕೂಡ ಸಭಾತ್ಯಾಗ ಮಾಡುತ್ತೇವೆ. ಇವರು ಖಾಸಗಿ ಕಾರ್ಖಾನೆಗಳ ಮಾಲೀಕರೊಂದಿಗೆ ಶಾಮೀಲಾಗಿದ್ದಾರೆ ಎಂದು ನಾನು ನೇರವಾಗಿ ಆರೋಪ ಮಾಡುತ್ತೇನೆ.

(ಈ ಹಂತದಲ್ಲಿ ಸದಸ್ಯರಾದ ಶ್ರೀ ಬಿ.ಆರ್. ಪಾಟೀಲ್, ಹೆಚ್.ವೈ. ಮೇಟಿ ಮತ್ತು ಕೆ.ವೆಂಕಟೇಶ್‌ರವರುಗಳು ಸಭಾತ್ಯಾಗ ಮಾಡಿದರು)

(6–00 ಗಂಟೆ)

ಶ್ರೀ ಜೆ.ಸಿ. ಮಾಧುಸ್ವಾಮಿ :– ಉದಾಸಿಯವರು ಸಕ್ಕರೆ ಕ್ಷೇತ್ರದ ವಿಷಯಕ್ಕೆ ಬಂದಾಗ ಅವರ ಪರವಾಗಿ ಹೋರಾಟ ಮಾಡಿರುವವರ ನಾವು. ಉದಾಸಿಯವರೆ, ಈ ಶಾಸನ ಸಭೆಯಲ್ಲಿ ಹೋರಾಟ ಮಾಡಿರುವವರು ನಾವು. ರೈತರಿಗೆ ನೀವು ಕನಿಷ್ಠ ಧಾರಣೆ ಕೊಡುತ್ತೀರಾ, ಅವರ ಕಷ್ಟಕ್ಕೆ ಬರುತ್ತೀರಾ? ಯಾವ ಕಾಲದಲ್ಲಿ ಆ ಕಬ್ಬು ಅರೆಯುತ್ತೀರಾ? ಅಷ್ಟು ಹೇಳಿ ಎಂದರೂ ನೀವು ಹೇಳುವುದಕ್ಕೆ ವಿಫಲರಾದಿರಿ. ನಮ್ಮ ಸಕ್ಕರೆ ಮಂತ್ರಿಗಳಿಂದ, ನಿಮ್ಮಿಂದ ನಾವು ನಿರೀಕ್ಷೆ ಮಾಡಿದ್ದೆವು. ಏಕೆಂದರೆ, ನೀವು practical ಆಗಿ ಅಲ್ಲಿರುವವರು. ಸುಮಾರು 20 ವರ್ಷಗಳಿಂದ ನೀವು ಆ ಕ್ಷೇತ್ರದಿಂದ ಬಂದಿರುವವರು. ನೀವೇ ರೈತರನ್ನು ಈ ಸ್ಥಿತಿಗೆ ತಂದರೆ, ನಾಳೆ ಜನರ ಗತಿ ಏನು?

ಶ್ರೀ ಸಿ.ಎಂ. ಉದಾಸಿ :– ನಾನು ಕರೆದು ಮಾತನಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಈ ಧೋರಣೆಯನ್ನು ನಾವು ಕೂಡ ಸಹಿಸುವುದಿಲ್ಲ. ನಾವೂ walk out ಮಾಡುತ್ತೇವೆ.

(ಈ ಹಂತದಲ್ಲಿ ಶ್ರೀ ಜೆ.ಸಿ. ಮಾಧುಸ್ವಾಮಿಯವರು ಸಭಾತ್ಯಾಗ ಮಾಡಿದರು)

ಶ್ರೀ ಶಿವಾನಂದ ಎಸ್. ಪಾಟೀಲ್ :– ಹೈಕೋರ್ಟ್ ಆರ್ಡರ್ ಅನ್ನು misuse ಮಾಡಿಕೊಂಡವನ ಮೇಲೆ action ತೆಗೆದುಕೊಳ್ಳುವ...

ಶ್ರೀ ಸಿ.ಎಂ. ಉದಾಸಿ :– ಮಾತನಾಡಿ ಆಮೇಲೆ action ತೆಗೆದುಕೊಳ್ಳುತ್ತೇನೆ.

(ಗೊಂದಲ)

ಶ್ರೀ ಶಿವಾನಂದ ಎಸ್. ಪಾಟೀಲ್ :– ಮತ್ತೆ, ನೀವು co-operative field ಬಗ್ಗೆ ಮಾತನಾಡುವವರು. ತಾವೂ cooperative field ನಿಂದ ಬಂದಿರುವವರು.

(ಗೊಂದಲ)

ಶ್ರೀ ಜಯಪ್ರಕಾಶ್ ಹೆಗ್ಡೆ :– ನಾನು ಪ್ರಾರಂಭದಲ್ಲೇ ಉದಾಸಿಯವರಿಂದ ನಿರೀಕ್ಷೆಯನ್ನು ಮಾಡಿದ್ದೇನೆಂದು ಹೇಳಿದೆ. ಹಾಲಿ ರೈತರ ಬಗ್ಗೆಯೂ ಏನೂ ಹೇಳಲಿಲ್ಲ. ನಮ್ಮ ಸಕ್ಕರೆ ಕಾರ್ಖಾನೆಗಳನ್ನು ಖಾಸಗೀಕರಣ ಮಾಡಿದ ಮೇಲೆ ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಬಗ್ಗೆ ಏನಾಯಿತೆಂಬ ತಮಗೆ ಗೊತ್ತಿದೆ. ಅಲ್ಲಿ ರೈತರ ಹಳೆಯ ಬಾಕಿಯನ್ನು,

ಕಾರ್ಮಿಕರ ಸಂಬಳದ ಬಾಕಿಯನ್ನು, ಸಹಕಾರಿ ಸಂಸ್ಥೆಗಳಿಂದ ಏನು ಸಾಲವನ್ನು ಪಡೆದಿತ್ತು ಇದ್ಯಾವುದಕ್ಕೂ ಏನೂ ಉತ್ತರವನ್ನು ಹೇಳದಿದ್ದರಿಂದ ನಾನೂ ಅದನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಶ್ರೀ ಕೆ. ಜಯಪ್ರಕಾಶ್ ಹೆಗ್ಡೆಯವರು ಸಭಾತ್ಯಾಗ ಮಾಡಿದರು)

(ಗೊಂದಲ)

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು, ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ವಾಟಾಳ್ ನಾಗರಾಜ್, ಶ್ರೀ ಕೆ. ಜಯಪ್ರಕಾಶ್ ಹೆಗ್ಡೆಯವರು ಸದನಕ್ಕೆ ಆಗಮಿಸಿದರು)

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ :- ದಯವಿಟ್ಟು, Calling attention ಗೆ ಅವಕಾಶ ಕೊಡಿ. 3 ದಿವಸದಿಂದ ಕೊಟ್ಟಿಲ್ಲ.

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್ :- ನಾವು protest ಮಾಡಿ ಹೊರಗೆ ಹೋಗಿದ್ದೇವೆ, you take this step. What is this? You have to guide him (Hon'ble Chairman) I say. He is in the panel.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು :- ಛೇರ್ಮನ್‌ರವರಿಗೆ ಗೌರವ ಕೊಟ್ಟು ಮಾತನಾಡಿ. (ಗೊಂದಲ) ನಾಚಿಕೆಯಾಗುವುದಿಲ್ಲವೆಂದರೆ, ಇದು ಛೇರ್ಮನ್‌ರವರಿಗೆ ಗೌರವ ತೋರಿಸುವ ವಿಧಾನವೇ ಇದು? (ಗೊಂದಲ) ನಾಚಿಕೆ ಆಗುವುದಿಲ್ಲವೆಂದಲ್ಲ. (ಗೊಂದಲ) ಛೇರ್ಮನ್‌ರವರಿಗೆ ನಾವೂ ಗೌರವ ಕೊಡಬೇಕು... (ಗೊಂದಲ) ಆ ಪೀಠಕ್ಕೆ ಗೌರವ ಕೊಡಬೇಕು. (ಗೊಂದಲ) ನಾವು ಪೀಠಕ್ಕೆ ಗೌರವ ಕೊಡುವುದನ್ನು ಮೊದಲು ಕಲಿಯಬೇಕು... (ಗೊಂದಲ) ಪ್ರತಿಭಟಿಸಿ, ಬೇಡವೆಂದಲ್ಲ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ಅವರಿಗೇನೋ ಗೊತ್ತಿಲ್ಲ, ನೀವು, don't you have the courtesy of calling us? Bill ಇದೆ, ಅವರನ್ನು ಕರೆಯಿರಿ ಎಂದು ಹೇಳುವ ಸೌಜನ್ಯ ಬೇಡವೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಜಗದೀಶ್ ಶೆಟ್ಟರ್‌ರವರು ವಿರೋಧ ಪಕ್ಷದ ನಾಯಕರಾಗಿದ್ದರು. ಯಡಿಯೂರಪ್ಪನವರೂ ಇಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು. ಇದರ ಬಗ್ಗೆ ಸಾಮಾನ್ಯ ನಡವಳಿಕೆ ಗೊತ್ತಿಲ್ಲದೇ ಸದನವನ್ನು ದಾರಿ ತಪ್ಪಿಸುವುದೇ? ನೀವು ಸದನವನ್ನು ದಾರಿ ತಪ್ಪಿಸುತ್ತಿದ್ದೀರಿ. ಹಾಗಾದರೆ, ನಾವು ಹೊರಗೆ ಹೋಗೋಣವೇ? ನೀವೇ ಪಾಸ್ ಮಾಡಿಕೊಳ್ಳುತ್ತೀರಾ? ಮಾಡಿಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಮಗೆ ಗೌರವ ಬೇಡವೇ? ಅಷ್ಟರೊಳಗೆ ಬೇರೆ ಏನಾದರೂ Calling attention ಏನಾದರೂ ತೆಗೆದುಕೊಂಡು ಚರ್ಚೆ ಮಾಡುವುದಕ್ಕಾಗುತ್ತಿರಲಿಲ್ಲವೇ?

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಇದೊಂದು ಸಾಮಾನ್ಯ ತಿಳುವಳಿಕೆ.

(ಗೊಂದಲ)

ಛೇರ್ಮನ್ :– ನಿಮ್ಮ ನಾಯಕರು ಮಾತನಾಡುತ್ತಿದ್ದಾರೆ. ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :– Debate ಮಾಡದೇ Bill pass ಮಾಡಿಕೊಂಡರೆ ಅದಕ್ಕೆ objection ಮಾಡಬಹುದು. Bill introduction ಮಾಡುತ್ತಿದ್ದೇವಷ್ಟೆ. ಇದರ ಮೇಲೆ ನಾಳೆ debate ಮಾಡಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ಸಂಸದೀಯ ನಡವಳಿಕೆಯಲ್ಲಿ.....

ಶ್ರೀ ಜಗದೀಶ್ ಶೆಟ್ಟರ್ :– Debate ಮಾಡಲಿಕ್ಕೆ ನಿಮಗೆ ಅವಕಾಶವಿದ್ದೇ ಇದೆ. Bill ಮೇಲೆ debate ಮಾಡಿ. ಯಾರು ಬೇಡವೆಂದವರು?

(ಗೊಂದಲ)

ಛೇರ್ಮನ್ :– ನಿಮ್ಮ ನಾಯಕರು ಮಾತನಾಡುತ್ತಿದ್ದಾರೆ, ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ಸಂಸದೀಯ ನಡವಳಿಕೆಗಳಲ್ಲಿ ಸಭಾತ್ಯಾಗ ಮಾಡತಕ್ಕಂಥದ್ದು, ಆ ವಿಷಯದಲ್ಲಿ ನಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿ ಹೊರಗೆ ಹೋಗಿ ಬಂದೆವು. ನೀವು consideration ಗೆ ಇಡದೇ ಇರಬಹುದು, introduction ಇಡಬಹುದು. ಕೆಲವು ವಿಧೇಯಕಗಳ introduction ಗೆ ವಿರೋಧ ಮಾಡತಕ್ಕಂಥ ಹಕ್ಕು ನಮಗಿದೆ.

ನಾವು ಹೊರಗೆ ಹೋಗಿ ಇನ್ನೂ ಒಂದು ನಿಮಿಷ ಕೂಡ ಆಗಿಲ್ಲ, ನಾವು ವಾಪಸ್ ಬರುವಷ್ಟರೊಳಗಾಗಿ ನೀವು Bill introduce ಮಾಡಿಸುವುದಕ್ಕೆ ಪ್ರಯತ್ನಪಟ್ಟರೆ, ಅದೂ panel ನಲ್ಲಿರತಕ್ಕಂಥವರು, ಅವರಿಗೆ ಸಂಪೂರ್ಣ ಅಧಿಕಾರವಿರುತ್ತದೆ. That is a different thing. ಅದು unethical ಅಲ್ಲವೇ? What is the hurry? (ಗೊಂದಲ) ಇವರಿಗೇನಾದರೂ ಸ್ವಲ್ಪವಾದರೂ ತಿಳಿದುಕೊಳ್ಳಬೇಕೆನ್ನುವ ತಾಳ್ಮೆ ಇದೆಯೇ?

(ಗೊಂದಲ)

ಛೇರ್ಮನ್ :- ಅವರು ಮಾತನಾಡುತ್ತಿದ್ದಾರೆ. ತಾವು ಕುಳಿತುಕೊಳ್ಳಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :- ನೋಡಿ, ಈ ತರಹ ಆಗಿದ್ದಾರೆ, ಇವರು. ಏನು ಹೆಚ್ಚು ಕಡಿಮೆಯಾಗಿದೆ ಎಂದು ತಿಳಿದುಕೊಳ್ಳಬೇಕೆನ್ನುವ ತಾಳ್ಮೆ ಇವರಿಗಿಲ್ಲ.

ಶ್ರೀ ಎಂ.ಪಿ. ರೇಣುಕಾಚಾರ್ಯ :- ಅವರು ಹಿರಿಯರು. ಅವರ ಬಗ್ಗೆ ಗೌರವವಿದೆ. (ಗೊಂದಲ) ಹತ್ತಾರು ವರ್ಷಗಳಿಂದ ನೀವು ಅಧಿಕಾರ ನಡೆಸಿದ್ದೀರಿ. (ಗೊಂದಲ)... ಅನುಕೂಲವಾಗಿ ಮಾತನಾಡುತ್ತೀರಿ.

ಶ್ರೀ ಎ. ಪಾಪರೆಡ್ಡಿ :- ನಾವೇನೂ ಮಾತನಾಡಲೇಬಾರದೆ?

ಛೇರ್ಮನ್ :- ತಾವೂ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :- ತಮಗೆ ಹೆಚ್ಚಿನ ಅನುಭವವಿರುವುದಿಲ್ಲ. ನಮ್ಮ ಪದ್ಧತಿಯ ಪ್ರಕಾರ panel ನಲ್ಲಿರುತ್ತೀರಿ, ಬಂದು ಕುಳಿತುಕೊಳ್ಳುತ್ತೀರಿ. ತಮ್ಮನ್ನು ಗೌರವಿಸುವುದು ನಮ್ಮ ಕರ್ತವ್ಯ. Secretariat ನವರು ನಿಮಗೆ guide ಮಾಡಬೇಕು. ಸಾರ್, ಅವರು ಒಂದು ನಿಮಿಷದಲ್ಲಿ ಬರಬಹುದು. ಅಲ್ಲಿಯವರೆಗೆ ಬೇರೆ ವಿಚಾರದ ಬಗ್ಗೆ ತೆಗೆದುಕೊಳ್ಳೋಣ ಎಂದು ಹೇಳಬೇಕು. ತರಾತುರಿಯಲ್ಲಿ ಈ ತರಹ ಮಾಡತಕ್ಕಂಥದ್ದು, ಇಲ್ಲಿಯವರೆಗೆ ನಡೆದುಕೊಂಡು ಬಂದಿರುವ ಈ ಸದನದ ಇತಿಹಾಸ, ಹಿರಿಮೆ ಏನಿದೆ ಅದಕ್ಕೆ ತಕ್ಕುದಾದುದಲ್ಲ. ನಿಮ್ಮ ವೈಯಕ್ತಿಕ ನಡತೆ ನಮಗೆ ಗೊತ್ತಿರುವುದರಿಂದ, ತಾವು ಉದ್ದೇಶಪೂರ್ವಕವಾಗಿ ಮಾಡಿದ್ದೀರಿ ಎಂದು ನಾನು ಹೇಳುವುದಕ್ಕೆ ತಯಾರಿಲ್ಲ. ಜಗದೀಶ್ ಶೆಟ್ಟರ್‌ರವರು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದವರು. Introduction ಅಷ್ಟೇ ಮಾಡಿದ್ದೇವೆಂದು ಸಮರ್ಥನೆ ಮಾಡುವುದು ಸರಿಯಲ್ಲ. Even making a feeble attempt to introduce the Bill is highly unethical. Such things should not happen. ಆದದ್ದನ್ನು ಮರೆತು, ದಯಮಾಡಿ, you can take up the business. We are here to co-operate with you.

ಶ್ರೀ ದಿನೇಶ್ ಗುಂಡೂರಾವ್ :- ನನ್ನದೊಂದು ಬೇಡಿಕೆ ಇದೆ.

ಶ್ರೀ ಹಂಪನಗೌಡ ಬಾದರ್ಲಿ :- ರಾಯಚೂರು ಜಿಲ್ಲೆಯಲ್ಲಿ (ಗೊಂದಲ) ಕಳಪೆ ಬೀಜಗಳಿಂದ ರೈತರ ಸಾವಿರಾರು ಎಕರೆ ಭತ್ತದ ಬೆಳೆ ನಷ್ಟವಾಗಿದೆ. ದಯವಿಟ್ಟು ಇದರ ಬಗ್ಗೆ ಮಾತನಾಡುವುದಕ್ಕೆ allow ಮಾಡಿ.

ಶ್ರೀ ದಿನೇಶ್ ಗುಂಡೂರಾವ್ :- ನನ್ನದೊಂದು ಗಮನ ಸೆಳೆಯುವ ಸೂಚನೆ ಇದೆ. ಅದು ಮೂರು ದಿವಸಗಳಿಂದ ಬರುತ್ತಿದೆ. ನಾವಿಲ್ಲಿ ಪ್ರತಿ ದಿವಸ ಬಂದು ಕಾಯುತ್ತಿದ್ದೇವೆ. ಈಗ ದಯವಿಟ್ಟು ಅದನ್ನು allow ಮಾಡಿ. 4-5 ಜನ ಮಾತನಾಡುವವರಿದ್ದೇವೆ.

ಶ್ರೀ ಹಂಪನಗೌಡ ಬಾದರ್ಲಿ :- ಇಲ್ಲಿಯವರೆಗೆ 3 ತಾಸಿನವರೆಗೆ....

ಶ್ರೀ ದಿನೇಶ್ ಗುಂಡೂರಾವ್ :- ಒಬ್ಬೊಬ್ಬರಿಗೆ ಮಾತನಾಡುವುದಕ್ಕೆ 10-10 ನಿಮಿಷ ಅವಕಾಶ ಕೊಡಿ. (ಗೊಂದಲ) ಏಕೆ ಅದಕ್ಕೆ ನೀವು ಅಡಚಣೆ ಮಾಡುತ್ತೀರಿ?

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳ ಸಚಿವರು) :- ಕಳೆದ ಅಧಿವೇಶನದಿಂದ ಒಂದೇ ಒಂದು ವಿಧೇಯಕದ ಬಗ್ಗೆ ಇಲ್ಲಿ ಚರ್ಚೆಯಾಗಲಿಲ್ಲ. ಪ್ರತಿ ದಿನ ಒಂದಿಲ್ಲೊಂದು ಬಹಳ ಮಹತ್ವವಾದಂಥ ಸಮಸ್ಯೆಗಳೆಲ್ಲ ಇದ್ದೇ ಇರುತ್ತವೆ. ಇವತ್ತು ಕಬ್ಬು ಬೆಳೆಗಾರರಿಗೆ ಸಂಬಂಧಪಟ್ಟಂತೆ ಬಹಳ ಕಾಲಹರಣವಾಗಿದೆ. ಎಲ್ಲರೂ ಹೇಳಿರತಕ್ಕಂಥದ್ದನ್ನು ನಾವು ಒಪ್ಪಿಕೊಳ್ಳುತ್ತೇವೆ. ಅದು ಬಹಳ ಮುಖ್ಯವಾಗಿರತಕ್ಕಂಥ ಸಮಸ್ಯೆ ಎನ್ನುವುದನ್ನು ಒಪ್ಪಿಕೊಳ್ಳುತ್ತೇವೆ. ಕಾರ್ಯಕಲಾಪಗಳಲ್ಲಿ ಇವತ್ತಿನವರೆಗೆ ಒಂದು ವಿಧೇಯಕವನ್ನೂ ಮಂಡಿಸಲಿಕ್ಕೂ ಆಗುತ್ತಿಲ್ಲ, ಪರ್ಯಾಲೋಚಿಸಲಿಕ್ಕೂ ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ತಾವೇನು ವಿಚಾರವನ್ನು ಪ್ರಸ್ತಾಪ ಮಾಡುತ್ತೀರಿ, ಅದನ್ನು ತಾವು ಬೇಕಾದರೆ ತಮ್ಮ ಕೊಠಡಿಗೆ ಕರೆಸಿ, ಅದಕ್ಕೆ ಸಂಬಂಧಪಟ್ಟಂಥ ಮಂತ್ರಿಗಳನ್ನು ಕರೆಸಿ ಅವರ ಆತಂಕ, ಸಮಸ್ಯೆ ಏನು ಇದೆ, ಅದನ್ನು ಬೇಕಾದರೆ ಪರಿಹರಿಸಬಹುದು. ಅದನ್ನು ತಾವು ಅಲ್ಲಿ ಮಾಡುವುದರ ಜೊತೆಗೆ ಈಗ ವಿಧೇಯಕವನ್ನು ಪರ್ಯಾಲೋಚಿಸುವುದಕ್ಕೆ ತೆಗೆದುಕೊಳ್ಳುವುದಾಗಿದ್ದರೆ ಆಗುತ್ತದೆ. ದಯವಿಟ್ಟು, ಅದಕ್ಕೆ ಸಹಕರಿಸಿ.

(ಗೊಂದಲ)

ಶ್ರೀ ಹಂಪನಗೌಡ :- ಕಳಪೆ ಬೀಜಗಳಿಂದ ಸುಮಾರು 10 ಸಾವಿರ ಎಕರೆಯಲ್ಲಿ ಭತ್ತದ ಬೆಳೆ ನಷ್ಟವಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ :– ಆಗಿದೆ. ಅದೆಲ್ಲವೂ ನಿಜ.

(ಗೊಂದಲ)

ಶ್ರೀ ಹಂಪನಗೌಡ :– ಕಳೆದ 10 ದಿನಗಳಿಂದ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು request ಮಾಡಿಕೊಳ್ಳುತ್ತಿದ್ದೇವೆ.

(ಗೊಂದಲ)

ಶ್ರೀ ಎನ್.ಎಸ್.ಬೋಸರಾಜು :– ಸುಮಾರು 10 ದಿವಸಗಳಿಂದ ಚರ್ಚೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದು ಅತ್ಯಂತ ಮಹತ್ವದ್ದು ಇದೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :– ಮಹತ್ವಲ್ಲವೆಂದು ನಾನು ಹೇಳುವುದಿಲ್ಲ. ನಾನು ಕೇಳಿಕೊಳ್ಳುವುದಿಷ್ಟೆ, ಅದೇನೆಂದರೆ, ಸಂಬಂಧಪಟ್ಟ ಕೃಷಿ ಮಂತ್ರಿಗಳನ್ನು ನಿಮ್ಮ ಸಮಕ್ಷಮದಲ್ಲಿ Speaker ತಮ್ಮ ಕೊಠಡಿಗೆ ಕರೆಸುತ್ತಾರೆ. ನಿಮ್ಮ ಆತಂಕವೇನಿದೆ ಎನ್ನುವುದನ್ನು ಹೇಳಿದ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಹಂಪನಗೌಡ ಬಾದರ್ಲಿ :– ಇದು ಅಜೆಂಡಾದಲ್ಲಿ ಬಂದಿದೆ.

ಶ್ರೀ ಎಂ.ಪಿ. ಪ್ರಕಾಶ್ :– ಅಜೆಂಡಾದಲ್ಲಿ ಬಂದಿದೆ. ಆದರೆ priorities ಯಾವುದು? ಇಲ್ಲಿಯವರೆಗೆ ಸರ್ಕಾರದ ವಿಧೇಯಕ ಒಂದು ಕೂಡ ಚರ್ಚೆಗೆ ಬಂದಿಲ್ಲ. ಆದ್ಯತೆ ಇರತಕ್ಕಂಥದ್ದರಲ್ಲಿ ಸರ್ಕಾರಿ ಕಾರ್ಯಕಲಾಪಗಳು ಸಹಿತ ಇವೆ. 6 ಕೋಟಿ ಜನಸಂಖ್ಯೆ ಇರತಕ್ಕಂಥ ಈ ರಾಜ್ಯದಲ್ಲಿ ಎಲ್ಲಿಯಾದರೂ ಒಂದು ಕಡೆ ಈ ವಿಚಾರಗಳು ನಡೆದೇ ನಡೆಯುತ್ತವೆ. ಹಾಗಾದರೆ ಬೆಳಿಗ್ಗೆಯಿಂದಲೂ ಅದೇ ಸ್ಥಿತಿಯನ್ನು ಮಾತಾಡಿಕೊಂಡು ಇರೋಣವೇ?